MOTION TO EXTEND TIME FOR PRESENTATION OF THE REPORT OF JOINT SELECT COMMITTEE ON MYSORE SECONDARY EDUCATION EXAMINATION BOARD BILL, 1966

S. R. KANTHI (Minister for Education).—Sir, I beg to move :

"That under the second proviso to sub-rule 1(*a*) of Rule 238 read with Rule 247 of the Rules of Procedure and Conduct of Business in the Mysore Legislative Assembly that the time limit for presentation of Report of the Joint Select Committee on the Mysore Secondary Education Examination Board Bill, 1966 be extended till 18th March 1966."

Mr. SPEAKER.—The question is :

"That under the second proviso to sub-rule 1(*a*) of Rule 238 read with Rule 247 of the Rules of Procedure and Conduct of Business in the Mysore Legislative Assembly that the time limit for presentation of Report of the Joint Select Committee on the Mysore Secondary Education Examination Board Bill, 1966 be extended till 18th March 1966."

The motion was adopted.

BUDGET ESTIMATES FOR 1966-67

Motions for Demands for Grants—Demand Nos. 12, 13 and 41 A

Sri M. V. RAMA RAO (Minister for Home).—Sir, on the recommendation of the Governor of Mysore, I beg to move :

DEMAND No. 12—22 JAILS.

"That a sum not exceeding Rs. 57,73,500 be granted to the Government to defray the charges which will come in course of payment during the financial year for the period ending 31st day of March 1967, in respect of 'Jails'."

DEMAND No. 13—23 POLICE.

"That a sum not exceeding Rs. 6,50,10,000 be granted to the Government to defray the charges which will come in course of payment during the financial year for the period ending 31st day of March 1967, in respect of 'Police'."

(SRI M. V. RAMA RAO)

DEMAND NO. 41 A—78 A EXPENDITURE CONNECTED WITH THE NATIONAL EMERGENCY

"That a sum not exceeding Rs. 13,77,000 be granted to the Government to defry the charges which will come in course of payment during the financial year for the period ending 31st day of March 1967, in respect of 'Expenditure connected with the National Emergency'."

Mr. SPEAKER.— Motion moved :

"That on the recommendation of the Governor of Mysore a sum not exceeding Rs. 57,73,500 be granted to the Government to defray the charges which will come in course of payment during the financial year for the period ending 31st day of March 1967, in respect of 'Jails."

"a sum not exceeding Rs. 6,50,10,000 be granted to the Government to defray the charges which will come in course of payment during the financial year for the period ending 31st day of March 1967, in respect of 'Police'."

"a sum not exceeding Rs. 13,77,000 be granted to the Government to defray the charges which will come in course of payment during the financial year for the period ending 31st day of March 1967, in respect of 'Expenditure connected with the National Emergency!."

2-00 P.M.

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಮಾನ್ಯ ಅಧ್ಯಕ್ಷರೇ, ಗೃಹಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರತಕ್ಕ ಪೋಲೀಸು ಖಾತೆ ಮತ್ತು ಜೈಲು ಖಾತೆಯ ಬೇಡಿಕೆಗಳಲ್ಲಿ ನಾನು ಪ್ರಪ್ರಥಮವಾಗಿ ಪೋಲೀಸುಖಾತೆಯ ಬೇಡಿಕೆಗಳನ್ನು ವಿರೋಧಿಸುತ್ತೇನೆ.

ದೇಶದಲ್ಲಿ ಪೋಲೀಸಿನವರ ಕರ್ತವ್ಯ ಮತ್ತು ಪೋಲೀಸಿನವರ ನಿಷ್ಠೆ ಬಹು ಪ್ರಾಮುಖ್ಯವಾದುದು. ನಮ್ಮ ದೇಶದಲ್ಲಿ ನ್ಯಾಯ ಮತ್ತು ಕಾನೂನನ್ನು ರಕ್ಷಣೆ ಮಾಡತಕ್ಕ ಜವಾಬುದಾರಿ ಪೋಲೀಸಿನವರದ್ದಾಗಿದೆ. ನಮ್ಮ ದೇಶದಲ್ಲಿ ನ್ಯಾಯಕ್ಕೆ ಮತ್ತು ಕಾನೂನಿಗೆ ಸಲ್ಲಬೇಕಾದ ಗೌರವ ಸಲ್ಲಬೇಕಾದರೆ ಪೋಲೀಸಿನವರ ದಕ್ಷತೆ ಎಷ್ಟು ಮಟ್ಟಿಗೆ ಇದೆಯೋ ಅಷ್ಟೇ ಗೌರವ ಈ ದೇಶದಲ್ಲಿ ನ್ಯಾಯ ಮತ್ತು ಕಾನೂನುಗಳಿಗೆ ಸಲ್ಲುತ್ತದೆ. ಇವೊತ್ತು ದೇಶದಲ್ಲಿ ಇರತಕ್ಕ ಪರಿಸ್ಥಿತಿಯನ್ನು ನಾವು ಅವಲೋಕಿಸಿದರೆ ನಮ್ಮ ಪೋಲೀಸು ಖಾತೆಯವರ ದಕ್ಷತೆ ಎಷ್ಟು ಮಟ್ಟಿಗೆ ಇದೆ, ಆ ದೊಡ್ಡ ಜವಾಬುದಾರಿಗಳನ್ನು ಹೊರತಕ್ಕ ಸ್ಥಾನವನ್ನು ಅವರು ಎಷ್ಟು ಮಟ್ಟಿಗೆ ಹೊಂದಿದ್ದಾರೆ ಎನ್ನುವುದನ್ನು ನಾವು ನೋಡಬೇಕಾಗಿದೆ.

[MR. DEPUTY SPEAKER IN THE CHAIR]

ಇವೊತ್ತು ನಾವು ಯಾವ ಕಾನೂನನ್ನೇ ಮಾಡಲಿ, ಆ ಕಾನೂನಿನ ರಕ್ಷಣೆ ಮತ್ತು ಆ ಕಾನೂನನ್ನು ಜಾರಿಯಲ್ಲಿ ತರಬೇಕಾದರೆ ಪೋಲೀಸಿನವರು ಆ ವಿಷಯದಲ್ಲಿ ತಮ್ಮ ಪಾಲಿನ ಕರ್ತವ್ಯವನ್ನು ಮಾಡಿ ನ್ಯಾಯವನ್ನು ಜನತೆಗೆ ದೊರಕಿಸಿಕೊಡುವ ಗೌರವ ಅವರಿಗೆ ಸೇರಬೇಕಾಗುತ್ತದೆ. ನಮ್ಮ ದೇಶದಲ್ಲಿ ಇರತಕ್ಕ ಪೋಲೀಸಿನವರಲ್ಲಿ, ಅದರಲ್ಲೂ ಕೆಳದರ್ಜೆಯಲ್ಲಿರುವವರಲ್ಲಿರುವ ಲಂಚಕೋರತನದಿಂದ ಈ ದೇಶದ ಜನತೆಗೆ ಸ್ನೇಹಿತರಂತೆ ಇರಬೇಕಾದ ಪೋಲೀಸಿನವರು ತೋರಿಸುವ ವರ್ತನೆಯಿಂದ ಇವೊತ್ತು ಪೋಲೀಸಿನವರು ಜನರ ಸ್ನೇಹಿತರಾಗಿಲ್ಲ. ಪೋಲೀಸಿನವರ ಖಾಕೀ ಬಟ್ಟೆಯನ್ನು

ಕಂಡರೆ ಅವರು ಜನತೆಯ ಶತ್ರುವೋ ಎಂದು ಪೋಲೀಸಿನವರನ್ನು ಜನತೆ ತಿಳಿದುಕೊಂಡಿದೆ. ಪೋಲೀಸಿನವರ ಸಂಬಂಧ ಜನರಲ್ಲಿ ಇವೊತ್ತು ಬಹಳ ಕೆಡುತ್ತಾ ಹೋಗುತ್ತಿದೆ. ಪೋಲೀಸು ಸ್ಟೇಷನ್ನಿಗೆ ಹೋದರೆ ಅದು ಪೋಲೀಸಿನವರು ಜನಕ್ಕೆ ಜುಲ್ಮಾನೆಯನ್ನು ಹಾಕುವ ಹಾಗೂ ಶಿಕ್ಷೆಗಳನ್ನು ಮಾಡುವ ಮನೆ ಎನ್ನತಕ್ಕ ಭಾವನೆ ಜನರಲ್ಲಿ ಇಂದು ಬೆಳೆದು ಬಂದಿದೆ. ಪೋಲೀಸು ಖಾತೆಯಲ್ಲಿರುವ ಜನರ ವರ್ತನೆಯಲ್ಲಿ ಮಾರ್ಪಾಡು ಆದ ಹೊರತು ಜನಕ್ಕೆ ಸೌಕರ್ಯಗಳು ದೊರೆಯುವುದಿಲ್ಲ. ಆದುದರಿಂದ ಪೋಲೀಸು ಖಾತೆಯ ಆಡಳಿತವನ್ನು ಬದಲಾವಣೆ ಮಾಡಿ ಒಳ್ಳೆಯ ಕೆಲಸಗಳು ಅವರಿಂದಾಗುತ್ತದೆ ಎಂದು ಜನತೆಗೆ ತೋರಿಬರುವವರೆಗೂ ಈಗಿನ ವ್ಯವಸ್ಥೆಯಿಂದ ಜನಕ್ಕೆ ಉಪಯೋಗ ಖಂಡಿತವಾಗಿಯೂ ಆಗಲು ಸಾಧ್ಯವಿಲ್ಲ ಎಂದು ಇಲ್ಲಿ ಹೇಳಬೇಕಾಗಿದೆ. ಇವೊತ್ತು ನಮ್ಮ ದೇಶದಲ್ಲಿರತಕ್ಕ ಪೋಲೀಸು ಕಾನ್‌ಸ್ಟೇಬಲ್‌ಗಳಾಗಲಿ, ಸಬ್ ಇನ್ಸ್‌ಪೆಕ್ಟರಾಗಲೀ, ಇನ್ಸ್‌ಪೆಕ್ಟರಾಗಲೀ ಇವರುಗಳ ವರ್ತನೆಯಿಂದಾಗಿ ಪೋಲೀಸಿನವರು ಕಾನೂನು ರಕ್ಷಣೆ ಮಾಡುವುದಿಲ್ಲ ಎನ್ನುವುದು ಕಾಣುತ್ತಿದೆ. ನಮಗೆ ಇವೊತ್ತು ಏನು ಕಾಣುತ್ತಿದೆ ಎಂದರೆ, ಈ ಪೋಲೀಸಿನವರು ಬೆಳಗ್ಗೆ ಎದ್ದರೆ ಯಾರಿಗಾದರೂ ಹಿಂಸೆ ಕೊಟ್ಟು ಅವರಿಂದ ಲಂಚ ಪಡೆಯುತ್ತಿದ್ದಾರೆ ಮತ್ತು ಯಾವ ರೀತಿಯಲ್ಲೂ ಇವರಿಂದ ಜನತೆಗೆ ಉಪಯೋಗವಾಗುವುದಿಲ್ಲ. ದಿನಬೆಳಗಾದರೆ ಲಂಚ ಎಷ್ಟು ಶೇಖರಣೆ ಮಾಡಬೇಕು ಯಾರನ್ನು ಹಿಂಸೆ ಮಾಡಬೇಕು ಎನ್ನುವುದರಲ್ಲೇ ಇರುತ್ತಾರೆ. ಇಂತಹ ಸಣ್ಣ ಅಧಿಕಾರಿಗಳಿಂದ ಜನತೆಗೆ ಖಂಡಿತ ಅನುಕೂಲಗಳು ದೊರಕುವುದಿಲ್ಲ. ಪೋಲೀಸಿನವರು ಜನತೆಗೆ ಯಾವ ರೀತಿಯಾಗಿ ಗೌರವ ಕೊಡಬೇಕು ಮತ್ತು ಎಷ್ಟು ಜನಕ್ಕೆ ಉಪಕಾರ ಮಾಡಬಹುದು ಎನ್ನುವ ಭಾವನೆಯೇ ಪೋಲೀಸಿನವರಲ್ಲಿ ಖಂಡಿತವಾಗಿಯೂ ಇಲ್ಲ. ಈ ಪೋಲೀಸು ಖಾತೆಯನ್ನು ನಮ್ಮ ಈಗಿನ ಗೃಹಸಚಿವರು ವಹಿಸಿಕೊಂಡಾದ ಮೇಲಾದರೂ ಪೋಲೀಸಿನವರ ಭಾವನೆಯಲ್ಲಿ ಸ್ವಲ್ಪ ಮಾರ್ಪಾಡಾಗಿ ಅನುಕೂಲವಾಗಬಹುದು ಮತ್ತು ಈ ಖಾತೆಯನ್ನು ಉತ್ತಮಗೊಳಿಸುವುದಕ್ಕೆ ಸಾಧ್ಯವಿದೆ ಎಂದು ಭಾವಿಸಿದ್ದೆವು. ಆದರೆ ಹಾಗೇನೂ ಆಗಿಲ್ಲ. ರಾಯಲ್ ಕಮಿಷನ್ನಿನವರು ಪೋಲೀಸು ಇಲಾಖೆಯ ಬಗ್ಗೆ ಒಂದು ರಿಪೋರ್ಟು ಕೊಟ್ಟಿದ್ದಾರೆ. ಅದರಲ್ಲಿ ಈ ರೀತಿ ಇದೆ :

> Police power should be controlled and confined so as not to interfere arbitrarily with personal freedom. The police should be powerful but not oppressive; they must form part and parcel of the people.

ಇದರಲ್ಲಿ ಪೋಲೀಸಿನವರು ದೇಶದಲ್ಲಿ ಯಾವ ರೀತಿಯಾಗಿ ಅವರ ಕರ್ತವ್ಯವನ್ನು ನಿರ್ವಹಿಸಬೇಕು ಎನ್ನುವುದನ್ನು ಅರ್ಥಗರ್ಭಿತವಾಗಿ ಹೇಳಿದ್ದಾರೆ. ದೇಶದಲ್ಲಿ ನ್ಯಾಯ ಮತ್ತು ಕಾನೂನು ರಕ್ಷಣೆ ಮಾಡತಕ್ಕ ಪೋಲೀಸಿನವರು ಎಷ್ಟುಮಟ್ಟಿಗೆ ತಮ್ಮ ಕರ್ತವ್ಯವನ್ನು ವಿಚಕ್ಷಣೆಯಿಂದ ಮಾಡಬೇಕು ಹೇಗೆ ಮಾಡಬೇಕು ಎಂದು ಇಲ್ಲಿ ಹೇಳಿರುವುದಕ್ಕೆ ತದ್ವಿರುದ್ಧವಾಗಿ ನಮ್ಮ ದೇಶದಲ್ಲಿ ಕೆಲಸಗಳು ನಡೆಯುತ್ತಿವೆ. ಹಿಂದಿನ ಕಾಲದಲ್ಲಿ ಪೋಲೀಸಿನವರು ಎಷ್ಟುಮಟ್ಟಿಗೆ ಇದ್ದರು ಎನ್ನುವುದರ ಬಗ್ಗೆ ಒಬ್ಬ ಕವಿ ಎಂದರೆ ವರ್ಡ್ಸ್‌ವರ್ತ್ Peace office of his day; Sttae guardian of the public peace ಎಂದು ಹೇಳಿದ್ದಾರೆ. ಪೋಲೀಸಿನವರು ದೇಶದಲ್ಲಿ ಒಂದು ಶಾಂತಿದೂತ ಎನ್ನತಕ್ಕ ಭಾವನೆ ಜನರಲ್ಲಿ ಬಂದು ಅವರು ಅದೇ ನೀತಿಯನ್ನು ಅನುಸರಿಸಿಕೊಂಡು ಬರಬೇಕು. ಅಂತಹ ಒಂದು ನೀತಿಯನ್ನು ನಮ್ಮ ದೇಶದಲ್ಲಿನ ಪೋಲೀಸಿನವರು ಏತಕ್ಕಾಗಿ ಅನುಕರಣೆ ಮಾಡಿಲ್ಲ ಎನ್ನುವುದನ್ನು ಯೋಚನೆ ಮಾಡಬೇಕಾದುದು ನಮ್ಮ ಪ್ರಥಮ ಕರ್ತವ್ಯ. ಒಬ್ಬರು ನಿವೃತ್ತ ಪೋಲೀಸು ಅಧಿಕಾರಿಗಳು ಪೋಲೀಸರ ಮುಖ್ಯ ಕರ್ತವ್ಯವೇನು ಎನ್ನುವುದನ್ನು ಹೀಗೆ ಹೇಳಿದ್ದಾರೆ: ಇದು ಪೋಲೀಸು ಅಡ್ಮಿನಿಸ್ಟ್ರೇಷನ್ನು ರಿಪೋರ್ಟಿನಲ್ಲೂ ಬರುತ್ತೆ.

The maintenance of effective discipline is essential in police force to control its performance and to promote efficiency and satisfactory attainment of police objectives.

ಇವೊತ್ತು ಪೋಲೀಸು ಖಾತೆಯಲ್ಲಿ ಎಷ್ಟುಮಟ್ಟಿಗೆ ಶಿಸ್ತು ಹಾಗೂ ಸಭ್ಯತೆಗಳು ಇರಬೇಕು ಎನ್ನುವುದನ್ನು ಬಹಳ ಚೆನ್ನಾಗಿ ಇಲ್ಲಿ ಹೇಳಿದ್ದಾರೆ. ಅದರಂತೆ ನಮ್ಮಲ್ಲಿ ಇದೆಯೇ ಎಂದು ಕೇಳಬೇಕಾಗಿದೆ. ಡಿಸಿಪ್ಲಿನ್ ಎನ್ನುವುದು ನಮ್ಮಲ್ಲಿದೆಯೇ ಎಂದು ನೋಡುವುದಾದರೆ ನಮಲ್ಲಿ ಖಂಡಿತವಾಗಿಯೂ ಇಲ್ಲ ಎನ್ನತಕ್ಕದ್ದು ಚೆನ್ನಾಗಿ ಗೊತ್ತಾಗುತ್ತಿದೆ. ಯಾವ ಬಾಬನ್ನೇ ತೆಗೆದುಕೊಳ್ಳಲಿ, ಪ್ರೊಹಿಬಿಷನ್ನು ತೆಗೆದುಕೊಳ್ಳಿ, ಟ್ರಾಫಿಕ್ ಕಂಟ್ರೋಲ್ ತೆಗೆದುಕೊಳ್ಳಿ, ಹೀಗೆ ಯಾವುದನ್ನು ತೆಗೆದುಕೊಂಡರೂ ಪೋಲೀಸಿನವರು ಜನತೆಗೆ ಸ್ನೇಹಿತರಂತೆ ಸಹಾಯ ಮಾಡುತ್ತಿಲ್ಲ. ದಿನ ಬೆಳಗಾದರೆ ಪೋಲೀಸಿನವರು ಏನಾದರೂ ಒಂದು ತಪ್ಪು ಕಂಡುಹಿಡಿಯಬೇಕು ಎಂದು ದಾರಿಯಲ್ಲ ಒಂದು

(ಶ್ರೀ ಎಸ್. ಶಿವಪ್ಪ)

ಲಾರಿ ಹಿಡಿಯುವುದು ಅಲ್ಲಿ ಏನೋ ಒಂದು ನೆಪ ಹೇಳಿ ಕಾನೂನನ್ನು ವಿರೋಧ ಮಾಡಿದ್ದಾರೆ ಎಂದು ಅವರನ್ನು ಶಿಕ್ಷೆಗೆ ಒಳಪಡಿಸಿ ಅವರನ್ನು ಹಿಂಸೆ ಮಾಡುವುದೇ ಅವರ ಜವಾಬುದಾರಿ ಎಂದು ತಿಳಿದು ಮಾಡುತ್ತಿರುತ್ತಾರೆ. ಅವರಿಗೆ ದಿನಕ್ಕೆ ಬೇಕಾಗುವ ಖರ್ಚು ಬೇಕು ಎಂದು ಹೇಗಾದರೂ ಅದಕ್ಕೆ ದಾರಿ ಹುಡುಕುತ್ತಲೇ ಇರುತ್ತಾರೆ. ಏನೂ ತಪ್ಪಿಲ್ಲದಿದ್ದರೂ ಕೂಡ ಲಾರಿಯಲ್ಲಿ ಒಂದು ಗಾಜು ಒಡೆದು ಹೋಗಿದೆ ಎಂದು ಹೇಳುವುದು, ಅವರಿಗೆ ಶಿಕ್ಷೆ ವಿಧಿಸುವುದು, ಹೀಗೆ ಮಾಡುತ್ತಿರುತ್ತಾರೆ. ಹೀಗೆ ಮಾಡುತ್ತಿದ್ದರೆ ಪೋಲೀಸಿನವರಿಗೆ ದೇಶದಲ್ಲಿ ಜನರಿಂದ ಯಾವ ಗೌರವವೂ ದೊರೆಯುವುದಿಲ್ಲ. ಈಗ ಪೋಲೀಸಿನವರು ಎಂದರೆ ಹೇಗಿದೆ ಎಂದರೆ: He is an embodiment of all evils of the Society. ಅವನು ಜೂಜುಕೋರನಾಗಿದ್ದಾನೆ, ಕುಡುಕನಾಗಿದ್ದಾನೆ, ಮತ್ತು ವ್ಯಭಿಚಾರಿಯಾಗಿದ್ದಾನೆ, ಮತ್ತು ವಿಷಯಲಂಪಟನಾಗಿದ್ದಾನೆ. ಇದಕ್ಕೋಸ್ಕರ ದಿನ ಬೆಳಗಾದರೆ ಯಾವುದಾದರೂ ತಪ್ಪನ್ನು ಹುಡುಕುತ್ತಲೇ ಇರುತ್ತಾನೆ. ಏಕೆಂದರೆ, ಅವನ ಪ್ರತಿನಿತ್ಯದ ಖರ್ಚಿಗೆ ದುಡ್ಡು ಬೇಕಾಗುತ್ತದೆ. ಅವನು ನಾನು ಈಗ ಹೇಳಿದ ಮೂರು ಚಟಗಳಿಗೆ ಬಲಿಯಾಗಿರುವುದರಿಂದ ಅವನಿಂದ ಜನಕ್ಕೆ ಯಾವ ಪ್ರಯೋಜನಗಳೂ ಸಿಗುವುದಿಲ್ಲ. ಹಣ ಸಂಪಾದನೆ ಮಾಡಬೇಕು ಎನ್ನುವುದೊಂದೇ ಮನೋಭಾವ ಈ ಪೋಲೀಸಿನವರಲ್ಲಿ ಬೆಳೆದು ಬಂದಿದೆ. ಇದು ಬಹಳ ವರ್ಷಗಳಿಂದಲೂ ನಡೆದುಕೊಂಡು ಬಂದಿದೆ, ಇದನ್ನು ತಪ್ಪಿಸಬೇಕಾದರೆ ಬಹಳ ಕಷ್ಟವಾಗುತ್ತದೆ. ಅನೇಕ ಜನ ನಿಷ್ಠೆಯಿಂದ ಕೆಲಸ ಮಾಡುವ ಪೋಲೀಸು ಅಧಿಕಾರಿಗಳು ಇದರಲ್ಲಿ ಉಳಿಯುವುದಕ್ಕೇ ಸಾಧ್ಯವಿಲ್ಲ. ನಮ್ಮ ಕ್ಷೇತ್ರದಲ್ಲಿ ಯುವಕರಾಗಿದ್ದ ಒಬ್ಬರು ಪೋಲೀಸು ಸಬ್ ಇನ್‌ಸ್ಪೆಕ್ಟರವರು ಬಂದಿದ್ದರು ಮತ್ತು ಅವರು ಬಹಳ ಕಟ್ಟುನಿಟ್ಟಾಗಿ ನಡೆಯುವುಂತಹವರು, ಇವರ ಬಂದಮೇಲೆ ಇಲ್ಲಿ ಪ್ರೊಹಿಬಿಷನ್ನು ಕೇಸುಗಳನ್ನು ಕಟ್ಟುನಿಟ್ಟಾಗಿ ಹಿಡಿಯುತ್ತಿದ್ದರು ಮತ್ತು ಎಲ್ಲ ವಿಚಾರಗಳಲ್ಲೂ ನಿಷ್ಠೆಯಿಂದ ಚೆನ್ನಾಗಿ ಕೆಲಸ ಮಾಡುತ್ತಿದ್ದರು. ಇದರಿಂದ ಅಲ್ಲಿ ಇವರ ಕೈಕೆಳಗಿನ ಅಧಿಕಾರಿಗಳು ಇವರು ತನಿಖೆಗೆ ಬರುವ ಮೊದಲೇ ಅದರ ಸುಳಿವನ್ನು ಜನಕ್ಕೆ ಕೊಟ್ಟು ಇಲ್ಲದ ತೊಂದರೆಗಳನ್ನು ಮಾಡುತ್ತಿದ್ದರು ಮತ್ತು ಅವರಿಗೆ ಜನರಿಂದಲೂ ಯಾವ ಸಹಾಯ ದೊರಕಲೂ ಕೊಡುತ್ತಿರಲಿಲ್ಲ. ಇವೊತ್ತು ನಿಷ್ಠಾವಂತರಾದ ಅಧಿಕಾರಿಗಳು ಪೋಲೀಸು ಇಲಾಖೆಯಲ್ಲಿದ್ದರೂ ಅವರು ನಿಷ್ಠೆಯಿಂದ ಕೆಲಸ ಮಾಡಲು ಆಗುತ್ತಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ನಾನು ಮೇಲೆ ಹೇಳಿದ ಅಧಿಕಾರಿಗಳೇ ಒಂದು ಸಾರಿ ನನ್ನಲ್ಲಿಗೆ ಬಂದು ಇದರ ವಿಚಾರವನ್ನು ಇಲ್ಲಿ ಕಾನೂನು ಪ್ರಕಾರ ಜನಕ್ಕೆ ಸರಿಯಾದ ರಕ್ಷಣೆ ಕೊಡಬೇಕೆಂದರೆ ಆಗುತ್ತಿಲ್ಲ ಎಂದು ಹೇಳಿದಾಗ ನಾನು ಅವರಿಗೆ ಹೇಳಿದೆ, ನೀವು ಯಾರಿಗೂ ಹೆದರಬೇಕಾಗಿಲ್ಲ ನೀವು ಮಾಡುವ ಕೆಲಸವನ್ನು ನಿಮ್ಮ ಆತ್ಮ ಸಾಕ್ಷಿಯಾಗಿ ಮಾಡಿ, ನಿಮಗೆ ಯಾರೂ ಶಿಕ್ಷೆ ಮಾಡುವುದಿಲ್ಲ. ಹಾಗೆ ಮಾಡಿದರೆ ನಿಮ್ಮನ್ನು ಬೇರೆ ಎಲ್ಲಿಗಾದರೂ ಟ್ರಾನ್ಸ್‌ಫರ್ ಮಾಡುತ್ತಾರೆ ಅಷ್ಟೆ, ಎಂದು ಹೇಳಿದೆ. ನೀವು ದೇವರ ಎದುರಿಗೆ ಆತ್ಮ ಸಾಕ್ಷಿಯಾಗಿ ಕೆಲಸ ಮಾಡುತ್ತಿದ್ದೇನೆಂದು ಹೇಳುವಂತೆ ಕೆಲಸ ಮಾಡಿದರೆ ಯಾರಿಗೂ ಹೆದರಬೇಕಾದ್ದಿಲ್ಲ ಎಂದು ಹೇಳಿದೆ. ನಿಸ್ಪೃಹತೆಯಿಂದ ಕಟ್ಟುನಿಟ್ಟಾಗಿ ಕೆಲಸ ಮಾಡಿದರೂ ಕೂಡ ಅವನು ಅಲ್ಲಿರುವುದಕ್ಕೆ ಆಗಲಿಲ್ಲ, ಕೊನೆಗೆ ವರ್ಗ ಆಯಿತು. ಪೋಲೀಸ್ ಇಲಾಖೆಯಲ್ಲಿರತಕ್ಕವರು ನೂರಕ್ಕೆ ನೂರರಷ್ಟು ಅಧಮರು ಎಂದು ನಾನು ಹೇಳುವುದಿಲ್ಲ. ಒಳ್ಳೆಯವರಾಗಿರತಕ್ಕವರು ಇದ್ದಾರೆ, ಇದ್ದರೂ ಕೂಡ ಅವರಿಗೆ ರಕ್ಷಣೆಯಿಲ್ಲ. ಹೀಗಾಗಿ ಪೋಲೀಸ್ ಇಲಾಖೆ ಇವತ್ತು ನಮ್ಮ ದೇಶದಲ್ಲಿ ದಕ್ಷಹೀನತೆಯಿಂದ ಇದೆ. ಈ ನಮ್ಮ ಕಾನ್‌ಸ್ಟೇಬಲರಿ ಹಳೇ ಕಾಲದಿಂದ ಬಂದಿರತಕ್ಕದ್ದು. ಅವರಲ್ಲಿ ಬಹಳ ಅವಿದ್ಯಾವಂತರು ಇದ್ದಾರೆ. ಇವತ್ತು ಸಮಾಜದಲ್ಲಿ ತನ್ನ ಸ್ಥಾನ ಏನು, ಸಮಾಜವನ್ನು ಹೇಗೆ ರಕ್ಷಣೆ ಮಾಡಬೇಕೆನ್ನುವುದನ್ನೂ ಕೂಡ ಅರಿಯದ ಕ್ರೂರ ಪ್ರವೃತ್ತಿಯ ಮನುಷ್ಯನಾಗಿದ್ದಾನೆ ಪೋಲೀಸಿನವನು. ಮಗು ಅಳುತ್ತಾ ಇದ್ದರೆ 'ಪೋಲೀಸಿನವನಿಗೆ ಹೇಳುತ್ತೇನೆ' ಎಂದು ಅನ್ನುತ್ತಾರೆ, ಪೋಲೀಸಿನವನು ಎಂದರೆ ಮಗು ಅಳುವುದನ್ನೂ ಕೂಡ ನಿಲ್ಲಿಸುವ ಪರಿಸ್ಥಿತಿ. ಅಂತಹ ಭಾವನೆ ಪೋಲೀಸಿನವರ ವಿಚಾರದಲ್ಲಿ ನಮ್ಮ ಸಮಾಜದಲ್ಲಿ ಬಂದಿದೆ. ಆ ಭಾವನೆ ಇರುವುದೂ ಕೂಡ ಸಕಾರಣವಾಗಿದೆ. ಅದೇ ರೀತಿ ಅವರು ವರ್ತನೆ ಮಾಡುತ್ತಾ ಇದ್ದಾರೆ. ನಮ್ಮ ಕ್ಷೇತ್ರದಲ್ಲಿ ಪೋಲೀಸ್‌ನವರು ಎಷ್ಟುಮಟ್ಟಿಗೆ ಕೆಲಸ ಮಾಡುತ್ತಾ ಇದ್ದಾರೆ ಎಂದರೆ, ಒಂದು ದಿವಸ ಒಂದು ವ್ಯಾನ್—ಅದು ಅನ್‌ಲೈಸನ್ಸ್ಡ್ ಎಂದು ವ್ಯಾನ್ ಅಂತ ಕಾಣುತ್ತದೆ—ಅದರಲ್ಲಿ ಪ್ರಯಾಣ ಮಾಡುತ್ತಾ ಇರುವಾಗ ಅದರಲ್ಲಿ ಪೋಲೀಸಿನವನು ಹತ್ತಿಕೊಂಡ, ಡ್ರೈವರನ್ನು ಪಕ್ಕದಲ್ಲಿ ಕುಳ್ಳರಿಸಿ ಅವನೇ ಸ್ಟೀರಿಂಗ್ ಮಾಡುತ್ತಾ ಇದ್ದ. ಚೆನ್ನಾಗಿ ಕುಡಿದು ಡ್ರೈವ್ ಮಾಡುತ್ತಾ ಕುಡಿತದ ಅಮಲಿನಲ್ಲಿ ವ್ಯಾನನ್ನು ಹಳ್ಳಕ್ಕೆ ಹಾಕಿದ, ಕೆಲವರಿಗೆ ಗಾಯವಾಯಿತು. ಅದರಲ್ಲಿ ಕೆಲವರು ಅಧಿಕಾರಿಗಳೂ ಇದ್ದರಂತೆ. ಏನು ಸ್ವಾಮಿ, ಹೀಗೆ ಆಯಿತು, ಏಕೆ ಸುಮ್ಮನೆ ಇದ್ದೀರಿ ಎಂದು ಕೇಳಿದ್ದಕ್ಕೆ ಪೋಲೀಸಿನವರ ಮೇಲೆ ದೂರು ಕೊಟ್ಟು ಉಳಿಗಾಲ ಇದೆಯೇ

ಎಂದು ಅಂದರು. ಹೀಗೆ ಯಾರು ಕಾನೂನನ್ನು ರಕ್ಷಣೆ ಮಾಡಬೇಕೋ ಅವನೇ ಕುಡಿದು ಅದರ ಅಮಲಿನಲ್ಲಿ ಅನ್ಯಾಯಗಳ ಪರಂಪರೆಯನ್ನೇ ಮಾಡುತ್ತಾ ಇದ್ದಾನೆ. ಮತ್ತೊಂದು ಕಡೆ ಒಬ್ಬ ಕಾನ್‌ಸ್ಟೇಬಲ್ ಇಲಿಸಿಟ್ ಆರಕ್ ಕುಡಿದು, ಸಿಕ್ಕಾಪಟ್ಟೆ ಕುಡಿದು ಸತ್ತು ಹೋದ. ಹೀಗಾಗಿ ಪೋಲೀಸ್‌ನವರ ವರ್ತನೆ ಎಂದರೆ ಜನಕ್ಕೆ ಜುಗುಪ್ಸೆ ಬಂದಿದೆ. ಯಾರು ಲಂಚ ಕೊಡುತ್ತಾರೋ, ಅವರಿಂದ ಅಲ್ಲದೆ ಯಾರು ತೆಗೆದುಕೊಳ್ಳುತ್ತಾರೆ ಅವರಿಂದ ಎರಡು ಕಡೆಯಿಂದಲೂ ಲಂಚ ತೆಗೆದು ಕೊಳ್ಳುತ್ತಾರೆ. ಈ ರೀತಿ ಪೋಲೀಸಿನವರ ಕರ್ತವ್ಯ ಬಹಳ ಕೀಳು ಮಟ್ಟಕ್ಕೆ ಇಳಿದಿದೆ. ಬಹಳ ಕಟ್ಟುನಿಟ್ಟಾಗಿ ಕಾರ್ಯಕ್ರಮ ತೆಗೆದುಕೊಂಡ ಹೊರತು ಪೋಲೀಸಿನವರ ವರ್ತನೆಯನ್ನು ಸರಿಮಾಡು ವುದಕ್ಕೆ ಬಹಳ ಕಷ್ಟ ಎಂದು ನಾನು ಭಾವನೆ ಮಾಡಿಕೊಂಡಿದ್ದೇನೆ, ರಾಜಕೀಯ ಸಂಗ್ರಾಮದಲ್ಲಿ ಭಾಗವಹಿಸಿದಂತಹ ತಾವು ಗೃಹ ಮಂತ್ರಿಗಳಾಗಿ ಇದರ ಮೇಲ್ವಿಚಾರಣೆಯನ್ನು ವಹಿಸಿದ್ದೀರಿ. ಪೋಲೀಸಿನವರ ದುಷ್ಟ ಶಕ್ತಿ ಎಷುಮಟ್ಟಿಗೆ ಕೆಲಸ ಮಾಡುತ್ತಾ ಇದೆ ಎಂಬುದನ್ನು ತಾವು ಸ್ವತಃ ಅನುಭವಿಸಿ ಕೂಡ ಇರಬೇಕು. ಅದ್ದರಿಂದ ಪೋಲೀಸ್ ಇಲಾಖೆಯಮೇಲೆ ದಕ್ಷ ಮುಷ್ಟಿ ಅಧಿಕಾರ ಹೊಂದಿದ ಹೊರತು ಅದನ್ನು ಸರಿಪಡಿಸುವುದಕ್ಕೆ ಸಾಧ್ಯವಿಲ್ಲ. ಸಮಾಜದ ಹೆಸರಿನಲ್ಲಿ, ಮತ್ತು ನ್ಯಾಯದ ಹೆಸರಿನಲ್ಲಿ ಕಾನೂನಿನ ಹೆಸರಿನಲ್ಲಿ ಅದನ್ನು ಮಾಡಲೇಬೇಕು ಎಂದು ಹೇಳಿ ನಾನು ಒತ್ತಾಯ ಮಾಡುತ್ತಾ ಇದ್ದೇನೆ. ಪೋಲೀಸ್ ಇಲಾಖೆಯನ್ನು ಮಾರ್ಪಾಡು ಮಾಡದಿದ್ದರೆ ಯಾವ ಕಾರ್ಯಕ್ಕೂ ಕೂಡ ರಕ್ಷಣೆ ಸಿಕ್ಕುವುದಿಲ್ಲ. ಪೋಲೀಸ್ ಖಾತೆಯ ಖರ್ಚು ವರ್ಷೇ ವರ್ಷೇ ಹೆಚ್ಚಾಗು ತ್ತಾಯಿದೆ. 3 ವರ್ಷಗಳ ಹಿಂದೆ ನಾಲ್ಕೂವರೆ ಕೋಟಿ ರೂಪಾಯಿ ಇದ್ದದ್ದು, ಇವತ್ತು ಆರೂವರೆ ಕೋಟಿ ರೂಪಾಯಿ ಆಗಿದೆ. ಪೋಲೀಸ್ ಸಿಬ್ಬಂದಿ ಜಾಸ್ತಿ ಮಾಡಿಕೊಳ್ಳುತ್ತಾ ಇದ್ದೇವೆ. ಕಾರಣ ದೇಶದಲ್ಲಿ ಕಾನೂನಿನ ರಕ್ಷಣೆ ಆಗಬೇಕು ಎಂಬುದೇ ಉದ್ದೇಶ. ಹೋಂಗಾರ್ಡ್ಸ್‌ಗೆ ವರ್ಷಂಪ್ರತಿ 18 ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡುತ್ತಾ ಇದ್ದೇವೆ. ಅದರ ಅವಶ್ಯಕತೆಯಾದರೂ ಏನಿದೆ? ರಾಷ್ಟ್ರದಲ್ಲಿ ತುರ್ತು ಪರಿಸ್ಥಿತಿ ಬಂದಾಗ ಅವರ ಅವಶ್ಯಕತೆ ಬೇಕಾಗಬಹುದು ಎಂಬ ಒಂದೇ ಒಂದು ದೃಷ್ಟಿಯಿಂದ ಹೋಂ ಗಾರ್ಡ್ಸ್‌ನ್ನು ನೇಮಕ ಮಾಡಿದಿರಿ. ಇವತ್ತಿನ ದಿವಸ ಅವರು ದೇಶದಲ್ಲಿ ಏನು ಕೆಲಸ ಮಾಡುತ್ತಾ ಇದ್ದಾರೆ, ಅವರ ನೆರವು ಯಾವ ರೀತಿಯಿಂದ ಪಡೆಯುತ್ತಾ ಇದ್ದೀರಿ ಎಂಬುದನ್ನು ಹೇಳಬೇಕು. ಅವರಿಗೆ ತಿಂಡಿ ಕೊಡಬಹುದು, ಬಟ್ಟೆ ಕೊಡಬಹುದು, ಅವರಿಂದ ಡ್ರಿಲ್ ಮಾಡಿಸಬಹುದು, ಆದರೆ ಅವರು ಸಮಾಜಕ್ಕೆ ಯಾವ ರೀತಿಯಿಂದ ಸಹಾಯ ಮಾಡುತ್ತಾ ಇದ್ದಾರೆ ಎಂಬುದನ್ನು ಹೇಳ ಬೇಕು. ಇವತ್ತು ಕ್ಷಾಮ ಪರಿಸ್ಥಿತಿ ಇದೆ. ಇಂತಹ ಪರಿಸ್ಥಿತಿಯಲ್ಲಿ ಅವರು ಯಾವುದಾದರೂ ರೀತಿ ಯಿಂದ ತಮ್ಮ ಸೇವೆಯನ್ನು ದೇಶಕ್ಕೆ ಮಾಡಿದ್ದಾರೆಯೇ ಎಂದು ಕೇಳುತ್ತೇನೆ. ಅವರಿಂದ ಯಾವು ದಾದರೂ ರೀತಿಯ ಸೇವೆಯನ್ನು ಈ ಅಭಾವ ಕಾಲದಲ್ಲಿ ಮಾಡಿಸಿಕೊಳ್ಳಬೇಕು ಇಲ್ಲದೆ ಹೋದರೆ ಅವರು ಕೇವಲ ಅಲಂಕಾರ ಮೂರ್ತಿಗಳಾಗಿರುವುದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಕೇವಲ ಭೂಷಣಪ್ರಾಯರಾಗುತ್ತಾರೆ ಎಂದು ಹೇಳುತ್ತೇನೆ.

ಪೋಲೀಸಿನವರ ಕೈಗೆ ಡಿ.ಐ.ಆರ್.ನ್ನು ಕೊಟ್ಟಿದ್ದೀರಿ. ದೇಶದಲ್ಲಿ ಪೋಲೀಸ್ ಖಾತೆಯನ್ನು ಹೊಂದಿರತಕ್ಕ ಗೃಹ ಸಚಿವರು ಈ ವಿಷಯದಲ್ಲಿ ಬಹಳವಾಗಿ ಯೋಚನೆ ಮಾಡಬೇಕಾಗಿದೆ. ಡಿಫೆನ್ಸ್ ಆಫ್ ಇಂಡಿಯಾ ರೂಲ್ಸ್‌ನಲ್ಲಿ ಬಹಳ ಪವಿತ್ರವಾದ ತತ್ವ ಇದೆ. ದೇಶದ ಗಡಿ ರಕ್ಷಣೆಗೆ ಯಾವ ವ್ಯಕ್ತಿಯೇ ಆಗಲಿ ಆತಂಕ ತಂದೊಡ್ಡಿದರೆ, ರಾಷ್ಟ್ರದ ಹಿತಕ್ಕೆ ವಿರುದ್ಧವಾಗಿ ಕೆಲಸ ಮಾಡತಕ್ಕ ವ್ಯಕ್ತಿ ಯಾರಾದರೂ ಇದ್ದರೆ ಅವರ ಬಗ್ಗೆ ಡಿ.ಐ.ಆರ್. ಕಾನೂನನ್ನು ಅನ್ವಯ ಮಾಡತಕ್ಕದ್ದು ಶ್ಲಾಘ ನೀಯವಾದದ್ದೇ, ಮಾಡಲೇಬೇಕು. ರಾಷ್ಟ್ರದ ಹಿತ ಮತ್ತು ಅದರ ರಕ್ಷಣೆ ಪ್ರತಿಯೊಬ್ಬ ಭಾರತೀಯನ ಕರ್ತವ್ಯ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದು ಇವತ್ತಿನ ದಿವಸ ಎಷ್ಟುಮಟ್ಟಿಗೆ ಜಾರಿ ಯಾಗುತ್ತಾ ಇದೆ ನಮ್ಮ ದೇಶದಲ್ಲಿ ಮತ್ತು ಭಾರತಾದ್ಯಂತ ಎಂಬುದನ್ನು ನಾವು ವಿಚಾರ ಮಾಡಿ ನೋಡಬೇಕಾಗಿದೆ. ಅನೇಕ ವೇಳೆ ಈ ಕಾನೂನನ್ನು ತಮ್ಮ ತಮ್ಮ ವ್ಯಕ್ತಿ ಪ್ರಭಾವದಿಂದ ಅಥವಾ ತಮ್ಮ ಒಂದು ಪಕ್ಷಕ್ಕೆ ವಿರೋಧವಾಗಿ ಹೋಗತಕ್ಕವರಮೇಲೆ ಅನೇಕ ದೂರುಗಳನ್ನು ತಂದು ಅವರ ಮೇಲೆ ದುರುಪಯೋಗ ಮಾಡತಕ್ಕ ಸನ್ನಿವೇಶಗಳು ಇದರಲ್ಲಿ ಬಹಳವಾಗಿ ಅಡಕವಾಗಿದೆ. ಪ್ರಜಾ ಪ್ರಭುತ್ವದ ಬೆಳವಣಿಗೆಗೆ ಯಾವ ಆತಂಕವೂ ಇಲ್ಲದೆ ಅದು ಪ್ರಫುಲ್ಲವಾಗಿ ಬೆಳೆಯಬೇಕಾದರೆ ಏನು ಬೇಕೋ ಅದಕ್ಕೆ ವಿರುದ್ಧವಾಗಿ, ಅಡ್ಡಿ ಆತಂಕವನ್ನು ತಂದೊಡ್ಡತಕ್ಕ ಒಂದು ಶಕ್ತಿ ಈ ಡಿ.ಐ.ಆರ್. ನಲ್ಲಿ ಇದೆ. ಯಾರಮೇಲೆ ಬೇಕಾದರೂ ಈ ಕಾನೂನನ್ನು ಉಪಯೋಗ ಮಾಡಬಹುದು. ಕೆಲವು ಕಡೆ ನೋಡುತ್ತಾ ಇದ್ದೇವೆ; ಹಸಿವಿನ ಬೇಗೆಯಲ್ಲಿ ಆಹಾರ ಕೊಡಿ ಎಂದು ಕೇಳಿದರೆ ಅವನ ಮೇಲೆ ಡಿ.ಐ.ಆರ್. ಕಾನೂನನ್ನು ಅನ್ವಯ ಮಾಡತಕ್ಕ ಅನೇಕ ನಿದರ್ಶನಗಳು ಇವೆ. ಅನ್ನ ಕೇಳುವುದು ತಪ್ಪು, ಹಸಿವಿನ ಪ್ರದರ್ಶನ ಮಾಡುವುದು ತಪ್ಪು ಎಂಬ ಭಾವನೆ ಬರುತ್ತಾ ಇದೆ. ಯಾವುದು ರಾಷ್ಟ್ರಕ್ಕೆ ಹಿತ, ಅಹಿತ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಮನುಷ್ಯ ತನ್ನ ಕೂಗನ್ನು ದೇಶದ ಮುಂದೆ ಸರ್ಕಾರದ ಮುಂದೆ ಇಡುವುದು ಅವನ ಪ್ರಥಮ ಕರ್ತವ್ಯ, ಅವನ ಕೂಗು

(ಶ್ರೀ ಎಸ್. ಶಿವಪ್ಪ)

ಎಲ್ಲಿಂದ ಉತ್ಪನ್ನವಾಯಿತು? ಹಸಿವಿನಿಂದ ಉತ್ಪನ್ನವಾಯಿತು. ಅದನ್ನು ಹೇಗೆ ನಿವಾರಣೆ ಮಾಡ ಬೇಕೆಂಬ ಮೂಲ ಚಿಕಿತ್ಸೆ ಮಾಡುವುದನ್ನು ಬಿಟ್ಟು ಅವನಮೇಲೆ ಈ ಕಾನೂನನ್ನು ಅನ್ವಯ ಮಾಡು ವುದಾದರೆ ಎಂತಹ ದುಷ್ಪರಿಣಾಮವಾಗುತ್ತದೆ ಅದನ್ನು ಎಷ್ಟರಮಟ್ಟಿಗೆ ತಡೆಗಟ್ಟ ಬಹುದು ಎಂಬುದನ್ನು ಗೃಹಶಾಖಾ ಸಚಿವರು ಆಳವಾಗಿ ಯೋಚನೆ ಮಾಡಬೇಕಾಗಿದೆ. ತಾಷ್ಕೆಂಟ್ ಒಪ್ಪಂದವಾದಮೇಲೆ ದೇಶದಲ್ಲಿ ಒಂದು ಶಾಂತ ವಾತಾವರಣ ಮೂಡಿದೆ, ಪಾಕೀಸ್ಥಾನದ ತೊಂದರೆ ತಪ್ಪಿದೆ, ಅದರಿಂದ ಸ್ವಲ್ಪ ಅನುಕೂಲವಾಗಿದೆ. ಆ ಭಾವನೆ ಜನರಲ್ಲುಂಟಾಗಬೇಕಾದರೆ ಡಿಫೆನ್ಸ್ ಆಫ್ ಇಂಡಿಯಾ ರೂಲ್ಸನ್ನು ರದ್ದುಮಾಡಬೇಕು, ವಾಪಸು ತೆಗೆದುಕೊಳ್ಳಬೇಕು ಎಂದು ಈ ಸಭೆಯ ಮೂಲಕ ಕೇಂದ್ರ ಸರ್ಕಾರಕ್ಕೆ ಒತ್ತಾಯ ಪಡಿಸುತ್ತಿದ್ದೇನೆ. ಈ ರೂಲ್ಸನ್ನು ಉಪಯೋಗ ಮಾಡುವ ಬಗ್ಗೆ ರಾಜ್ಯ ಸರ್ಕಾರಗಳಿಗೆ ಅವರ ವಿವೇಚನೆಗೆ ಬಿಟ್ಟಿದೆ ಎಂದು ಇತ್ತೀಚೆಗೆ ಪ್ರಧಾನ ಮಂತ್ರಿಗಳು ಹೇಳಿದ್ದಾರೆ. ದೇಶದ ಮುಖ್ಯ ಮಂತ್ರಿಗಳು ಇದನ್ನು ಯೋಚನೆ ಮಾಡಬೇಕೆಂದು ಹೇಳಿ ದ್ದಾರೆ. ಬಹುಶಃ ಈ ಕಾನೂನು ಗಡಿ ಪಕ್ಕದಲ್ಲಿರುವ ಪ್ರದೇಶಕ್ಕೆ ಬೇಕಾಗಬಹುದು. ಆದುದರಿಂದ ಅಲ್ಲಿ ಗಡಿಯಿಂದ 50 ಅಥವ 100 ಮೈಲಿಗಳೊಳಗಿರುವ ಪ್ರದೇಶಗಳಿಗೆ ಮಾತ್ರ ಇದರ ಅನ್ವಯ ಮಾಡಿಕೊಂಡು ಅಲ್ಲಿ ತಾತ್ಕಾಲಿಕವಾಗಿ ಉಪಯೋಗ ಮಾಡಿಕೊಳ್ಳಬಹುದು. ಗಂಡಾಂತರ ಬರಬ ಹುದೆಂದು ರಕ್ಷಣೆಗಾಗಿ ಅಲ್ಲಿ ಮಾತ್ರ ಉಪಯೋಗಿಸಬಹುದು ಆದರೆ ಮೈಸೂರಿಗೇಕೆ ? ನಮ್ಮಲ್ಲಿ ಗಂಡಾಂತರ ಪರಿಸ್ಥಿತಿಯೇನೂ ಇಲ್ಲ. ಆದುದರಿಂದ ಗೃಹ ಸಚಿವರು ಡಿಫೆನ್ಸ್ ಆಫ್ ಇಂಡಿಯಾ ಕಾನೂನಿನ ಅವಶ್ಯಕತೆ ನಮಲ್ಲಿಲ್ಲ. ದೇಶದಲ್ಲಿ ಗಲಾಟೆಯಾದರೆ ರಕ್ಷಣೆ ಮಾಡಲು ಬೇರೆ ಕಾನೂನು ಗಳಿವೆ, ಎಂದು ಭರವಸೆಯನ್ನು ಈ ಸಭೆಯಲ್ಲಾದರೂ ಕೊಡಬೇಕೆಂದು ಒತ್ತಾಯವಾಗಿ ಅವರನ್ನು ಕೇಳಿಕೊಳ್ಳುತ್ತಿದ್ದೇನೆ.

ಇನ್ನು ಪೋಲಿಸು ಖಾತೆ ಎಷ್ಟರಮಟ್ಟಿಗೆ ಮಾರ್ಪಾಡು ಮಾಡಬೇಕೆಂಬುದು ಬಹಳ ಮುಖ್ಯ ವಾದ ವಿಷಯ. ಆ ಖಾತೆಯಲ್ಲಿ ಕ್ರಾಂತಿಕಾರಕವಾದ ಬದಲಾವಣೆ ಆಗಬೇಕಾಗಿದೆ. ಈ ದಿವಸ ಹೊಟ್ಟೆ ಬಹಳ ಮುಖ್ಯವಾದುದು. ಸಂಬಳಸಾರಿಗೆಗಳಲ್ಲಿ ದೊಡ್ಡ ಅಧಿಕಾರಿಗಳಿಗೂ ಮತ್ತು ಪೋಲೀಸು ಕಾನ್‌ಸ್ಟೇಬಲ್ಲುಗಳಿಗೂ ಇರುವ ಅಂತರ ಕಡಮೆಯಾಗಬೇಕು, ದೊಡ್ಡ ಅಧಿಕಾರಿಗಳಿಗೆ ಭಾರಿ ಸಂಬಳ ವಿದೆ. ಇದು ಸರಿಯಲ್ಲ. ಕೆಳಮಟ್ಟದಲ್ಲಿರುವ ಕಾನ್‌ಸ್ಟೇಬಲ್ಲಿಗೆ 150 ರೂಪಾಯಿಗಳ ಸಂಬಳವ ನ್ನಾದರೂ ಕೊಡಬೇಕು. ಅವನಿಗೆ ಕೆಲಸಮಾಡಲು ತಾಖತ್ತಿರಬೇಕು, ರಕ್ಷಣೆ ಮಾಡುವವನಿಗೆ ಹೆಚ್ಚು ಸಂಬಳ ಕೊಡಬೇಕು. ಕೊನೆಯ ಪಕ್ಷ ಕಾನ್‌ಸ್ಟೇಬಲ್ಲಿಗೆ ಎಸ್.ಎಸ್.ಎಲ್.ಸಿ. ಯಾದರೂ ಆಗಿರ ಬೇಕು, ಅಷ್ಟು ವಿದ್ಯೆ ಇದ್ದರೆ ಸಮಾಜ ಸೇವೆ ಮಾಡಲು ಒಳ್ಳೆಯ ವಾತಾವರಣ ಕಲ್ಪಿಸಲು ಅವಕಾಶ ವಾಗುತ್ತದೆ. ಈ ದಿವಸ ಯಾವುದೂ ಇಲ್ಲದೆ ಅವನು ಸಮಾಜದ್ರೋಹಿಯಾಗಿದ್ದಾನೆ. ಬೇಕಾದರೆ ಸಂಖ್ಯೆಯನ್ನು ಕಡಮೆಮಾಡಿ, ಸರಿಯಾಗಿ ಕೆಲಸ ಮಾಡುವವರಿದ್ದರೆ ಶೇಕಡ 25 ಭಾಗ ಕಾನ್‌ಸ್ಟೇಬಲ್ಲು ಗಳನ್ನಾದರೂ ಕಡಮೆ ಮಾಡಬಹುದು. ಉತ್ತಮ ದರ್ಜೆಯವರನ್ನು ರಿಕ್ರೂಟ್ ಮಾಡಿದರೆ ಖರ್ಚು ಸಹ ಉಳಿಸಬಹುದು. ಮೇಲಿನ ಅಧಿಕಾರಿಗಳಿಗೆ ಕೂಡ ಒಳ್ಳೆಯ ತರಬೇತಿ ಕೊಟ್ಟು ಸ್ಕಾಟ್‌ಲೆಂಡ್ ಯಾರ್ಡ್ ಮುಂತಾದ ಕಡೆಗಳಿಗೆ ಕಳಿಸಿ ನವೀನ ರೀತಿಯ ಶಿಕ್ಷಣ ಕೊಟ್ಟು ಪೋಲೀಸಿನವರು ಸಮಾಜ ಸೇವಕರು ಎಂಬ ನಿಜವಾದ ಭಾವನೆ ಬರುವಂತೆ ಮಾಡಬೇಕು. ಹಾಗಾದರೆ ಮಾತ್ರ ದೇಶಕ್ಕೆ ಒಳ್ಳೆ ಯದಾಗುತ್ತದೆ ಎಂದು ನಾನು ಪೋಲೀಸು ಖಾತೆ ಬಗ್ಗೆ ಸಲಹೆ ಮಾಡುತ್ತೇನೆ.

ಜೈಲುಗಳಲ್ಲಿ ಕೆಲವು ಸುಧಾರಣೆಗಳು ಆಗಬೇಕಾಗಿವೆ. ಯಾವ ರೀತಿ ಜೈಲುಗಳಿರಬೇಕೆಂದರೆ, ಜೈಲಿಗೆ ಹೋಗಿಬಂದ ವ್ಯಕ್ತಿ ಸಮಾಜಘಾತುಕ ವ್ಯಕ್ತಿಯಾಗದೆ ಒಳ್ಳೆಯ ವ್ಯಕ್ತಿಯಾಗಬೇಕು, ಆ ಮನೋಭಾವನೆ ಬೆಳೆಯುವಂತೆ ಮಾಡಿ ಅವನು ಪ್ರತೀಕಾರ ಮನೋಭಾವನೆ ತಳೆಯದಂತೆ ನೋಡಿ ಕೊಳ್ಳಬೇಕು. ಹೊರಗೆ ಬಂದಕೂಡಲೆ ಒಳ್ಳೆಯ ಜೀವನ ನಡೆಸುವಂತೆ ಮಾರ್ಗದರ್ಶನ ಮಾಡ ಬೇಕು. ಬೆಂಗಳೂರು ನಗರದಲ್ಲಿ ಮಧ್ಯೆ ಇರುವ ಸೆಂಟ್ರಲ್ ಜೈಲನ್ನು ಬೆಂಗಳೂರಿನಿಂದ 8-10 ಮೈಲಿಗಳಾಚೆಗೆ ಹಾಕಿ ಆ ಜಾಗದಲ್ಲಿ ಒಂದು ಸ್ಟೇಡಿಯಂ ನಿರ್ಮಾಣ ಮಾಡಬೇಕೆಂಬ ಯೋಚನೆ ಇತ್ತು. ಹಾಗಾದರೂ ಮಾಡಬಹುದು, ಇಲ್ಲದಿದ್ದರೆ ಬೆಂಗಳೂರು ಯೂನಿವರ್ಸಿಟಿಗೆ ಕೊಟ್ಟು ರಿಸರ್ಚ್ ಲ್ಯಾಬೊರೇಟರಿ, ಲೈಬ್ರೆರಿ, ಕ್ವಾರ್ಟರ್ಸ್ ಮುಂತಾದ್ದನ್ನು ಒದಗಿಸಲು ಅನುಕೂಲಮಾಡಿ ಕೊಡಬೇಕು. ವಿಶ್ವವಿದ್ಯಾಲಯಕ್ಕೆ ಒಂದೇ ಕ್ಷೇತ್ರ ಇರುವಂತೆ ಅಲ್ಲಿ ಜಾಗ ಮಾಡಿಕೊಡಬಹುದು. ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಂ. ಗುರೆಡ್ಡಿ (ಮುದ್ದೆಬಿಹಾಳ).—ಮಾನ್ಯ ಸಭಾಧ್ಯಕ್ಷರೇ, ನಮ್ಮ ಮುಂದಿರುವ ಬೇಡಿಕೆಗಳಾದ ಬಂದೀಖಾನೆಗಳು, ಪೋಲೀಸ್ ರಾಷ್ಟ್ರೀಯ ತುರ್ತು ಪರಿಸ್ಥಿತಿಗೆ ಮತ್ತು ಉಳಿದ ಸಂಬಂಧಪಟ್ಟ ಬೇಡಿಕೆಗಳನ್ನು ಸ್ವಾಗತಿಸಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಇಲ್ಲಿಯವರೆಗೆ

ವಿರೋಧ ಪಕ್ಷದ ನಾಯಕರು ಪೋಲೀಸು ಖಾತೆಯ ಮೇಲೆ ಸರ್ಕಾರದ ಗಮನ ಸೆಳೆದಿದ್ದಾರೆ. ಮತ್ತು ಅವರ ಅರ್ಥಗರ್ಭಿತವಾದ ಭಾಷೆಯಲ್ಲಿ ಹೇಳಿರುವುದನ್ನು ಒಪ್ಪಿಕೊಳ್ಳಬೇಕು. ಆಡಳಿತ ಸುಧಾರಣೆ ಅತಿ ಮಹತ್ವದ ವಿಷಯ. ಯಾವ ಸುಧಾರಣೆಯಾಗಬೇಕಾದರೂ ಸಮಾಜ ಸುಧಾರಣೆಯಾಗಬೇಕೆಂಬುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಸಮಾಜದಲ್ಲಿ ಪೋಲೀಸಿನವರೂ ಬರುತ್ತಾರೆ. ಬಂದೀಖಾನೆಯಲ್ಲಿ ಇಂದು ಸರ್ಕಾರ ಸಾಕಷ್ಟು ಸುಧಾರಣೆ ಮಾಡಿದೆಯೆಂಬುದು ನಿರ್ವಿವಾದವಾದ ಸಂಗತಿ. ಹಿಂದೆ ಜೈಲಿಗೆ ಹೋದ ಜನರು ವಾಪಸು ಜೈಲಿನಿಂದ ಬಂದಮೇಲೆ ಇತರರು ಅವರನ್ನು ಸಮಾಜದಲ್ಲಿ ಕೀಳು ರೀತಿಯಿಂದ ಕಾಣುತ್ತಿದ್ದರು. ಆದರೆ ಇಂದು ಜೈಲು ನಿಜವಾಗಿಯೂ ಬಂದೀಖಾನೆಯಲ್ಲ, ತಪ್ಪಿತಸ್ಥರನ್ನು ಮಾರ್ಪಾಡು ಮಾಡುವ ಒಂದು ಸುವ್ಯವಸ್ಥಿತವಾದ ಮನೆಯಾಗಿದೆ. ತಪ್ಪುಮಾಡಿ ಜೈಲಿಗೆ ಹೋದವರು ತಿರುಗಿಬರುವಾಗ ಒಂದಲ್ಲ ಒಂದು ವಿದ್ಯೆ ಕಲಿತಿರುತ್ತಾರೆ. ಅವರು ಸಾಕಾದಷ್ಟು ಮಾರ್ಪಾಡಾಗಿರುತ್ತಾರೆ. ಜೈಲಿನಲ್ಲಿ ಕೈಗಾರಿಕೆ, ವ್ಯವಸಾಯ ಮುಂತಾದುವನ್ನೂ ಕೂಡ ಕಲಿಸುತ್ತಾರೆ, ಇದನ್ನೆಲ್ಲಾ ನಿರ್ವಿವಾದವಾಗಿ ನಾವೆಲ್ಲರೂ ಒಪ್ಪಿಕೊಳ್ಳಬೇಕಾಗಿದೆ. ಯಾರಾದರೂ ತಪ್ಪು ಮಾಡಿದರೆ ಸಮಾಜದಲ್ಲಿ ಕೆಟ್ಟ ಭಾವನೆಯನ್ನು ಅವರನ್ನು ನೋಡುವುದು ಹೋಗಬೇಕು ಮತ್ತು ಮಾನಸಿಕವಾಗಿಯೂ ಅವರು ಪರಿವರ್ತನೆ ಹೊಂದಬೇಕು ಎಂದು ಸರ್ಕಾರ ಆ ಸಂಬಂಧದಲ್ಲಿ ಒಂದು ಹೆಜ್ಜೆ ಮುಂದೆ ಇಟ್ಟಿದೆ. ಈಗ ಉದಾಹರಣೆಗೆ ಹೇಳಬೇಕಾದರೆ ಬಿಜಾಪುರ ಜೈಲಿನಲ್ಲಿ ತಯಾರಾಗುವ ಜಮಖಾನಗಳು ಗುಲ್ಬರ್ಗ ಜೈಲಿನಲ್ಲಿ ತಯಾರಾಗುವ ಜಂಖಾನಗಳು ವಿದೇಶದ ಮಾರ್ಕೆಟ್ಟಿಗೆ ಹೋಗುತ್ತಿವೆ. ಅಂದಮೇಲೆ ಯಾವ ಮಟ್ಟದಲ್ಲಿ ಅವನ್ನು ತಯಾರಿಸಿದ್ದಾರೆಂಬುದು ಗೊತ್ತಾಗುತ್ತದೆ.

ಇನ್ನು ಪೋಲೀಸು ಖಾತೆಯಲ್ಲಿ ಕೆಲವೊಂದು ನ್ಯೂನತೆಗಳಿವೆ. ಮೊದಲು ಬ್ರಿಟಿಷರಿದ್ದಾಗ ಈ ಖಾತೆಯನ್ನು ಜನರು ಯಾವರೀತಿ ಕಾಣುತ್ತಿದ್ದರೋ ಈಗಲೂ ಕೂಡ ಅದೇ ರೀತಿಯಲ್ಲಿ ಕಾಣುತ್ತಿದ್ದಾರೆ. ಪೋಲೀಸಿನವರು ಕೂಡ ಅದೇ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದಾರೆ. ಇಂದು ರಾಜ್ಯದಲ್ಲಿ ಎಲ್ಲಾ ಖಾತೆಗಳಲ್ಲೂ ಮನೋವಿಕಾಸವಾಗುತ್ತಿದೆ. ಆದರೆ ಪೋಲೀಸು ಖಾತೆಯಲ್ಲಿ ಮನೋವಿಕಾಸಕ್ಕೆ ಅಥವ ಮಾನವೀಯತೆಯ ಬಗ್ಗೆ ವ್ಯವಸ್ಥೆ ಮಾಡಿಲ್ಲ. ಪೋಲೀಸ್ ಅಂದಾಕ್ಷಣ ಜನತೆಗೆ ಭಯವಾಗುತ್ತದೆ, ಇದು ಹೋಗಬೇಕು ಹೋಗಿ ಜನರಿಗೆ ಸಹಾಯ ಮಾಡಲು ಪೋಲೀಸರಿದ್ದಾರೆ ಎಂಬ ಭಾವನೆ ಜನರಲ್ಲಿ ಮೂಡಬೇಕು. ಆ ರೀತಿ ನಡೆದುಕೊಳ್ಳುವಂತೆ ಪೋಲೀಸರಿಗೆ ಶಿಕ್ಷಣ ಕೊಡಬೇಕು. ಅವರಿಗೆ ಟ್ರೈನಿಂಗ್‌ನಲ್ಲಿ ರೈಫಲ್ ಮುಂತಾದ ದೈಹಿಕ ವಿಕಾಶಕ್ಕೆ ಉಪಯೋಗವಾಗುವಂಥ ಶಿಕ್ಷಣ ಕೊಡಲಾಗುತ್ತದೆ. ಅದರ ಜೊತೆಗೆ ಅವರಿಗೆ ಮನೋವಿಕಾಸವಾಗಿ ಜನರನ್ನು ಯಾವ ರೀತಿ ಪ್ರೇಮಿಸಬೇಕು, ಹೇಗೆ ಅವರಿಗೆ ಸಹಾಯ ಮಾಡಬೇಕು ಎಂಬುದನ್ನು ಕೂಡ ಪೋಲೀಸರಿಗೆ ಹೇಳಿಕೊಡಲು ವ್ಯವಸ್ಥೆ ಮಾಡಬೇಕೆಂದು ನಾನು ಗೃಹ ಮಂತ್ರಿಗಳಿಗೆ ಸೂಚಿಲಿಚ್ಛಿಸುತ್ತೇನೆ.

2-30 P.M.

ಈಗ ಪೋಲೀಸರ ನೈತಿಕ ಮಟ್ಟ ಬಹಳ ಕಡಿಮೆಯಾಗಿದೆ ಎಂದು ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದರು. ಆದರೆ ನಾನು ಇದನ್ನು ಒಪ್ಪುವುದಿಲ್ಲ. ಅವರ ನೈತಿಕ ಮಟ್ಟ ಕಡಿಮೆಯಾಗಿಲ್ಲ. ಅವರ ನೈತಿಕ ಮಟ್ಟ ಯಾವ ಮಟ್ಟದಲ್ಲಿ ಇರಬೇಕಾಗಿತ್ತೋ ಆ ಮಟ್ಟದಲಿಲ್ಲ ಎಂದು ನಾನು ಒಪ್ಪುತ್ತೇನೆ. ಒಂದು ವೇಳೆ ಪೋಲೀಸರಲ್ಲಿ ನೀತಿಯೇ ಇಲ್ಲದಿದ್ದರೆ ಸಮಾಜದಲ್ಲಿ ಅವರಿಗೆ ಯಾವ ಕೆಲಸ ಮಾಡುವುದು ಸಾಧ್ಯವಾಗುತ್ತಿರಲಿಲ್ಲ. ಹಿಂದಿನದಕ್ಕಿಂತಲೂ ಇಂದು ಅವರ ಮಟ್ಟ ಮೇಲೆ ಇದೆ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳಬೇಕಾಗುವುದು. ಇನ್ನು ಪೋಲೀಸ್ ಖಾತೆಯಲ್ಲಿ ನ್ಯೂನತೆಗಳು ಕಂಡುಬರುತ್ತವೆ. ಸಮಾಜದಲ್ಲಿ ಯಾವದೇ ಒಂದು ತಪ್ಪಿತಸ್ಥನಾಗಲಿ ಅಥವಾ ತಪ್ಪು ಮಾಡಿಸಿಕೊಂಡಂಥವನಾಗಲಿ ಪೋಲೀಸರಿಗೆ ಕಂಪ್ಲೇಂಟ್ ಕೊಡುವುದಕ್ಕೆ ಹೋದಾಗ್ಗೆ ಅವನ ಜೇಬು ತುಂಬಿರಬೇಕು ಎಂಬುದು ನಿರ್ವಿವಾದವಾದುದು. ಪೋಲೀಸರಿಗೆ ಕಂಪ್ಲೇಂಟ್ ಕೊಡುವುದಕ್ಕೆ ಬಂದವರಿಂದ ಅವರು ರೊಕ್ಕ ಅಪೇಕ್ಷಿಸದೆ ಬಿಡುವುದಿಲ್ಲ. ಈ ಖಾತೆಯಲ್ಲಿ ಲಂಚಖೋರತನ ಕಡಿಮೆಯಾಗಿಲ್ಲ. ಅದು ಹೆಚ್ಚಾಗಿದೆ ಎಂದು ಒಪ್ಪಿಕೊಳ್ಳಲೇಬೇಕಾಗುತ್ತದೆ. ಒಂದು ಮೋಟಾರ್ ವಾಹನ ಹೊರಟ ಕೂಡಲೆ ಪ್ರತಿಯೊಂದು ಸ್ಟೇಷನ್ನಿನಲ್ಲಿ ಮಾಮೂಲು ಕೊಡಬೇಕಾಗುತ್ತದೆ. ಒಂದು ಟ್ರಕ್ಕು ಬೆಂಗಳೂರು ಬಿಟ್ಟರೆ ತುಮಕೂರು ವರೆಗೆ ಎರಡು ಮೂರು ಸ್ಟೇಷನ್ನಿನಲ್ಲಿ ರೊಕ್ಕ ಕೊಡಬೇಕಾಗುತ್ತದೆ. ಅದಕ್ಕೆ ಪೋಲೀಸ್ ಟ್ಯಾಕ್ಸ್ ಎಂದು ಅನ್ನಬಹುದು. ಈ ಪ್ರಕಾರ ಪೋಲೀಸರಿಂದ ಆಗುತ್ತಿರುವುದನ್ನು ಗೃಹ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಯಾಕೆಂದರೆ ಅಲ್ಲಿ ನಡೆಯುವ ಬೇಕಾಯದೇಶೀರ ವ್ಯವಹಾರ ಗೃಹ ಮಂತ್ರಿಗಳ ಕಿವಿಗೆ ಮುಟ್ಟಲು ಸಾಧ್ಯವಿಲ್ಲ. ನಾವು ನೀವು ಇದನ್ನು ಅವರಿಗೆ ಹೇಳಿದರೆ ಅವರು ತಿಳಿದುಕೊಳ್ಳುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ದೇಶದಲ್ಲಿ ವಿಶೇಷವಾದ ಗಂಡಾಂತರ ಪರಿ

(ಶ್ರೀ ಎಸ್. ಎಂ. ಗುರೆಡ್ಡಿ)

ಸ್ಥಿತಿಬಂದಾಗ್ಗೆ ಪೋಲೀಸರ ಜವಾಬ್ದಾರಿ ಹೆಚ್ಚಾಗುತ್ತದೆ. ಆದುದರಿಂದ ಅವರ ಕಾರ್ಯಮಹತ್ವದ್ದಾಗಿದೆ. ಡಿಫೆನ್ಸ್ ಆಫ್ ಇಂಡಿಯಾ ರೂಲ್ಸ್ ಪ್ರಕಾರ ಅಧಿಕಾರ ಉಪಯೋಗ ಮಾಡುವಾಗ್ಗೆ ಪೋಲೀಸರು ಚಾಣಾಕ್ಷತನದಿಂದ ಬುದ್ಧಿವಂತಿಕೆಯಿಂದ ಉಪಯೋಗಿಸಬೇಕು ಎಂದು ಹೇಳುತ್ತೇನೆ. ಆಹಾರ ನಿಯಂತ್ರಣ ವಿಷಯದಲ್ಲಿ ಪೋಲೀಸರು ಕಟ್ಟುನಿಟ್ಟಾಗಿ ರೈತರಿಗೆ, ತ್ರಾಸವಾಗದ ರೀತಿಯಲ್ಲಿ ನೋಡಿಕೊಳ್ಳಬೇಕೆಂದು ಕೇಂದ್ರದ ಗೃಹ ಮಂತ್ರಿ ಶ್ರೀ ನಂದಾ ಅವರು ಹೇಳಿದ್ದಾರೆ. ನಮ್ಮ ದೇಶದ ರೈತರು ಅಜ್ಞಾನಿಗಳಾಗಿರುವುದರಿಂದ ಅವರು ಕಾನೂನು ತಿಳಿಯದವರಾದ್ದರಿಂದ, ಅವರು ಆಹಾರದ ವಿಷಯದಲ್ಲಿ ಸ್ವಲ್ಪ ತಪ್ಪು ಮಾಡಿದರೆ ಡಿಫೆನ್ಸ್ ರೂಲ್ಸ್‌ಗಳನ್ನು ಅವರ ಮೇಲೆ ಲಾಗು ಮಾಡಬಾರದು.

ಡಿಫೆನ್ಸ್ ಆಫ್ ಇಂಡಿಯಾ ರೂಲ್ಸ ಪ್ರಕಾರ ಎಷ್ಟೋ ಜನರ ಮೇಲೆ ಖಟ್ಲೆ ಹಾಕುವುದು ಕಡಿಮೆಯಾಗಬೇಕು. ಸಂರಕ್ಷಣಾ ಕಾಯಿದೆಯ ಉಪಯೋಗ ನಮ್ಮ ವಿಜಾಪೂರ ಜಿಲ್ಲೆಯಲ್ಲಿ ಹೆಚ್ಚಾಗಿ ಮಾಡಲಾಗಿದೆ. ಇಷ್ಟು ಉಪಯೋಗ ಬೇರೆ ಕಡೆ ಎಲ್ಲಿಯೂ ಮಾಡಲಾಗಿಲ್ಲ. ಪ್ರತಿಯೊಂದಕ್ಕೂ ಡಿಫೆನ್ಸ್ ಆಫ್ ಇಂಡಿಯಾ ರೂಲ್ಸ ಅನ್ವಯಿಸಿ ಜನರನ್ನು ಆರೆಸ್ಟು ಮಾಡಿದ್ದಾರೆ. ನಿಜವಾಗಿಯೂ ಅವರು ಮನಸ್ಸಾ ತಪ್ಪು ಮಾಡಿದ್ದಾರೆಯೇ ಎಂಬುದನ್ನು ಅರಿತುಕೊಳ್ಳುವುದು ಅಗತ್ಯ. ಪ್ರತಿಯೊಂದು ಹೆಜ್ಜೆಗೆ ಅದನ್ನು ಉಪಯೋಗಿಸುವುದು ತಪ್ಪಾಗುತ್ತದೆ. ಆದುದರಿಂದ ಇದರ ಬಗ್ಗೆ ಸರ್ಕಾರ ಗಮನ ಕೊಟ್ಟು ಇದನ್ನು ಸರಿಪಡಿಸಬೇಕು ಎಂದು ನಾನು ಹೇಳುತ್ತೇನೆ.

ಇನ್ನು ಹೋಂ ಗಾರ್ಡ್ಸ ಬಗ್ಗೆ ಕೆಲವು ಟೀಕೆಗಳು ಬಂದಿವೆ. ದೇಶದಲ್ಲಿ ತುರ್ತು ಪರಿಸ್ಥಿತಿಯುಂಟಾದಾಗ ನಿಜವಾಗಿಯೂ ಗೃಹ ರಕ್ಷಕ ದಳ ಬಹಳ ಮಹತ್ವದ್ದು ಇರುತ್ತದೆ. ಹಿಂದಕ್ಕೆ ಮಹಾಯುದ್ಧದ ಸಮಯದಲ್ಲಿ ಮುಂಬಯಿ ಸರ್ಕಾರವು ಮತ್ತು ಬೇರೆ ಉಳಿದ ರಾಜ್ಯಗಳು ಈ ಹೋಂ ಗಾರ್ಡ್ಸ ಮಹತ್ವವನ್ನು ಅರಿತುಕೊಂಡು ಇದನ್ನು ಪ್ರಾರಂಭಮಾಡಿದರು. ಆಯಾ ಸ್ಥಳದಲ್ಲಿ ಅಲ್ಲಿಯ ಸ್ಥಾನಿಕ ಭದ್ರತೆಯನ್ನೂ ಅಲ್ಲಿ ಸುವ್ಯವಸ್ಥೆಯನ್ನೂ ಹತೋಟಿಯಲ್ಲಿ ಇಟ್ಟುಕೊಳ್ಳುವುದಕ್ಕೆ ಹೋಂ ಗಾರ್ಡ್ಸನ್ನು ಸ್ಥಾಂಗದನ್ ಮಾಡಬೇಕೆಂದು ಗೊತ್ತು ಮಾಡಲಾಯಿತು. ಪೋಲೀಸರು ಮಾಡುವ ಕಾರ್ಯವನ್ನು ಇವರು ಮಾಡಲಿ ಎಂಬ ಭಾವನೆಯಿಂದ ಈ ಸಂಸ್ಥೆ ಪ್ರಾರಂಭಮಾಡಿದ್ದಾರೆ. ಹಳ್ಳಿಯ ಮಟ್ಟದಲ್ಲಿ ರಕ್ಷಣೆ, ತಾಲ್ಲೂಕ ಮಟ್ಟದಲ್ಲಿ ರಕ್ಷಣೆ ಜಿಲ್ಲಾ ಮಟ್ಟದಲ್ಲಿ ರಕ್ಷಣೆಯು ವ್ಯವಸ್ಥೆ ಮಾಡುವುದಕ್ಕೆ ಪೋಲಿಸರಿಗೆ ಸಹಾಯಕರಾಗಿ ಇರಬೇಕೆಂದು ಇರುವುದರಿಂದ ಇವರು ಮಹತ್ವದ ಕೆಲಸ ಮಾಡುತ್ತಾರೆ. ಪೋಲಿಸರ ಬಗ್ಗೆ ಜನರಿಗೆ ಭಯವಿರುತ್ತದೆ. ಆದರೆ ಹೋಂ ಗಾರ್ಡ್ಸ ಬಗ್ಗೆ ಜನರಿಗೆ ಭಯವಿರುವುದಿಲ್ಲ. ಯಾಕೆಂದರೆ ಹೋಂ ಗಾರ್ಡ್ಸನವರು ನಮ್ಮವರು ಎಂಬ ಭಾವನೆ ಇರುತ್ತದೆ. ಇದರಿಂದ ಕೆಲಸ ಬಹಳ ಸರಳವಾಗಿ ಜನರ ಸಹಕಾರ ಸಹಾಯ ಸುಲಭವಾಗಿ ಆಗುತ್ತದೆ. ಆದಕಾರಣ ಗೃಹ ರಕ್ಷಕ ದಳಕ್ಕಾಗಿ ಹೆಚ್ಚು ಹಣ ಸಹಾಯ ಮಾಡಬೇಕು ಎಂದು ಹೇಳುತ್ತೇನೆ. ಇದಲ್ಲದೆ ಗೃಹ ರಕ್ಷಕ ದಳದವರು ಡ್ಯೂಟಿ ಮೇಲೆ ಇರುವಾಗ್ಗೆ ಅವರಿಗೆ ಹೆಚ್ಚು ಸಹಾಯ ಒದಗಿಸಿಕೊಡಬೇಕು. ಇದಕ್ಕಾಗಿ ಒಂದು ಗೃಹ ರಕ್ಷಕ ಫಂಡ್ ಎಂದು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಪೋಲೀಸರ ಮಕ್ಕಳಿಗಾಗಿ ಒಂದು ಫಂಡ್ ಇದೆ, ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಲಾಗಿದೆ. ಇದಲ್ಲದೆ ಪೋಲೀಸರಿಗೆ ವಾಸಕ್ಕಾಗಿ ಮನೆಗಳನ್ನು ಕಟ್ಟಿಸಿ ಕೊಡುತ್ತೀರಿ. ಅದೇ ರೀತಿಯಾಗಿ ಇವರ ಮಕ್ಕಳಿಗೆ ವಿದ್ಯಾಭ್ಯಾಸ ಸೌಕರ್ಯ ಮತ್ತು ವಾಸಕ್ಕಾಗಿ ಮನೆಗಳನ್ನು ಕಟ್ಟಿಸಿಕೊಡುವ ಸೌಕರ್ಯ ಕಲ್ಪಿಸಿಕೊಡಬೇಕೆಂದು ಸೂಚಿಸುತ್ತೇನೆ.

ಕೊನೆಯದಾಗಿ ಒಂದು ಮಾತು ಹೇಳುತ್ತೇನೆ. ದೇಶದಲ್ಲಿ ತುರ್ತು ಪರಿಸ್ಥಿತಿ ಉಂಟಾದಾಗ್ಗೆ ದೇಶದ ಒಳಗೆ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಿಕೊಂಡು ಬರುವ ಮಹತ್ವದ ಕೆಲಸ ಪೋಲಿಸ್ ಖಾತೆಗೆ ಇರುತ್ತದೆ. ಒಂದು ಉದಾತ್ತವಾದ ಧ್ಯೇಯ ಇಟ್ಟುಕೊಂಡು ತಮ್ಮ ಈ ಕೆಲಸ ನಿರ್ವಹಿಸುತ್ತಾರೆಂದು ನಂಬಿ ಈ ಖಾತೆಯ ಮೇಲೆ ಹಣ ಖರ್ಚುಮಾಡುವುದು ಒಳ್ಳೆಯದು. ಈ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಂಡು ಉಳಿದವರೂ ಒಮ್ಮತದಿಂದ ಒಪ್ಪಿಕೊಳ್ಳುತ್ತಾರೆಂದು ಹೇಳಿ ನನ್ನ ಈ ಎರಡು ಮಾತು ಮುಗಿಸುತ್ತೇನೆ.

†ಶ್ರೀ ಸಿದ್ದಯ್ಯ ಕಾಶಿಮಠ್ (ಶಿರಹಟ್ಟಿ).—ಮಾನ್ಯ ಅಧ್ಯಕ್ಷರೇ, ಈಗ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ವಿರೋಧ ಮಾಡುತ್ತಾ ಒಂದೆರಡು ಮಾತು ಹೇಳಲು ಬಯಸುತ್ತೇನೆ. ದೇಶವು ಸುಭದ್ರವಾಗಿ ಇರಬೇಕಾದರೆ ದೇಶದಲ್ಲಿ ಇರತಕ್ಕ ಮಿಲಿಟರಿ ಮತ್ತು ಪೋಲೀಸರು ದಕ್ಷತೆಯಿಂದ ಕೆಲಸ ಮಾಡಿದರೆ ಮಾತ್ರ ಸುಭದ್ರತೆ ಕಾಪಾಡಿಕೊಂಡು ಬರಬಹುದು ಎಂದು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಸುಮಾರು 650 ಲಕ್ಷ ರೂಪಾಯಿ ಪೋಲಿಸುಖಾತೆಗೆ ಖರ್ಚುಮಾಡುತ್ತೇವೆ. ನಮ್ಮ ದೇಶದಲ್ಲಿ ಅಗತಕ್ಕ ಖೂನಿ ಮತ್ತು ಇತರ ಅಪರಾಧ ಪತ್ತೆ ಹಚ್ಚುವುದು ಶಾಂತಿ ಸುವ್ಯವಸ್ಥೆಯನ್ನು

ಕಾಪಾಡಿಕೊಂಡು ಬರುವ ಕೆಲಸವನ್ನು ಪೋಲಿಸರು ಯಾವ ರೀತಿ ಮಾಡುತ್ತಾರೆ ಎಂಬುದಕ್ಕೆ ಒಂದೆರಡು ವಿಷಯ ಹೇಳಬಯಸುತ್ತೇನೆ. ಸರ್ಕಾರದವರು ತನಿಖೆ ಮಾಡಿ ಕೊಟ್ಟಿರುದ ವಿವರದ ಪ್ರಕಾರ ಪ್ರತಿ ವರ್ಷ ಮರ್ಡರ್ ಕೇಸುಗಳ ಸಂಖ್ಯೆ ಕಡಿಮೆಯಾಗುತ್ತಾ ಇದೆ.

1963 ನೇ ಇಸವಿಯಲ್ಲಿ 665 ಖೂನಿಗಳು
1964 ನೇ ಇಸವಿಯಲ್ಲಿ 703 ಖೂನಿಗಳು
1965 ನೇ ಇಸವಿಯಲ್ಲಿ 644 ಖೂನಿಗಳು

ಈ ವಿಚಾರದಲ್ಲಿ ನಾನು ಒಂದು ಮಾತು ಕೇಳುತ್ತೇನೆ. ನಮ್ಮ ರಾಜ್ಯದಲ್ಲಿ ಮುಖ್ಯವಾಗಿ ಹೆಸರಾದ ಪ್ರದೇಶ ಅಂದರೆ ಬೆಳಗಾಂವ ಜಿಲ್ಲೆಯಲ್ಲಿ ಕೆಲವು ತಾಲ್ಲೂಕುಗಳು, ವಿಜಾಪೂರ ಜಿಲ್ಲೆಯ ಕೆಲವು ತಾಲ್ಲೂಕುಗಳು ಗುಲಬರ್ಗ ಮತ್ತು ರಾಯಚೂರು ಜಿಲ್ಲೆಗಳಲ್ಲ ಮರ್ಡರ್ ಕೇಸುಗಳು ಆಗತಕ್ಕಂಥಾದ್ದನ್ನು ನೋಡುತ್ತಿದ್ದೇವೆ. ಇದುವರೆಗೆ ಗುಲಬರ್ಗ ಜಿಲ್ಲೆಯಲ್ಲಿ ಆಗಿರತಕ್ಕ ಖೂನಿಗಳ ಸಂಬಂಧದಲ್ಲಿ ಪೋಲಿಸ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ತನಿಖೆ ಮಾಡಿದ್ದಾರೆಯೇ ? ಇಲ್ಲಿಯವರೆಗೆ ಆಗಿರತಕ್ಕಂಥ ಖೂನಿಗಳ ವಿಚಾರದಲ್ಲಿ ಎಷ್ಟು ಕೇಸುಗಳಲ್ಲಿ ತನಿಖೆ ಮಾಡಿ ಕೇಸುಹಾಕಿದ್ದಾರೆ? ಎಷ್ಟು ಕೇಸುಗಳಲ್ಲಿ ಬಿಡುಗಡೆಯಾಗಿದೆ ಎಂಬುದನ್ನು ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ್ಗೆ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಇಷ್ಟು ಹೇಳುವುದು ಮುಖ್ಯವಾಗಿ ಬಾರ್ಡರ್ ಪ್ರದೇಶಗಳಲ್ಲಿ ಎಷ್ಟೋ ಖೂನಿಗಳು ಆದರೂ ಸಹ ನಮಗೆ ತಿಳಿಯದ ಹಾಗೆ ಮಾಯವಾಗುತ್ತವೆ. ಹಿಂದೆ ಕೂಡ ಈ ವಿಚಾರದತ ನಾವು ಕೇಳಿಕೊಂಡಿದ್ದೇವೆ. ಎಲ್ಲೆಲ್ಲಿ ಹಗಲು ದರೋಡೆಗಳು, ಖೂನಿಗಳು ಹೆಚ್ಚೆಚ್ಚು ಆಗುತ್ತವೋ ಅಲ್ಲೆಲ್ಲಾ ಸರ್ವೆ ಮಾಡಿ ಹೆಚ್ಚಿನ ತನಿಖಾ ಸಿಬ್ಬಂದಿಗಳನ್ನು ನೇಮಿಸಿದರೆ ಅದರ ಮೂಲಕ ಕಡಿಮೆಯಾಗಬಹುದು. ಇಲ್ಲದಿದ್ದರೆ ಇದೇ ರೀತಿ ಮುಂದುವರೆಯುತ್ತದೆಂದು ನಾವು ತಿಳಿದುಕೊಂಡಿದ್ದೇವೆ.

ಈ ಪೋಲಿಸ್ ಇಲಾಖೆಯಲ್ಲಿ ದಕ್ಷತೆ ಕಡಮೆಯಾಗಿದೆ. 5 ಭಾಗಗಳಿಂದ ಬಂದು ಕೂಡಿರುವ ಬೇರೆ ಬೇರೆ ರೀತಿಯ ಮೈಸೂರು ಪೋಲೀಸ್ ಕಾನೂನನ್ನು ಏಕರೂಪವಾಗಿ ಮಾಡಲು 1963ರಲ್ಲಿ ಅನುಮತಿ ಸಿಕ್ಕಿದರೂ 2-4-1965ರಲ್ಲಿ ಜಾರಿಗೆ ತಂದಿದ್ದಾರೆ. ಅದನ್ನು ತಂದಮೇಲೂ ಪೋಲಿಸರು ಖೈದಿಗಳನ್ನು ಕೀಳು ದರ್ಜೆಯಲ್ಲಿ ನೋಡುತ್ತಿದ್ದಾರೆ. ಆಯಾಯಾ ಭಾಗದಲ್ಲಿರತಕ್ಕಂಥ ಕಾನೂನುಗಳನ್ನು ನೋಡಿ ಮಾಡದೆ ಹಿಂದೆ ಯಾವ ರೀತಿ ನಡೆದುಕೊಂಡು ಬರುತ್ತಿದ್ದರೋ ಅದೇ ರೀತಿಯಲ್ಲಿ ಈಗಲೂ ಅನುಸರಿಸುತ್ತಿದ್ದಾರೆ. ಆದ್ದರಿಂದ ನಾನು ಕಟ್ಟುನಿಟ್ಟಾಗಿ ಹೇಳುತ್ತಿದ್ದೇನೆ. ಎಲ್ಲಾ ಪೋಲಿಸ್ ಕಾನ್‍ಸ್ಟೇಬಲ್‍ಗಳಿಗೂ, ಸಬ್‍ಇನ್‍ಸ್ಪೆಕ್ಟರುಗಳಿಗೂ ಮತ್ತು ಇನ್‍ಸ್ಪೆಕ್ಟರ್‍ಗಳಿಗೂ ಆಯಾಯಾ ರಾಜ್ಯದಲ್ಲಿರುವ ತರಪೇತಿ ಕೇಂದ್ರಗಳಲ್ಲಿ ಸರಿಯಾದ ತರಪೇತಿ ಕೊಟ್ಟು ಸರಿಯಾದ ರೀತಿಯಲ್ಲಿ ಕಾನೂನನ್ನು ಅಳವಡಿಸಿಕೊಂಡು ಹೋಗುವಂತೆ ಮಾರ್ಗದರ್ಶನ ನೀಡಬೇಕು.

ಪೋಲಿಸ್ ಕಾನ್‍ಸ್ಟೇಬಲ್‍ಗಳ ವಿಚಾರದಲ್ಲಿ ಮತ್ತೊಂದು ವಿಚಾರವೆಂದರೆ, ಈ ಪಾನ ನಿರೋಧದ ಬಗ್ಗೆ ಕೆಲವು ಅಧಿಕಾರಿಗಳು ಹೇಳುತ್ತಿದ್ದಾರೆ, ಪ್ರತಿ ವರ್ಷವೂ ಕಂಟ್ರೋಲ್ ಬಂದನಂತರ ಕುಡಿಯುವವರ ಸಂಖ್ಯೆ ಕಡಿಮೆಯಾಗುತ್ತಿದೆ ಎಂದು. ಆದರೂ ಸಹ ಕಳ್ಳಸಾಗಾಣಿಕೆ ಆಗುತ್ತಲೇ ಇದೆ. ಇಲ್ಲಿಸಿಟ್ ಡಿಸ್ಟಿಲೇಷನ್ ಆಗುತ್ತಿದೆ. 1963 ರಿಂದ 1965 ರವರೆಗೆ ಕುಡಿಯುವವರ ಸಂಖ್ಯೆ ಕಮ್ಮಿಯಾಗಿದೆಯೆಂದು ತಾವು ಹೇಳಿದ್ದೀರಿ. ಆದರೆ ಕುಡಿಯುವವರು ಕುಡಿಯುತ್ತಲೇ ಇದ್ದಾರೆ. ನಡೆಯುವುದು ನಡೆಯುತ್ತಲೇ ಇದೆ. ಮಾಮೂಲಿ ಕೊಟ್ಟವರನ್ನು ಬಿಟ್ಟುಬಿಡುತ್ತಾರೆ. ಮಾಮೂಲಿ ಕೊಡದವರನ್ನು ಹಿಡಿಯುತ್ತಾರೆ. ಸರಿಯಾದ ಬಂದೋಬಸ್ತು ಮಾಡದೆಹೋದುದರಿಂದ ಇವತ್ತಿನ ದಿವಸ ಈ ಪರಿಸ್ಥಿತಿ ಬಂದಿದೆ. ಪ್ರಾಹಿಬಿಷನ್ ವಿಚಾರದಲ್ಲಿ ಈ ರೀತಿ ಹೇಳಿದ್ದಾರೆ.

Prohibition continues to be in force in all the Districts of Mysore State except Gulbarga, Raichur and Bangalore Districts excluding Ramanagaram and Channapatna taluks. It was not extended to any new area in 1965-66.

1965-66 ರಲ್ಲಿ ಎಕ್ಸ್‌ಟೆನ್ಷನ್ ಮಾಡಲಿಲ್ಲವೆಂದು ಹೇಳಿದ್ದಾರೆ. ಇವತ್ತಿನ ದಿವಸ ಈ ರೀತಿಯಾಗುತ್ತಿರುವುದಕ್ಕೆ ಪೂರ್ತಿಯಾಗಿ ತೆಗೆದುಹಾಕದಿರುವುದೇ ಕಾರಣ. ಇನ್ನಾದರೂ ಕಟ್ಟುನಿಟ್ಟಾಗಿ ನಿಯಮಗಳನ್ನು ಪಾಲಿಸಬೇಕೆಂದು ತಮ್ಮ ಅಧಿಕಾರಿಗಳಿಗೆ ಆದೇಶ ಕೊಟ್ಟು, ಸರಿಯಾದ ರೀತಿ ನಡೆಯದೇ ಇದ್ದವರನ್ನು ಶಿಕ್ಷೆಗೆ ಗುರಿಮಾಡಬೇಕು.

ಮೋಟಾರ್ ವೆಹಿಕಲ್ಸ್‌ಗೆ ಬೇರೆ ಸಿಬ್ಬಂದಿಗಳನ್ನು ನೇಮಿಸಿದ್ದೀರಿ, ಇದಕ್ಕಾಗಿ ಮೂರು ಲಕ್ಷದ ಮೇಲೆ 1965 ರಲ್ಲಿ ಖರ್ಚಾಗಿದೆ ಎಂದು ನನ್ನ ಸ್ನೇಹಿತರು ಹೇಳಿದ್ದನ್ನು ನಾನು ಪುಷ್ಟೀಕರಿಸುತ್ತೇನೆ. ಇವತ್ತಿನ ದಿವಸ ಬೆಂಗಳೂರಿನಿಂದ ಹುಬ್ಬಳ್ಳಿಗೆ ಹೋಗುವಾಗ 6 ಚೆಕ್ ಪೋಸ್ಟ್‌ಗಳು ಸಿಕ್ಕುತ್ತವೆ.

(ಶ್ರೀ ಸಿದ್ದಯ್ಯ ಕಾಶೀಮಠ್)

ಪ್ರತಿಯೊಂದು ಚೆಕ್‌ಪೋಸ್ಟ್‌ಗಳಲ್ಲೂ ಪೋಲೀಸರು ರೊಕ್ಕ ತೆಗೆದುಕೊಳ್ಳುವ ಪದ್ಧತಿ ಇದೆ. ನೀವು ಇಂಥವರನ್ನು ಹಿಡಿಯುವುದಕ್ಕಾಗಿ ಅಂಟಿಕರಪ್ಷನ್, ವಿಜಿಲೆನ್ಸ್ ಕಮೀಷನರ್‌ಗಳನ್ನು ನೇಮಿಸಿದ ಮೇಲೆ, ಪೋಲಿಸಿನವರು ಮತ್ತೊಂದು ದಾರಿ ಹಿಡಿದಿದ್ದಾರೆ. ಎಲ್ಲೆಲ್ಲಿ ಚೆಕ್‌ಪೋಸ್ಟ್‌ಗಳು ಇರುತ್ತದೋ ಅಲ್ಲಿರತಕ್ಕ ಬೀಡಿ ಅಂಗಡಿಗಳಲ್ಲಿ ಬಸ್ಸಿನವರು ಹಣಕೊಟ್ಟು ಹೋಗಬೇಕು. ನಂತರ ಅಂಗಡಿಯವರಿಂದ ಪೋಲಿಸಿನವರು ತೆಗೆದುಕೊಳ್ಳುತ್ತಾರೆ. ಇದೇ ರೀತಿ ಬೆಂಗಳೂರಿನಲ್ಲೂ ಸಹ ನಡೆಯುತ್ತದೆ. ರೈಲ್ವೇ ಸ್ಟೇಷನ್‌ಗೆ ರಿಕ್ಷಾ ಗಾಡಿ ಮಾಡಿಕೊಂಡು ಹೋದರೆ ಅಲ್ಲಿ 10-11 ವರ್ಷದ ಒಬ್ಬ ಹುಡುಗ ಇರುತ್ತಾನೆ. ಆ ಹುಡುಗನಿಗೆ ರಿಕ್ಷಾದವನು 10 ಪೈಸೆ ಕೊಡುವ ಪದ್ಧತಿ ಇದೆ. ನಂತರ ಹುಡುಗನಿಂದ ಪೋಲೀಸಿನವನು ತೆಗೆದುಕೊಳ್ಳುತ್ತಾನೆ. ಇಂಥ ಪದ್ಧತಿ ಬೆಂಗಳೂರು ನಗರದಲ್ಲಿ, ಅದೂ ರಾಜಧಾನಿಯಲ್ಲಿ ನಡೆಯುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಈ ರೀತಿಯಿಂದ ಪೋಲೀಸ್ ಕಾನ್‌ಸ್ಟೇಬಲ್‌ಗಳು ಬೇರೆ ಬೇರೆ ರೀತಿಯಿಂದ ಹಣ ತೆಗೆದುಕೊಳ್ಳುವುದಕ್ಕೆ ಕಾರಣ, ನೀವು ಅವರಿಗೆ ಸರಿಯಾದ ಸಂಬಳವನ್ನು ಕೊಡದಿರುವುದು. ಅವನಿಗೆ ಕೊಡುವ ಸಂಬಳ ಬಹಳ ಕಮ್ಮಿ. ನಮ್ಮ ನಾಯಕರು ಹೇಳಿದ ಹಾಗೆ ಅವರಿಗೆ 150 ರೂಪಾಯಿಗಳನ್ನಾದರೂ ಸಂಬಳ ಕೊಡಬೇಕು. ಪುಕ್ಕಟೆ ವಸತಿ ನಿರ್ಮಾಣಮಾಡಿಕೊಡಬೇಕು. ಇಂಥ ಅನುಕೂಲಗಳನ್ನು ಮಾಡಿಕೊಟ್ಟರೆ ಅವರೂ ಸಹ ತೀರ ಕ್ಷುಲ್ಲಕವಾದ ಕೆಲಸಗಳಿಗೆ ಕೈಹಾಕಲಾರರು ಎಂದು ಹೇಳುತ್ತೇನೆ. ಸರಿಯಾದ ಕ್ವಾಲಿಫಿಕೇಷನ್ ನೋಡಿ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕು. ಕೆಲವು ತಾಲ್ಲೂಕ್‌ಗಳಲ್ಲಿ ಒಬ್ಬೊಬ್ಬರೇ ಹೊರಗಡೆಗೆ ಹೋಗುವುದಕ್ಕೆ ಭಯ ಬಂದಿದೆ. ಕೆಲವೊಂದು ಸಾರಿ ಅವನು ಬದುಕಿ ವಾಪಸ್ಸು ಬರುತ್ತಾನೆಯೇ, ಎಂಬ ಭಯ ಬಂದಿದೆ. ಬೆಳಗಾಂ ಜಿಲ್ಲೆಯ ಕೆಲವು ತಾಲ್ಲೋಕ್‌ಗಳಲ್ಲಿ ಹಗಲು ದರೋಡೆಗಳು, ಖೂನಿಗಳು ಜಾಸ್ತಿಯಾಗಿ ಜನರು ಹೌಹಾರಿ ಓಡಿ ಹೋಗುವ ಪರಿಸ್ಥಿತಿ ಬಂದಿದೆ. ಆದಷ್ಟು ಮಟ್ಟಿಗೆ ಇಂಥವುಗಳನ್ನು ತಡೆಗಟ್ಟಲು ತಾವು ಹೆಚ್ಚಿನ ನಿಗವಹಿಸಬೇಕು, ಮತ್ತು ಪೋಲಿಸರಿಗೆ ಬೇಕಾದ ವ್ಯವಸ್ಥೆಗಳನ್ನು ಮಾಡಿಕೊಡಬೇಕು. ಮನೆಗಳನ್ನು ಕಟ್ಟಿಸಿಕೊಡಬೇಕು. ಧಾರವಾಡ ಜಿಲ್ಲೆಯಲ್ಲಿ ಕಟ್ಟಿಸಿದ್ದಾರೆ. ನಮ್ಮ ತಾಲ್ಲೋಕಿನ ಶಿರಹಟ್ಟಿ, ಲಕ್ಷ್ಮೇಶ್ವರ ಈ ಊರುಗಳಲ್ಲಿ ಪೋಲೀಸರಿಗೆ ಮನೆ ಕಟ್ಟಲು ಸರ್ಕಾರದ ಆಜ್ಞೆಯಾಗಿದ್ದರೂ ಸಹ ಇದುವರೆಗೆ ಕಟ್ಟಿಲ್ಲ. ಆದಷ್ಟು ಜಾಗ್ರತೆ ಕಟ್ಟಬೇಕು ಎಂದು ತಾವು ಸಂಬಂಧಪಟ್ಟವರಿಗೆ ತಿಳಿಸಬೇಕು. ಪೋಲೀಸರ ಅಭಿವೃದ್ಧಿಗಾಗಿ ಮೈಸೂರು ಬೆನ್‌ವಲೆಂಟ್ ಫಂಡ್ ಎಂದು 1961ರಲ್ಲಿ ನಿರ್ಮಾಣ ಮಾಡಿದಿರಿ, ಅದರ ಮುಖಾಂತರ ಪೋಲಿಸ್ ಕಾನ್‌ಸ್ಟೇಬಲ್‌ಗಳ ಕಷ್ಟಗಳ ನಿವಾರಣೆಗಾಗಿ, ಅವರ ಮಕ್ಕಳ ವಿದ್ಯಾಭ್ಯಾಸ ಆಟಪಾಟಗಳಿಗೆ, ಅವರ ಹೆಣ್ಣು ಮಕ್ಕಳಿಗೆ ಟೈಲರಿಂಗ್, ಮತ್ತು ಕಸೂತಿ ಕೆಲಸಗಳಿಗೆ ಸಾಕಷ್ಟು ಹಣ ಒದಗಿಸಬೇಕು. ಮೈಸೂರು ಬೆನವಲೆಂಟ್ ಫಂಡ್ ಎಂಬುದು ಕೆಲವು ಜಿಲ್ಲೆಗಳಲ್ಲಿ ಮಾತ್ರವಿದೆ, ಕೆಲವು ಕಡೆ ಬಂದ್ ಆಗಿದೆ. ತಾವು ವಿಚಾರ ಮಾಡಿ ಮತ್ತೆ ಮುಂದುವರಿಸಿಕೊಂಡು ಹೋಗುವ ಹಾಗೆ ಮಾಡಬೇಕು. ಸರ್ಕಾರದವರು ಈ ವಿಚಾರದಲ್ಲಿ ಹೆಚ್ಚಿನ ನಿಗಾ ಕೊಡಬೇಕೆಂದು ಸಲಹೆ ಮಾಡುತ್ತೇನೆ.

ಹೋಮ್‌ಗಾರ್ಡ್ಸ್ ಮತ್ತು ವಿಲೇಜ್ ಡಿಫೆನ್ಸ್ ದಳ ಇವುಗಳು ಪೋಲಿಸರಿಗೆ ಸಹಾಯ ಮಾಡತಕ್ಕಂಥವು. ಹಿಂದಿನ ಡಿಫೆನ್ಸ್ ಮಂತ್ರಿಗಳು ಈ ಬಿಲ್ ಸಭೆಯ ಮುಂದೆ ಇದ್ದಾಗ ಹೇಳಿದರು, ವಿಲೇಜ್ ಡಿಫೆನ್ಸ್ ದಳವನ್ನು ಎಲ್ಲಾ ಕಡೆಯಲ್ಲೂ ನಿರ್ಮಾಣ ಮಾಡುತ್ತೇವೆ ಎಂದು. ಆದರೆ ಈ ದಿನ ನಾನು ನೋಡುವಾಗ್ಗೆ ಬೊಂಬಾಯಿ ಕರ್ನಾಟಕ ಏರಿಯಾದಲ್ಲಿ ಅದರಲ್ಲೂ ಧಾರವಾಡದಲ್ಲಿ ಸ್ವಲ್ಪ ಮಾತ್ರ ಹೊಂಮ್‌ಗಾರ್ಡ್ಸ್ ಇದ್ದಾರೆ. ಬೇರೆ ಕಡೆಯಲ್ಲಿ ಇದೆಲ್ಲಾ ಇಲ್ಲ. ಇದಕ್ಕಾಗಿ ಹೆಚ್ಚಿನ ಹಣ ಖರ್ಚುಮಾಡುತ್ತಿರುವುದರಿಂದ ಇದು ಸರಿಯಾಗಿ ಕೆಲಸ ಮಾಡುತ್ತಿದೆಯೇ ಇಲ್ಲವೇ ಎಂಬುದನ್ನು ಗಣನೆಗೆ ತೆಗೆದುಕೊಂಡು, ಇದರ ಬಗ್ಗೆ ಸರಿಯಾಗಿ ನೋಡಿಕೊಳ್ಳಬೇಕೆಂದು ಪೋಲೀಸ್ ಸೂಪರಿಂಟೆಂಡೆಂಟರಿಗೆ, ಪೋಲಿಸ್ ಇನ್ಸ್‌ಪೆಕ್ಟರಿಗೆ ಆದೇಶ ಕೊಡಬೇಕು. ಈ ವಿಲೇಜ್ ಡಿಫೆನ್ಸ್‌ಗಳನ್ನು ಪ್ರತಿಯೊಂದು ತಾಲ್ಲೋಕಿನಲ್ಲೂ ಪ್ರತಿಯೊಂದು ಹಳ್ಳಿಯಲ್ಲೂ ನಿರ್ಮಿಸಿದ್ದಾದರೆ ದರೋಡೆಗಳನ್ನು ತಪ್ಪಿಸುವುದಕ್ಕೆ, ಸುರಕ್ಷಿತ ಮಾರ್ಗವನ್ನು ಉಂಟುಮಾಡುವುದಕ್ಕೆ ಅನುಕೂಲವಾಗುತ್ತದೆ; ಎಂದು ಈ ಸಮಯದಲ್ಲಿ ಹೇಳುತ್ತೇನೆ.

ಇನ್ನು ಬಂದೀಖಾನೆಗಳ ಬಗ್ಗೆ ಹೇಳಬೇಕಾದರೆ ಪೋಲಿಸ್ ಆಕ್ಟ್‌ನಲ್ಲಿ ಏಕರೂಪತೆ ಬಂದರೂ ಕೂಡ ಕಾನೂನು ಮಾತ್ರ ಏಕರೂಪತೆ ಹೊಂದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ತಾಲ್ಲೋಕ್ ಕಛೇರಿಗಳಿಗೆ ಸೇರಿದ ಹಾಗೆ ಸಣ್ಣ ಸಣ್ಣ ಬಂದೀಖಾನೆಗಳನ್ನು ಮಾಡಿದ್ದಾರೆ. ಅಲ್ಲಿ ಒದಗಿಸತಕ್ಕ ಊಟ ಅವರಿಗೆ ಸಾಲುವುದಿಲ್ಲ. ಸಬ್ ಜೈಲುಗಳಿಂದ ಈಗಾಗಲೆ ಒಂದೆರಡು ಮನವಿಗಳು ಈ ವಿಚಾರದಲ್ಲಿ ಬಂದಿರಬಹುದು. ಜೈಲಿನಲ್ಲಿರುವವರಿಗೆ ಒದಗಿಸುವ ಊಟ ಸಾಲದು ಹೆಚ್ಚು

ಒದಗಿಸಬೇಕೆಂದು. ವೈದ್ಯ ಸಹಾಯಕ್ಕಾಗಿ ಮೆಡಿಕಲ್ ಆಫೀಸರನ್ನು ನೇಮಿಸಿರುತ್ತಾರೆ. ಕೆಲವು ಕಡೆ ನೇಮಿಸಿರುವುದಿಲ್ಲ. ನೇಮಿಸಿದ್ದರೂ ಸಹ ಅವರು ಸರಿಯಾಗಿ ಹೋಗಿ ನೋಡುವುದಿಲ್ಲ. ಇದರ ಬಗ್ಗೆ ವಿಚಾರಿಸಲು ಪ್ರತಿ ಜಿಲ್ಲೆಯಲ್ಲೂ ಒಂದೊಂದು ಸಮಿತಿ ನೇಮಿಸಿದ್ದಾರೆ. ಆದರೆ ಎಷ್ಟು ಸಮಿತಿಗಳು ಸರಿಯಾಗಿ ಕೆಲಸ ಮಾಡುತ್ತಿವೆ? ತಾವು ಅದರಲ್ಲಿ ಆಸಕ್ತಿ ಇಲ್ಲದೆ ಇರತಕ್ಕವರನ್ನು ಇವೊತ್ತಿನ ದಿವಸ ನೇಮಿಸಿ, ಆಗು ಹೋಗುಗಳು ತಿಳಿಯದೇ ಇರತಕ್ಕವರನ್ನು ಕಮಿಟಿಗೆ ಹಾಕಿ ಇಂತಹ ಪರಿಸ್ಥಿತಿ ಆಗುವುದಕ್ಕೆ ಅವಕಾಶವಾಗಿದೆ. ಇನ್ನು ಮುಂದೆ ಜೈಲುಗಳನ್ನು ಉತ್ತಮ ಮಟ್ಟಕ್ಕೆ ತರಬೇಕಲ್ಲದೆ ಅಲ್ಲಿ ಇದ್ದವರಿಗೆ ಸರಿಯಾದ ಸೌಕರ್ಯ ಸಿಕ್ಕುವ ವ್ಯವಸ್ಥೆ ಮಾಡುವ ಜನರನ್ನು ಸಮಿತಿಗಳಲ್ಲಿ ಹಾಕಬೇಕು. ಛೇರ್ಮನ್ ಆಗಿರತಕ್ಕವರು ಜೈಲುಗಳನ್ನು ವಿಸಿಟ್ ಮಾಡಿ ಅಲ್ಲಿರತಕ್ಕ ಕುಂದುಕೊರತೆಗಳನ್ನು ಸರಿಪಡಿಸಲು ಸಾಧ್ಯ ಮಾಡಿಕೊಡಬೇಕು ಎಂದು ನಾನು ಹೇಳುತ್ತೇನೆ. ಅಷ್ಟೇ ಅಲ್ಲದೆ ನಮ್ಮ ಸ್ನೇಹಿತರು ಬಿಜಾಪುರ, ಗುಲ್ಬರ್ಗದಲ್ಲಿ ಅಚ್ಚುಕಟ್ಟಾದ ಜಮಖಾನಗಳನ್ನು ಮತ್ತು ಇತರ ಸಾಮಾನುಗಳನ್ನೂ ಮಾಡುತ್ತಾರೆ ಎಂದು ಹೇಳಿದರು. ಅವನ್ನು ಒಪ್ಪಿಕೊಳ್ಳುತ್ತೇನೆ. ಸಾಕಷ್ಟು ರೀತಿಯಲ್ಲಿ ದೊಡ್ಡದಾದಂಥ ಪ್ರಮಾಣದಲ್ಲಿ ಮಾಡುವುದಕ್ಕೆ ಅವಕಾಶ ಇರುವಾಗ ನಾವು ಕೊಡತಕ್ಕ ಅನುಕೂಲತೆಗಳು ಏನು? ಒಂದೆರಡು ಜಮಖಾನಗಳನ್ನು ಮಾಡಿದರೆ ಸರಿಹೋಗುತ್ತದೆಯೇ? ಅಲ್ಲಿರತಕ್ಕ ಜನಗಳಿಗೂ ಕೆಲಸ ಸಿಕ್ಕುವ ಹಾಗೆ ಏರ್ಪಾಡು ಮಾಡಬೇಕು. ಹೆಚ್ಚಿನ ರೀತಿಯಲ್ಲಿ ನುರಿತಂಥಾ ಜನರು ಅಲ್ಲಿ ಇರುವುದರಿಂದ ಇನ್ನೂ ಹೆಚ್ಚಿನ ಉತ್ತೇಜನ ಕೊಡುವ ರೀತಿಯಲ್ಲಿ ಕೈಗಾರಿಕೆಗಳನ್ನು ಟೈಲರಿಂಗ್ ಮುಂತಾದ ನಿತ್ಯಜೀವನಕ್ಕೆ ಬೇಕಾದ ತರಪೇತಿಗಳನ್ನು ಕೊಟ್ಟರೆ ಹೆಚ್ಚಿನ ಅನುಕೂಲ ಮಾಡಿದಂತಾಗುತ್ತದೆ. ಬೆಳಗಾಮಿನಲ್ಲಿರತಕ್ಕ ಜೈಲುಗಳಲ್ಲಿ ಕೆಲಸ ಮಾಡತಕ್ಕವರಿಗೆ ಏನು ಒಂದು ಕೂಲಿ ಕೊಡುತ್ತಾ ಇದ್ದೀರಿ ಪ್ರಮಾಣ ಬಹಳ ಕಡಿಮೆ ಇದೆ. ಅದನ್ನು ಪುನರ್ವಿಮರ್ಶೆ ಮಾಡಬೇಕು. ಹೊರಗೆ ಕೂಲಿಗಾರರಿಗೆ ಎಷ್ಟು ಹಣ ಕೊಡುತ್ತಿದ್ದೀರೋ, ಕನಿಷ್ಠ ಪಕ್ಷ ಅದರ 50 ಪರ್ಸೆಂಟು ಆದರೂ ಕೊಟ್ಟಿದ್ದೇ ಆದರೆ ಅದು ಸರಿಹೋಗಬಹುದು ಎಂದು ಈ ಸಮಯದಲ್ಲಿ ಸಲಹೆ ಮಾಡುತ್ತೇನೆ.

ಇನ್ನು ಫೈರ್ ಸ್ಟೇಷನ್ ಬಗ್ಗೆ ನಾನು ಹೇಳುತ್ತೇನೆ. ಪ್ರಾಮುಖ್ಯವಾಗಿ ಪ್ರತಿಯೊಂದು ನಗರದಲ್ಲಿಯೂ ಆದಷ್ಟು ಮಟ್ಟಿಗೆ ಫೈರ್‌ಸ್ಟೇಷನ್ ನಿರ್ಮಾಣ ಮಾಡಬೇಕು. ಈಗ ಇರತಕ್ಕ ಫೈರ್ ಸ್ಟೇಷನ್ಸ್ ಸರಿಯಾದ ಸಲಕರಣೆಗಳು ಇಲ್ಲದೆ, ಎಲ್ಲಾದರೂ ಬೆಂಕಿ ಬಿದ್ದಾಗ ಸರಿಯಾಗಿ ಕೆಲಸ ಮಾಡದೆ ತೊಂದರೆ ಉಂಟಾಗುವ ಪರಿಸ್ಥಿತಿ ರಾಜ್ಯದಲ್ಲಿ ಕಾಣುತ್ತಿದೆ. ತೀವ್ರವಾಗಿ ಏನೇನು ಸಾಮಗ್ರಿಗಳು ಬೇಕೋ ಅದನ್ನು ವ್ಯವಸ್ಥಿತವಾದ ರೀತಿಯಲ್ಲಿ ಕೊಡಿ, ಹಾಗೆ ಸರಿಯಾದ ಏರ್ಪಾಡು ಮಾಡಬೇಕು ಎಂದು ರಾಜ್ಯದಲ್ಲಿ ಈಗಾಗಲೇ ಆದೇಶ ಕೊಟ್ಟಿದ್ದೀರೆಂದು ತಿಳಿದುಕೊಂಡಿದ್ದೇನೆ. ಪ್ರತಿಯೊಂದು ಮುನಿಸಿಪಾಲಿಟಿಗೂ ಬೆಂಕಿ ಅನಾಹುತಕ್ಕೆ ಸಂಬಂಧಪಟ್ಟಂತೆ ವಾಹನಗಳನ್ನು ದಯಪಾಲಿಸಿದ್ದೀರಿ ಎನ್ನುವುದನ್ನು ಪತ್ರಿಕೆಯಲ್ಲಿ ಓದಿದ್ದೇನೆ. ಅದಕ್ಕಿಂತ ಮುಖ್ಯವಾಗಿ ನಗರಗಳಲ್ಲಿ ಫೈರ್‌ಗೆ ಸಂಬಂಧಪಟ್ಟಂತೆ ಸಾಮಾನುಗಳನ್ನು ಫೈರ್ ಸ್ಟೇಷನ್‌ಗೆ ಕೊಡಬೇಕು ಎಂದು ಈ ಸಮಯದಲ್ಲಿ ಹೇಳುತ್ತೇನೆ.

ಇನ್ನು ಕೊನೆಯದಾಗಿ ತುರ್ತು ಪರಿಸ್ಥಿತಿಗೆ ಸಂಬಂಧಪಟ್ಟಂತೆ ಹೇಳಬೇಕು ಎಂದರೆ, ದೇಶ ಆಪತ್ತಿಗೆ ಈಡಾದ ಸಮಯದಲ್ಲಿ ದೇಶದ ಗಡಿಯಲ್ಲಿ ಮಡಿದ ಯೋಧರ ಕುಟುಂಬಕ್ಕೆ 1,000 ರೂಪಾಯಿ ಕೊಡುಗೆಗಳನ್ನು ತೆಗೆದು ಇಟ್ಟಿದ್ದೀರಿ. ಅದು ಸ್ತುತ್ಯವಾದುದು. ಅವನು ತೀರಿ ಹೋದಮೇಲೆ, ಅವನ ಹೆಂಡತಿಗೆ ಸಹಾಯ ಮಾಡುವುದಲ್ಲದೆ, ಅವನ ಮಕ್ಕಳು ಕಾಲೇಜಿನಲ್ಲಿ ಮತ್ತು ಹೈಸ್ಕೂಲಿನಲ್ಲಿ ಓದುತ್ತಾ ಇದ್ದರೆ, ಅವರಿಗೆ ಪುಕ್ಕಟೆಯಾಗಿ ಪುಸ್ತಕವಾಗಲಿ, ಫೀ ಆಗಲಿ ಕೊಡುವುದನ್ನು ಸರ್ಕಾರ ವಹಿಸಿಕೊಳ್ಳಬೇಕು. ಇವೊತ್ತು ದೇಶದ ಸಲುವಾಗಿ ಪ್ರಾಣ ತೆತ್ತ ಜನರ ಕುಟುಂಬದವರಿಗೆ ಸಕಾಲದಲ್ಲಿ ಹಣ ಸಿಕ್ಕುತ್ತಾ ಇಲ್ಲ. ಯಾವನು ಮಡಿದವರ ಸಂಬಂಧಿಕರು ಅರ್ಜಿ ಕೊಟ್ಟಾಗ ತಕ್ಷಣ ಒಂದು ತಿಂಗಳಲ್ಲೋ, 15 ದಿವಸದಲ್ಲೋ, ಅದನ್ನು ನಿಕಾಲಿ ಮಾಡಿ ಕ್ಷಿಪ್ರದಲ್ಲಿ ಹಣ ಒದಗಿಸಿಕೊಡಬೇಕು. ಕಾಲೇಜಿನಲ್ಲಿ, ಹೈಸ್ಕೂಲಿನಲ್ಲಿ ಓದುವವರಿಗೆ ಪ್ರಾಶಸ್ತ್ಯ ಕೊಟ್ಟು ಆದಷ್ಟು ಮಟ್ಟಿಗೆ ಖರ್ಚು ವಹಿಸಿಕೊಳ್ಳಬೇಕು ಎಂದು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ.

ರೆಕ್ರೂಟ್‌ಮೆಂಟ್ ವಿಚಾರ ಹೇಳಬೇಕಾದರೆ, ಈಗಾಗಲೇ ಕಾನ್‌ಸ್ಟೇಬಲ್ ಹುದ್ದೆಗಳನ್ನು ಕೆಲವೇ ಮಾತ್ರ ಮಹಿಳೆಯರಿಗೆ ಕೊಟ್ಟಿದ್ದೀರಿ. ಅದೇ ರೀತಿ ಯಾರೂ ರಾಜ್ಯದಲ್ಲಿ ಸಬ್ ಇನ್‌ಸ್ಪೆಕ್ಟರ್ ಆಗಿ ರೆಕ್ರೂಟ್ ಆಗಿಲ್ಲ. ಮಹಿಳೆಯವರು ಮುಂದೆ ಬಂದಿದ್ದೇ ಆದರೆ, ಅವರನ್ನೂ ಕೂಡ ಇವೊತ್ತು ರೆಕ್ರೂಟ್ ಮಾಡುವಂತೆ ಆದೇಶ ನೀಡಬೇಕು ಎಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಸಭೆಯ ಮುಂದೆ ಇಟ್ಟಿರತಕ್ಕ ಜೈಲು ಖಾತೆಗೆ 57,73,500 ರೂಪಾಯಿಗಳು, ಪೋಲೀಸು ಖಾತೆಗಾಗಿ

(ಶ್ರೀ ಎಂ. ಸಿ. ಬಸಪ್ಪ)

6,50,10,100 ರೂಪಾಯಿಗಳು ಮತ್ತು ನ್ಯಾಷನಲ್ ಎಮರ್ಜೆನ್ಸಿಗೆ 13,77,000 ರೂಪಾಯಿಗಳು ಇಟ್ಟಿದ್ದಾರೆ. ನಾನು ಇದನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಈಗಾಗಲೇ ಮಾನ್ಯ ಶಿವಪ್ಪನವರು ಹಾಗೂ ಸಿದ್ದಯ್ಯ ಕಾಶೀಮಠರವರೂ ಮಾಡಿದ ಭಾಷಣವನ್ನು ಕೇಳಿದೆ. ನಮ್ಮ ರಾಜ್ಯದಲ್ಲಿ ಇರತಕ್ಕಂಥ ಪೋಲೀಸ್ ಇಲಾಖೆಯ ಒಂದು ದರ್ಜೆ ಏನು ಎಂದು ಹೇಳಿ ನಾವು ಅಳೆಯಬೇಕಾದರೆ, ಯಾವುದೋ ಒಂದು ಕಲ್ಪನೆಯನ್ನು ಮಾಡಿಕೊಂಡು ಬಹಳ ಯೋಗ್ಯವಾದ ಒಂದು ಇಲಾಖೆ ಎಂದರೆ ಯಾವ ರೀತಿ ಇರಬೇಕು. ಎಂದು ಆ ಒಂದು ಕಲ್ಪನೆಯ ದೃಷ್ಟಿಯಿಂದ ಈಗ ಇರತಕ್ಕಂಥ ಕೆಲವು ಎಡರುತೊಡರುಗಳನ್ನು ದೊಡ್ಡದಾಗಿ ಮಾಡಿ ಹೇಳುವುದರಿಂದ ಬಹುಶಃ ಏನೂ ಅನುಕೂಲವಾಗಲಾರದು ಎಂದು ನಾನು ಭಾವನೆ ಮಾಡಿಕೊಂಡಿದ್ದೇನೆ. ಶ್ರೀ ಸಿದ್ದಯ್ಯ ಕಾಶೀಮಠ್ ಅವರ ಭಾಷಣದಲ್ಲಿ ನಮ್ಮ ಮುಂದೆ ಇಟ್ಟಿರತಕ್ಕ ಕ್ರೈಮ್‌ಗಳ ಅಂಶ ನೋಡುವ ಪಕ್ಷದಲ್ಲಿ 1963-64ನೇ ಸಾಲಿನಲ್ಲಿ ಜಾಸ್ತಿಯಾಗಿದೆ ಮತ್ತು 1965ರಲ್ಲಿ ಅನೇಕ ಬಾಬುಗಳಲ್ಲಿ ಜಾಸ್ತಿಯಾಗಿದೆ ಎಂದು ಹೇಳಿದರು. ಬಹುಶಃ ನಾನು ತಿಳಿದುಕೊಂಡಿರುವುದು ಈ ಕ್ರೈಮ್ ಏನು ಇದೆ ಅದನ್ನು ನಿಲ್ಲಿಸುವುದಕ್ಕೆ ಪೋಲೀಸ್ ಇಲಾಖೆಗೆ ಸಾಧ್ಯ ಇಲ್ಲದ ಕೆಲಸ. ಏನಾದರೂ ತಪ್ಪು ಮಾಡಿದವರನ್ನು ನ್ಯಾಯಾಸ್ಥಾನದ ಮುಂದೆ ತೆಗೆದುಕೊಂಡು ಹೋಗುವುದು ಅವರಿಗೆ ಶಿಕ್ಷೆ ಆಗುವಂತೆ ಮಾಡುವುದು ಅವರ ಜವಾಬ್ದಾರಿ ಆದರೆ ಕ್ರೈಮ್ ಆಗದೆ ಇರುವುದಕ್ಕೆ ಇವರು ಕೆಲಸ ಮಾಡಬೇಕು ಎಂದು ಏನಾದರೂ ಭಾವನೆ ಇಟ್ಟುಕೊಂಡಿದ್ದರೆ, ಅದು ತಪ್ಪಾಗುತ್ತದೆ. ಬಹುಶಃ ಈ ಸಮಾಜದಲ್ಲಿ ದುಷ್ಕೃತ್ಯಗಳು ಕಡಿಮೆ ಆಗಬೇಕು ಎಂದರೆ, ಅದು ಸಮಾಜ ಅಭಿವೃದ್ಧಿಯನ್ನು ಅವಲಂಬಿಸಿವೆ. ಜಗತ್ತಿನಲ್ಲಿ ಸಮಾಜ ಮುನ್ನಡೆದಂತೆ ಜನರಲ್ಲಿ ಸಂಸ್ಕೃತಿ ಹೆಚ್ಚಿದಂತೆ ಜನರಲ್ಲಿ ಕೆಟ್ಟ ಚಳುವಳಿ ಮತ್ತು ದುಷ್ಕೃತ್ಯಗಳು ಕಡಿಮೆಯಾಗುತ್ತದೆ. ಪೋಲೀಸಿನವರು ಇವೆಲ್ಲವನ್ನೂ ಕೂಡ ತೊಡೆದು ಹಾಕುತ್ತಾರೆ ಎನ್ನುವ ಭಾವನೆ ಮಾಡಿಕೊಂಡಿದ್ದರೆ ಅದು ತಪ್ಪಾಗುತ್ತದೆ ಎಂದು ನಾನು ಅಂದುಕೊಂಡಿದ್ದೇನೆ. ಶ್ರೀ ಶಿವಪ್ಪನವರು ಹೇಳಿದರು, ಒಬ್ಬ ಪೋಲೀಸಿನವನು ಕುಡಿದುಕೊಂಡು ಡ್ರೈವರನ್ನು ಸಹ ಹಿಡಿದುಕೊಂಡು ಹೋಗುತ್ತಿದ್ದ ಎಂದು. ಪೋಲೀಸಿನವರೇ ಕಾನೂನು ಮುರಿಯುತ್ತಾರೆ, ಪ್ರಚೋದನೆ ಮಾಡುತ್ತಾರೆ ಎಂದು ಭಾವನೆ ಮಾಡಿಕೊಂಡಿದ್ದರೆ, ದೇಶದ 'ಲಾ ಅಂಡ್ ಆರ್ಡರ್' ಸ್ಥಿತಿಗತಿ ಏನಾಗುತ್ತದೆ? ಅವರು ಹೇಳುವುದರಲ್ಲಿ ಸತ್ಯವಿಲ್ಲ ಎಂದು ಹೇಳುವುದಿಲ್ಲ. ಸಾಮಾನ್ಯವಾಗಿ ಒಂದು ಸಮಾಜದಲ್ಲಿ ಯಾವರೀತಿ ಒಳ್ಳೆಯವರೂ, ಕೆಟ್ಟವರು ಇರುತ್ತಾರೋ, ಹಾಗೆಯೇ ಈ ಇಲಾಖೆಯಲ್ಲಿಯೂ ಈ ದುಶ್ಚಟಗಳಿಗೆ ಒಳಗಾಗಿ ತಮ್ಮ ಕರ್ತವ್ಯಗಳನ್ನು ಸರಿಯಾದ ರೀತಿಯಲ್ಲಿ ಮಾಡದೇ ಇರತಕ್ಕ ಒಬ್ಬೊಬ್ಬ ಅಧಿಕಾರಿ ಇಲ್ಲದೇ ಇಲ್ಲ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಹಾಗೆ ಅಲ್ಲಲ್ಲಿ ಇರುವವರನ್ನು ಕಿತ್ತು ಹಾಕಬೇಕು, ಅವರಿಗೆ ಶಿಕ್ಷೆ ಮಾಡತಕ್ಕಂಥಾದ್ದು ಸರ್ಕಾರದ ಜವಾಬ್ದಾರಿ, ಇದನ್ನು ಸರ್ಕಾರ ಸರಿಯಾದ ರೀತಿಯಲ್ಲಿ ನಿರ್ವಹಿಸಿಕೊಂಡು ಬರುತ್ತಾರೆಂದು ನಾನು ಹೇಳುತ್ತೇನೆ. ಸಾಮಾನ್ಯವಾಗಿ 10 ವರ್ಷಗಳಿಂದ ಪೋಲೀಸ್ ಇಲಾಖೆಗೆ ಜನರನ್ನು ತೆಗೆದುಕೊಳ್ಳುವಂಥಾದ್ದು ಅಗಲಿ, ಅವರಿಗೆ ಪ್ರಮೋಷನ್ ಕೊಡತಕ್ಕಂಥಾದ್ದು ಆಗಲಿ ನಾವು ನೋಡಿದ ಪಕ್ಷದಲ್ಲಿ ಅವಿದ್ಯಾವಂತರನ್ನು ಸರಿಯಾಗಿ ದೇಹಧಾರ್ಢ್ಯ ಇಲ್ಲದೆ ಇರುವವರನ್ನು ಕಾನ್‌ಸ್ಟೇಬಲ್ ಆಗಿ ತೆಗೆದುಕೊಂಡಿರತಕ್ಕ ಅನೇಕ ನಿದರ್ಶನಗಳು ಇವೆ. ಅವರು 10-15-20 ವರ್ಷ ಸರ್ವಿಸ್ ಮಾಡಿದ್ದಾರೆ. ಅವರೆಲ್ಲರನ್ನೂ ಮನೆಗೆ ಕಳುಹಿಸುವುದು ಸರಿಯಾದುದಲ್ಲ. ಬಹುಶಃ ಅವರು ರಿಟೈರ್ ಆದಮೇಲೆ ಮುಂದೆ ಆ ರೀತಿಯ ಜನರು ಈ ಇಲಾಖೆಗೆ ಬಾರದೆ ಇರುವುದಕ್ಕೆ ಸಾಕಷ್ಟು ಕ್ರಮ ತೆಗೆದುಕೊಂಡಿದ್ದೀರಿ. ರೆಕ್ರೂಟ್‌ಮೆಂಟ್ ಸಿಷ್ಟಂ ಏನು ಇದೆ, ಅದು ಕಾನ್‌ಸ್ಟೇಬಲ್‌ರಿಗೆ ಇರಬಹುದು, ಸಬ್ ಇನ್‌ಸ್ಪೆಕ್ಟರಿಗೆ ಇರಬಹುದು, ಅದನ್ನು ನೋಡಿದರೆ ಮೈಸೂರು ಸರ್ಕಾರದವರು ನಿಜವಾಗಿಯೂ ಸ್ವಲ್ಪ ದಿವಸದಲ್ಲಿ ಒಳ್ಳೆಯ ಶಿಸ್ತಿನ ಯೋಗ್ಯ ಮತ್ತು ದಕ್ಷತೆಯಿಂದ ಕೂಡಿದ ಪೋಲೀಸ್ ಇಲಾಖೆಯನ್ನು ಸಂಸ್ಥಾನದಲ್ಲಿ ತರುತ್ತಾರೆ ಎನ್ನತಕ್ಕಂಥ ಧೋರಣೆಯನ್ನು ಹೊಂದಿರತಕ್ಕ ರೀತಿಯಲ್ಲಿ ಇದೆ ಎಂದು ಕಾಣುತ್ತದೆ. ಹಿಂದೆ ಪೋಲೀಸ್ ಕಾನ್‌ಸ್ಟೇಬಲನ್ನು ಇಲಾಖೆಗೆ ತೆಗೆದುಕೊಂಡರೆ ಮಾರುದಿವಸವೇ ಅವನಿಗೆ ಒಂದು ಜವಾಬ್ದಾರಿ ಕೊಡುತ್ತಾ ಇದ್ದರು. ಅವನು ಪೋಲೀಸ್ ಬಟ್ಟೆ ಹಾಕಿಕೊಂಡು ರಸ್ತೆಯಲ್ಲಿ ಹೋಗತಕ್ಕ ಲಾರಿಯಿಂದ ದುಡ್ಡು ತೆಗೆದುಕೊಳ್ಳುತ್ತಾನೋ ಏನು ಮಾಡುತ್ತಾನೋ ಗೊತ್ತಾಗುತ್ತಿರಲಿಲ್ಲ. ಆದರೆ ಇವೊತ್ತು ಸರಿಯಾದ ದೇಹ ಧಾರಢ್ಯ ಇರುವವರನ್ನು ಈ ಇಲಾಖೆಗೆ ತೆಗೆದುಕೊಳ್ಳುತ್ತಾರೆ. ತೆಗೆದುಕೊಂಡಮೇಲೆ ಪೋಲೀಸ್ ಟ್ರೈನಿಂಗ್ ಸ್ಕೂಲಿನಲ್ಲಿ ಅವರಿಗೆ ಮೂರು ಅಥವಾ ಆರು ತಿಂಗಳು ಶಿಸ್ತಿನ ಟ್ರೈನಿಂಗ್ ಕೊಡುತ್ತಾರೆ. ತನ್ನ ಕರ್ತವ್ಯವನ್ನು ಎಷ್ಟು ನಿಷ್ಠೆಯಿಂದ ಪರಿಪಾಲನೆ ಮಾಡಬೇಕು ಎನ್ನುವ ವಿಚಾರದಲ್ಲಿ ಸಾಕಷ್ಟು ತಿಳುವಳಿಕೆ ಕೊಡುತ್ತಾರೆ. ಹೀಗೆ ಎಲ್ಲಾ ಟ್ರೈನಿಂಗ್ ಮುಗಿದಮೇಲೆ ಅವನಿಗೆ ಜವಾಬ್ದಾರಿ ಕೊಟ್ಟು ಕೆಲಸ ಮಾಡಿಸುತ್ತಾರೆ.

3-00 P.M.

ಇವತ್ತು ದುರಭ್ಯಾಸದ ವಿಷಯವನ್ನು ತೆಗೆದುಕೊಂಡರೆ ಇದರಲ್ಲಿ ಎಷ್ಟು ಪರ್‌ಸೆಂಟ್ ಇಂಥ ಜನರಿದ್ದಾರೆ? ಬಹಳ ಕಡಿಮೆ. ಎಲ್ಲೋ ಒಂದೆರಡು ಜನರಿರಬಹುದು. ಹೊಸದಾಗಿ ಇಲಾಖೆಯಲ್ಲಿ ಸೇರಿರುವವರನ್ನು ಗಣನೆಗೆ ತೆಗೆದುಕೊಂಡರೆ ಒಳ್ಳೆಯ ಶಿಕ್ಷಣ ಪಡೆದಿರತಕ್ಕಂತಹ ಅಧಿಕಾರಿಗಳು ಬಹಳ ದಕ್ಷತೆಯಿಂದ, ನಿಷ್ಪಕ್ಷಪಾತದಿಂದ, ಯೋಗ್ಯ ರೀತಿಯಿಂದ ಕೆಲಸವನ್ನು ನಿರ್ವಹಿಸುತ್ತಾರೆ ಎಂದು ಹೇಳಿದರೆ ಅದು ತಪ್ಪಾಗಲಾರದು.

ಇನ್ನೊಂದು ವಿಚಾರವೇನೆಂದರೆ, ಇಂದು ಕೇಸುಗಳನ್ನು ಕೋರ್ಟುಗಳ ಮುಂದೆ ತೆಗೆದು ಕೊಂಡು ಹೋಗುವ, ಅಧಿಕಾರವನ್ನು ಇಂದು ಪೋಲೀಸ್ ಸಬ್ ಇನ್‌ಸ್ಪೆಕ್ಟರವರಿಂದ ಕೆಳಗಡೆ ಇರುವ ಅಧಿಕಾರಿಗಳಿಗೆ ಕೊಟ್ಟಂತೆ ಕಾಣುವುದಿಲ್ಲ. ಸಾಮಾನ್ಯವಾಗಿ ಒಬ್ಬ ಹೆಡ್‌ಕಾನ್‌ಸ್ಟೇಬಲನು ಒಂದು ಪಕ್ಷದಲ್ಲಿ, ಒಂದು ಏರಿಯಾದಲ್ಲಿ ಜವಾಬ್ದಾರಿಯುತವಾದ ಮತ್ತು ಅಲ್ಲಿ ನಡೆಯುತಕ್ಕ ಕೃತ್ಯಗಳನ್ನು ಸರ್ಕಾರಕ್ಕೆ ರಿಪೋರ್ಟು ಮಾಡತಕ್ಕಂಥಾದ್ದು ಮತ್ತು ಅದನ್ನು ನ್ಯಾಯಾಲಯದ ಮುಂದೆ ತೆಗೆದು ಕೊಂಡು ಹೋಗುವ ಜವಾಬ್ದಾರಿಯುತನಾದ ಮನುಷ್ಯ ಎಂದು ನಾನು ಭಾವಿಸುತ್ತೇನೆ. ಆದರೆ ಇವತ್ತಿನ ಒಂದು ಕ್ರಮವನ್ನು ನೋಡುವುದಾದರೆ, ಒಬ್ಬ ಸಬ್ ಇನ್‌ಸ್ಪೆಕ್ಟರ್ ದರ್ಜೆಯ ಅಧಿಕಾರಿಯೇ ಕೋರ್ಟಿನ ಮುಂದೆ ಹೋಗಬೇಕು, ಅವನೇ ಚಾರ್ಜ್ ಶೀಟ್ ಹಾಕಬೇಕು. ಈಗ ಏನು ಒಂದು ಔಟ್‌ಪೋಸ್ಟು ಎಂದು ಕರೆಯುತ್ತಾರೆ. ಏನು ಒಂದು ಜುರಿಸ್‌ಡಿಕ್ಷನ್ ಎಂದು ಹೇಳುತ್ತಾರೆ, ಅಲ್ಲಿನ ಅಧಿಕಾರವನ್ನು ಸ್ವಲ್ಪಮಟ್ಟಿಗೆ ಇನ್ನುಳಿದ ಅಧಿಕಾರಿಗಳಿಗೂ ಕೊಟ್ಟರೆ, ಅವರು ಇನ್ನೂ ಹೆಚ್ಚು ಹುರುಪಿನಿಂದಲೂ, ಉತ್ಸಾಹದಿಂದಲೂ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಈಗ ಅವನ ಜವಾಬ್ದಾರಿಯಾಗಿರುವುದು ಏನೆಂದರೆ ಸಬ್ ಇನ್‌ಸ್ಪೆಕ್ಟರಿಗೆ ರಿಪೋರ್ಟು ಮಾಡುವುದು ಮತ್ತು ಅವನು ಹೇಳಿದುದನ್ನು ಕೋರ್ಟಿಗೆ ಹೇಳತಕ್ಕದ್ದು, ಇಷ್ಟೇ ಅಲ್ಲದೆ ಬೇರೇನೂ ಇಲ್ಲ. ಇದರಿಂದ ಅವನಿಗೆ ಅಷ್ಟು ಉತ್ಸಾಹದಾಯಕವಾಗಿ ಕೆಲಸ ಮಾಡುವುದಕ್ಕೆ ಆಗಲಾರದು ಎಂಬುದು ನನ್ನ ಭಾವನೆ. ಇದನ್ನು ಈ ಇಲಾಖೆಯವರು ಪರಿಶೀಲನೆ ಮಾಡಬೇಕೆಂದು ಹೇಳಬಯಸುತ್ತೇನೆ.

ಮತ್ತು ಜೈಲಿನ ವಿಚಾರವಾಗಿ ಅನೇಕ ಮಾನ್ಯ ಸದಸ್ಯರುಗಳು ಮಾತನಾಡಿದರು. ನಾನು ಗುಲ್ಬರ್ಗ ಜೈಲಿಗೆ ಒಂದಲ್ಲ ಎರಡು ಬಾರಿ ಹೋಗತಕ್ಕ ಸಂದರ್ಭ ಇತ್ತು. ಅಲ್ಲಿ ನೋಡಿದ ಪಕ್ಷದಲ್ಲಿ ಸರಿಯಾದ ಜನರು ಯಾವ ರೀತಿ ಇದ್ದಾರೆ, ಅದೇ ರೀತಿ ಜೈಲುವಾಸಿಗಳೂ ಇರುತ್ತಾರೆ. ಅಲ್ಲಿ ನಡೆಯುತಕ್ಕ ಕೆಲಸಕಾರ್ಯಗಳನ್ನು ಪರಿಶೀಲನೆ ಮಾಡತಕ್ಕದ್ದು ಅಗತ್ಯ ಎಂದು ನನಗನಿಸುತ್ತದೆ. ಬಹುಶಃ ಯಾರಾದರೂ ಅಲ್ಲಿಯ ಜೈಲುವಾಸಿಗಳು ಧರಿಸಿರತಕ್ಕಂತಹ ಬಟ್ಟೆಗಳನ್ನು ನೋಡಿ ಅವರು ಜೈಲುವಾಸಿಗಳೆಂದು ಭಾವಿಸಬೇಕೇ ಹೊರತು, ಅಲ್ಲಿ ಅವರು ಮಾಡಿರತಕ್ಕ ಕೆಲಸಕಾರ್ಯಗಳನ್ನು ನೋಡಿದರೆ ತುಂಬಾ ಶ್ಲಾಘನೀಯವಾಗಿದೆ. ಅಲ್ಲಿ ಒಂದು ಕಾರ್ಖಾನೆ ನಡೆದಹಾಗೆ ನಡೆಯುತ್ತಿದೆ. ಅವರು ಅನೇಕ ಕೈಗಾರಿಕೆಗಳನ್ನು ಮಾಡುತ್ತಿದ್ದಾರೆ. ನಾನು ಅಲ್ಲಿನ ಕಾರ್ಪೆಂಟರಿಯನ್ನು ನೋಡಿದ್ದೇನೆ. ಅಲ್ಲಿ ಮಗ್ಗಗಳನ್ನು ಹಾಕಿಕೊಂಡು ಬಟ್ಟೆಗಳನ್ನು ಮಾಡುವುದನ್ನು ನೋಡಿದ್ದೇನೆ. ಅಷ್ಟೇ ಅಲ್ಲದೆ ಅವರು ಒಂದು ರಿಕ್ರಿಯೇಷನಲ್ ಆಕ್ಟಿವಿಟಿ ಕೂಡ ಇಟ್ಟುಕೊಂಡಿದ್ದಾರೆ. ಮತ್ತು ನಾಟಕಗಳನ್ನು ಆಡತಕ್ಕ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ. ಈಗ ಅನೇಕ ಸಂದರ್ಭಗಳಲ್ಲಿ ಮರ್ಡರ್‌ಸ್ ಏಕೆ ಜಾಸ್ತಿಯಾಗಿದೆ ಎಂಬುದನ್ನು ಸರ್ಕಾರ ಯೋಚನೆ ಮಾಡಬೇಕು.

> On page 103 of Review of the working of the Departments: Crime has shown a slightly downward trend during the year under all heads except murders. Out of 644 murders reported during the year many are attributable to family disputes, sudden provocation and sexual jealousy, etc.

ಹೀಗೆ ಅನೇಕ ಸಂದರ್ಭಗಳಲ್ಲಿ ಮನುಷ್ಯ ಕೆಟ್ಟ ಕೆಲಸ ಮಾಡಬೇಕಾದ ಸಂದರ್ಭ ಬರುತ್ತದೆ. ಆದಕ್ಕೆ ತುತ್ತಾಗಿ ಎಷ್ಟೋ ಸಂದರ್ಭಗಳಲ್ಲಿ ಜೈಲುವಾಸವನ್ನು ಅನುಭವಿಸಬೇಕಾದ ಪ್ರಸಂಗಳು ಬರುತ್ತವೆ, ಅಂಥವರಿಗೆ ಜೈಲುಗಳಲ್ಲಿರತಕ್ಕಂತಹ ಕಾಲದಲ್ಲಿ ಪ್ರತಿ ವ್ಯಕ್ತಿಗೂ ನಾನು ಹಾಗೆ ಮಾಡಬಾರದಿತ್ತು. ನಾನು ಒಳ್ಳೆಯ ಮನುಷ್ಯನಾಗಿ ಬಾಳಬೇಕಾಗಿತ್ತು ಎಂಬ ಭಾವನೆ ಬರುವ ರೀತಿಯಲ್ಲಿ ಅಲ್ಲಿ ಅನೇಕ ಸನ್ನಿವೇಶಗಳನ್ನು ಕಲ್ಪಿಸಿದ್ದಾರೆ. ಅದಲ್ಲದೆ ಜೈಲಿಗೆ ಹೋದವರು ಕೂಡ ಜೈಲಿನಿಂದ ಬಂದ ಮೇಲೆ ಒಂದು ಒಳ್ಳೆಯ ವೃತ್ತಿಯನ್ನು ಅವಲಂಬಿಸಿ, ಒಳ್ಳೆಯ ನಾಗರಿಕನಾಗಿ ಬೆಳೆಯುತಕ್ಕಂತ ವ್ಯವಸ್ಥೆಯನ್ನು ಕೂಡ ಅಲ್ಲಿ ಕಲ್ಪನೆ ಮಾಡಿಕೊಂಡಿದ್ದಾರೆ. ಆದರೆ ಒಂದು ವಿಷಯವನ್ನು ನಾವು ಇಲ್ಲಿ ಗಮನಿಸಬೇಕು. ಅಲ್ಲಿ ಕೆಲವರು ಅನೇಕ ಬಾರಿ ಅಪರಾಧಗಳನ್ನು ಮಾಡಿ ಬಂದಿರತಕ್ಕ ಜನರು

(ಶ್ರೀ ಎಂ. ಸಿ. ಬಸಪ್ಪ)

ಇರುತ್ತಾರೆ. ಅವರು ಹುಟ್ಟು ಕ್ರಿಮಿನಲ್ಸ್ ಆಗಿರುತ್ತಾರೆ. ಅವರಿಗೆ ಈ ರೀತಿ ಬೋಧನೆಗಳನ್ನು ಕೊಟ್ಟರೆ ಅವರು ಉತ್ತಮರಾಗುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಅನೇಕ ಸಂದರ್ಭಗಳಲ್ಲಿ ತಮ್ಮ ಜೀವಮಾನವನ್ನೆಲ್ಲಾ ಜೈಲಿನಲ್ಲಿ ಕಳೆಯುವವರೂ ಆಗಿದ್ದಾರೆ. ಸಾಮಾನ್ಯವಾಗಿ ನಾವು ಇಂದು ನೋಡುವುದಾದರೆ, ಜೈಲುಗಳಲ್ಲಿ ಕೂಡ ಅನೇಕ ಮಾರ್ಪಾಟುಗಳನ್ನು ಮಾಡಿದ್ದಾರೆ, ಅದರಲ್ಲೂ ಗುಲ್ಬರ್ಗದ ಜೈಲನ್ನು ಪಟ್ಟಣದ ಮಧ್ಯದಿಂದ ಹೊರಗಡೆ ಹಾಕಬೇಕು, ಅಲ್ಲಿ ವಿಶೇಷ ಸೌಕರ್ಯಗಳನ್ನು ಕಲ್ಪಿಸಬೇಕೆಂದು ಇದ್ದಾರೆ. ಈ ವರ್ಷ ಬಜೆಟ್‌ನಲ್ಲೂ 5 ಲಕ್ಷ ರೂಪಾಯಿ ಕೂಡ ಸರ್ಕಾರದವರು ಇಟ್ಟುಕೊಂಡಿದ್ದಾರೆ. ಅದರ ಸ್ಥಿತಿಯನ್ನು ಇನ್ನೂ ಉತ್ತಮಪಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

ಮತ್ತು ನ್ಯಾಷನಲ್ ಎಮರ್ಜೆನ್ಸಿ ಹಾಗೂ ಡಿ. ಐ. ಆರ್. ವಿಚಾರದಲ್ಲಿ ಅನೇಕ ಸದಸ್ಯರು ಟೀಕೆ ಮಾಡಿದರು. ಅನೇಕ ಸಂದರ್ಭಗಳಲ್ಲಿ ಸರ್ಕಾರ ಅಧಿಕಾರವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಲ್ಲವೆಂದು ಹೇಳಿದ್ದಾರೆ. ಬಹುಶಃ ಈ ಅಧಿಕಾರವನ್ನು ಉಪಯೋಗಿಸಿದ ಪಕ್ಷದಲ್ಲಿ ಕರ್ತವ್ಯ ಲೋಪವಾಗುತ್ತಿತ್ತು ಮತ್ತು ಅನೇಕರಿಗೆ ತೊಂದರೆಯಾಗುತ್ತಿತ್ತು. ಇದಕ್ಕೆ ಒಂದು ನಿದರ್ಶನ ಹೇಳುವುದಾದರೆ, ಇತ್ತೀಚೆಗೆ ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ನಡೆದ ಗಲಭೆಗಳಲ್ಲಿ, ಪೋಲೀಸ್ ಇಲಾಖೆಯವರ ಒಂದು ಸಮಯೋಜಿತ ಕಾರ್ಯದಕ್ಷತೆ ನಡೆಯದಿದ್ದ ಪಕ್ಷದಲ್ಲಿ ಆ ಗಲಭೆ ಇನ್ನೂ ಜಾಸ್ತಿಯಾಗಿ ಅಪಾರವಾದ ನಷ್ಟವನ್ನು ನಾವು ಅನುಭವಿಸಬೇಕಾಗಿತ್ತು. ಈ ಮಾತುಗಳನ್ನು ಕಣ್ಣಾರೆ ಕಂಡ ಜನಗಳ ಬಾಯಿಂದ ಕೇಳಿ ಇಲ್ಲಿ ಹೇಳುತ್ತಿದ್ದೇನೆ. ಈ ರೀತಿ ಅನೇಕ ಸಂದರ್ಭಗಳಲ್ಲಿ ಅಧಿಕಾರವನ್ನು ಸರ್ಕಾರ ತೆಗೆದುಕೊಂಡು ಸಮಯೋಜಿತವಾಗಿ ಉಪಯೋಗಿಸದೆ ಇದ್ದರೆ ಬಹುಶ ಇಂದು ಭೀಕರ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೆವು. ಇದರಿಂದ ಮಾನ್ಯ ಸ್ನೇಹಿತರು ಹೇಳಿದಂತಹ ಮಾತುಗಳು ಸರಿಯಾದುದು ಅಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಮತ್ತು ಈ ಇಲಾಖೆಯ ಜನರಿಗಾಗಿ ಮತ್ತು ಅಧಿಕಾರಿಗಳಿಗಾಗಿ ಅನೇಕ ಸೌಕರ್ಯಗಳನ್ನು ಒದಗಿಸುವುದಕ್ಕೆ ಸರ್ಕಾರ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ನಿದರ್ಶನ ಕೊಡುವುದಾದರೆ, ಪೋಲೀಸ್ ಕಾನಸ್ಟೇಬಲ್ ಮತ್ತು ಕೆಳದರ್ಜೆಯ ನೌಕರರು ಬಹಳ ಕಷ್ಟದಲ್ಲಿದ್ದಾರೆ. ಅವರೆಲ್ಲರಿಗೂ ಒಂದು ವಸತಿ ಕೊಡತಕ್ಕದ್ದು ಸರ್ಕಾರದ ಕರ್ತವ್ಯ. ಬಹುಶಃ ಅವರು ದಕ್ಷತೆಯಿಂದ ಕರ್ತವ್ಯ ನಿರ್ವಹಿಸಬೇಕಾದರೆ, ಅವರನ್ನು ರಕ್ಷಣೆ ಮಾಡಬೇಕಾದುದು, ಅವರಿಗೆ ಸರಿಯಾದಂತಹ ಸೌಲಭ್ಯಗಳನ್ನು ಕೊಡಬೇಕಾದುದು ಅತ್ಯವಶ್ಯ. ನಮ್ಮ ಸಂಸ್ಥಾನಗಳಲ್ಲಿ ಅನೇಕ ಕಡೆ ಇವರಿಗಾಗಿ ವಸತಿ ಕಲ್ಪಿಸಲು ಮನೆಗಳನ್ನು ಕಟ್ಟಿಸಿದ್ದಾರೆ. ಉದಾಹರಣೆಗೆ ಚಾಮರಾಜನಗರದಲ್ಲಿ ಸುಮಾರು 4-5 ಲಕ್ಷ ರೂಪಾಯಿ ಖರ್ಚುಮಾಡಿ ಅಲ್ಲಿರತಕ್ಕಂತಹ ಪೋಲೀಸ್ ಅಧಿಕಾರಿಗಳಿಗೆ ಎಲ್ಲರಿಗೂ ವಸತಿ ಸೌಕರ್ಯವನ್ನು ಕಲ್ಪಸಬೇಕೆಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಬಹುಶಃ 3-4 ತಿಂಗಳಲ್ಲಿ ಅದು ಪೂರ್ಣವಾಗಬಹುದು, ಮತ್ತು ಇದರಿಂದ ಸರ್ಕಾರದವರು ಹೆಚ್ಚಿನ ಒಂದು ಪ್ರಗತಿಯನ್ನು ಸಾಧನೆ ಮಾಡಿದ್ದಾರೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಕೊನೆಯದಾಗಿ ಹೇಳುವುದಾದರೆ, ನಮ್ಮ ಈ ಪೋಲೀಸ್ ಇಲಾಖೆಯಾಗಲೀ, ಜೈಲು ಇಲಾಖೆಯಾಗಲಿ, ನಮ್ಮ ಸಂಸ್ಥಾನದಲ್ಲಿ ತಕ್ಕಷ್ಟು ಪ್ರಗತಿಯನ್ನು ಸಾಧನೆ ಮಾಡುತ್ತಾ ಇದೆ. ದಕ್ಷತೆಯ ಕೆಲಸ ಮಾಡುತ್ತಾ ಇದೆ ಎಂಬುದನ್ನು ಇಲ್ಲಿ ಹೇಳಿ, ಮಾನ್ಯ ಗೃಹ ಸಚಿವರು ಮಂಡಿಸಿರತಕ್ಕಂತಹ ಈ ಬೇಡಿಕೆಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮಿ, ಈಗ ಇರುವ ನ್ಯೂನತೆಗಳನ್ನು ಹೇಗೆ ಸರಿಪಡಿಸಬೇಕು, ಹೇಗೆ ಇರಬೇಕಾಗಿತ್ತು, ಹೇಗೆ ಇದೆ, ಎನ್ನುವ ವಿಚಾರದಲ್ಲಿ ಏನಾದರೂ ಮಾತನಾಡಿದರೆ ಸ್ವಲ್ಪ ಪ್ರಯೋಜನವಾದೀತು ಎಂದು ಒಬ್ಬ ಮಾನ್ಯ ಸದಸ್ಯರು ಹೇಳಿದರು. ಆ ದೃಷ್ಟಿಯಿಂದ ನಾನು ಒಂದೆರಡು ಮಾತು ಹೇಳಬೇಕೆಂದಿದ್ದೇನೆ. ದೂರುಗಳನ್ನು ಕೊಟ್ಟರೆ ಆ ಮನುಷ್ಯನ ಜೇಬಿನಲ್ಲಿ ದುಡ್ಡಿಲ್ಲದೆ ಇದ್ದರೆ ಅದು ನಡೆಯುವ ಮಾತಲ್ಲ. ಇದು ಏಕೆ ಎನ್ನುವುದಕ್ಕೆ ನನ್ನ ಸ್ವಂತ ಅನುಭವದಿಂದ ಹೇಳುತ್ತೇನೆ. ನಾನು ವಿಧಾನ ಸಭಾ ಸದಸ್ಯನಾದಮೇಲೆ ನನ್ನ ಊರಿನಲ್ಲಿ ಒಂದು ರಾತ್ರಿ ಕಳ್ಳತನವಾಯಿತು. ನಾನು ಅಮಲ್ದಾರರಿಗೆ ಒಂದು ಪೋಲೀಸ್ ಇಲಾಖೆಗೆ ಒಂದು ಹೀಗೆ ಎರಡು ಅರ್ಜಿಗಳನ್ನು ಬರೆದು ತೆಗೆದುಕೊಂಡುಹೋಗಿ ಕೊಟ್ಟೆ. ಒಳ್ಳೆಯ ಗ್ರಹಚಾರ ತೆಗೆದುಕೊಂಡು ಬಂದಿರಿ, ಏನೇನಾಯಿತು ಎಂದು ಅಮಲ್ದಾರರು ಕೇಳಿದರು. ಸ್ಥಳದ ಜನರಿರಬಹುದು ಅಥವಾ ಸುತ್ತಮುತ್ತಲಿನ ಜನ ಮಾಡಿರಬಹುದು. ನಿಮ್ಮ ಅಂಕಿ ಸಂಖ್ಯೆಗಳಿಗೆ ಸೇರಲಿ ಎಂದು ತೆಗೆದುಕೊಂಡು ಬಂದಿದ್ದೇನೆ ಎಂದು ಅರ್ಜಿಗಳನ್ನು ಕೊಟ್ಟೆ. ಇವತ್ತಿನವರೆಗೂ ಯಾರಾದರೂ ಅಲ್ಲಿಗೆ ಬರುವ

ದಾಗಲೀ, ಕೇಳುವುದಾಗಲೀ ಆಗಿಲ್ಲ, ಅವರು ಏನೂ ಮಾಡಿಲ್ಲ. ಇಲಾಖೆಗೆ ಅಂಕಿಸಂಖ್ಯೆಗಳಾದರೂ ಸಿಕ್ಕಲಿ, ದೂರು ಕೊಡಿ ಎಂದು ಇತರರಿಗೂ ಹೇಳಿದೆ. ಅವರು ದೂರು ಕೊಡಲಲ್ಲ. ದುರ್ವ್ಯವ ಹಾರವಿದ್ದು ದುಡ್ಡು ಕೊಡುವ ಕೆಲಸವಿದ್ದರೆ ದೂರು ಕೊಡುತ್ತಾರೆಯೇ ಹೊರತು ವಿಷಯಗಳಲ್ಲಿ ಎಷ್ಟು ಕೇಳಿಕೊಂಡರೂ ದೂರು ಕೊಡುವುದಿಲ್ಲ. ಏನಾದರೂ ಅಕ್ರಮ ವ್ಯವಹಾರವಿದ್ದುದಾದರೆ ಮಾತ್ರ ಮುಂದೆ ಹೋಗುತ್ತಾರೆ. ಜನಗಳು ಕೂಡ ಈ ಖಾತೆಯಲ್ಲಿ ನಂಬಿಕೆಯನ್ನು ಕಳೆದುಕೊಂಡಿದ್ದಾರೆ ಎನ್ನುವುದಕ್ಕೆ ಇದು ಮುಖ್ಯವಾದ ಮಾತು.

ಪೋಲೀಸಿನವರು ಎಂದರೆ ಯಾರು ಎಂದು ಯೋಚನೆ ಮಾಡಬೇಕು. ಇಂಗ್ಲಿಷಿನಲ್ಲಿ ಹೇಳುತ್ತಾರೆ They are the friend of the people, ಎಂದು. ನಿಜ. ಆದರೆ ವ್ಯಾಖ್ಯಾನ ಮಾಡಿದರೆ ಪೋಲೀಸ್ ಖಾತೆಯಲ್ಲಿರುವ ಮನುಷ್ಯ ನೆಂಟನೂ ಹೌದು, ಭಂಟನೂ ಹೌದು ಎನ್ನುವ ವಿಚಾರ ಗೊತ್ತಾಗುತ್ತದೆ. ವ್ಯಾಖ್ಯಾನದಲ್ಲಿ ಏನು ಮಾಡುತ್ತಾರೆಂದರೆ, ಜನಗಳು ಸ್ವಲ್ಪ ಕಷ್ಟದಲ್ಲಿದ್ದರೆ ಅವರಿಗೆ ಅಷ್ಟೋ ಇಷ್ಟೋ ಸಹಾಯ ಮಾಡುವುದು, ಏನಾದರೂ ಗೊತ್ತಿಲ್ಲದೆ ಪೇಚಿಗೆ ಸಿಕ್ಕಿದಾಗ ಸಹಾಯ ಮಾಡುವುದು, ರಕ್ಷಣೆ ಕೊಡುವುದು ಇದಕ್ಕೋಸ್ಕರ ಪೋಲೀಸಿನವನು ಇರುತ್ತಾನೆ ಎಂದು ಹೇಳುತ್ತಾರೆ. ತಮಗೆ ಗೊತ್ತಿರುವ ಹಾಗೆ ನೆಂಟ ಯಾರು, ಭಂಟ ಯಾರು ? ನೆಂಟ ಎಂದರೆ ಸಮಯಕ್ಕೆ ಆಗುವವನು, ಭಂಟ ಎಂದರೆ ಕೆಲಸಕ್ಕೆ ಆಗುವವನು ಎಂದು ಹೇಳುತ್ತಾರೆ. ನನ್ನ ಅಭಿಪ್ರಾಯದಲ್ಲಿ ಅವನು ನೆಂಟನೂ ಹೌದು, ಭಂಟನೂ ಹೌದು. ಹೀಗೆಯೇ ಇರಬೇಕು. ಆದರೆ ಪ್ರಪಂಚದಲ್ಲಿ ಎಲ್ಲಿಯೂ ಇಷ್ಟು ಸರಿಯಾದ ಪೋಲೀಸಿನವರು ಇಲ್ಲ ಎಂದು ಕಾಣಿಸುತ್ತದೆ. ಒಂದು ಮಿತಿ ಇರುತ್ತದೆ. ಆ ಮಿತಿ ಮೀರಿದೆ ಎಂದು ಸಾಮಾನ್ಯವಾಗಿ ಎಲ್ಲರಿಗೂ ಮನದಟ್ಟಾಗಿದೆ ಎಂದು ನನ್ನ ಭಾವನೆ. ಈ ದೃಷ್ಟಿಯಿಂದ ನಾವು ಯೋಚನೆ ಮಾಡಬೇಕು. ಹೀಗೆ ಆಗಿರುವುದೇನೋ ಸರಿಯೇ. ಪೋಲೀಸಿನವರಿಗೆ ಬೇಕಾದ ಸಂಬಳವನ್ನು ಕೊಟ್ಟರೆ, ಲಂಚರುಷುವತ್ತುಗಳಿಗೆ ಹೋಗದೆ ಇರುತ್ತಾನೆ ಎಂದು ಯೋಚನೆ ಮಾಡಬೇಕು ಅಥವಾ ಅದೂ ಆಗುವುದಿಲ್ಲವೇ ಎಂದು ಯೋಚನೆ ಮಾಡಬೇಕು. ಇದನ್ನು ಯಾವ ದೃಷ್ಟಿಯಿಂದ ನಾನು ಯೋಚನೆ ಮಾಡುತ್ತೇನೆಂದರೆ, ಪ್ರತಿಯೊಬ್ಬ ಮನುಷ್ಯನೂ ಯಾವುದೇ ಒಂದು ಕಾರ್ಯದಲ್ಲಿ ಅವನ ಕೆಲಸವನ್ನು ಸರಿಯಾಗಿ ಮಾಡಿಕೊಂಡು ಸತ್ಪ್ರಜೆಯಾಗಬೇಕಾಗಿದೆ. ಅದಕ್ಕೆ ಒಂದು ಪ್ರೇರಣೆ ಇರಬೇಕು, ಒಂದು ವಾತಾವರಣವಿರಬೇಕು. ಆ ವಾತಾವರಣ ಕಲುಷಿತವಾದಾಗ ಪ್ರಜೆಯೂ ಕೂಡ ಪ್ರಜೆಯಾಗಿರುವುದಿಲ್ಲ. ಈ ದೃಷ್ಟಿಯಿಂದ ನಾನು ವಿಚಾರ ಮಾಡುವುದಕ್ಕೆ ಬಯಸುತ್ತೇನೆ. ಪ್ರತಿಯೊಬ್ಬ ಮನುಷ್ಯನೂ ನಾಡಿ ಹಿಡಿದುಕೊಂಡು ಹೋಗುತ್ತಾನೆ. ವಾತಾವರಣ ನಾಡಿ ಮತ್ತು ಪ್ರೇರಣೆಯ ನಾಡಿ ಒಂದೊಂದು ತರಹ ತರುತ್ತವೆ. ನಾಡಿ ಹೋಗುವ ದಾರಿ ಏನು, ಅದು ಹೇಗೆ ಇರಬೇಕು ಅದು ಯಾವ ಮಾರ್ಗಕ್ಕೆ ಕೊಂಡೊಯ್ಯುತ್ತದೆ ಎಂದು ನೋಡಬೇಕು. ಅದಕ್ಕೋಸ್ಕರವೇ ಡೈರೆಕ್ಟಿವ್ ಪ್ರಿನ್ಸಿಪಲ್ಸ್ ಆಫ್ ಸ್ಟೇಟ್ ಪಾಲಿಸಿ ಇರುವುದು ಎಂದು ಹೇಳುತ್ತೇವೆ. ಆದರಲ್ಲಿ

Organisation of Village Panchayats—40. The State shall take steps to organise Village Panchayats and endow with such powers and authority as may be necessary to enable them to function as units of self-government.

ಎಂದು ಹೇಳಿದೆ. ಇದರಲ್ಲಿ ಎರಡು ಪದಗಳ ಮೇಲೆ ತಮ್ಮ ಗಮನವನ್ನು ಸೆಳೆಯುವುದಕ್ಕೆ ಇಷ್ಟ ಪಡುತ್ತೇನೆ. 'ಅಥಾರಿಟಿ' ಮತ್ತು ಸೆಲ್ಫ್ ಗವರ್ನ್‌ಮೆಂಟ್ ಎನ್ನುವ ಪದಗಳ ಕಡೆಗೆ ತಮ್ಮ ಗಮನವನ್ನು ಸೆಳೆಯಲು ಬಯಸುತ್ತೇನೆ. ಸ್ಥಳೀಯ ಸರ್ಕಾರ ಏನಿರುತ್ತದೆ ಅದರ ಅಂಗಗಳು ಯಾವುದು ಸ್ವಾಮಿ ? ಆಡಳಿತಾಂಗ, ರಾಜ್ಯಾಂಗ, ಕಾರ್ಯಾಂಗ ಮತ್ತು ಅದರ ಜೊತೆಗೆ ರಕ್ಷಣಾಂಗ. ಸರ್ಕಾರದಲ್ಲಿ ಇವು ಮುಖ್ಯವಾದ ಅಂಗಗಳು. ಇವುಗಳಲ್ಲಿ ಯಾವ ಅಂಗವಿಲ್ಲದೆ ಇದ್ದರೂ ಊನವಾಗುತ್ತದೆ. ಹಾಗೆ ಊನವಾದರೆ ಜನಜೀವನ ಹಸನಾಗುವುದಿಲ್ಲ. ಇದರ ಪರಿಣಾಮ ಯಾವುದರಮೇಲೆ ಹೊಡೆಯುತ್ತದೆ. ಎನ್ನುವುದನ್ನು ಸೂಕ್ಷ್ಮವಾಗಿ ನೋಡಬೇಕು.

ಈಗ ಸೆಲ್ಫ್ ಗವರ್ನ್‌ಮೆಂಟ್ ವಿಚಾರ ತೆಗೆದುಕೊಂಡರೆ, ಅದಕ್ಕೆ ಸಂಬಂಧಪಟ್ಟ ಹಾಗೆ ಕೊಂಡಜ್ಜಿ ಬಸಪ್ಪನವರ ವರದಿ ಬಂತು. ಆರು ತಿಂಗಳಾದರೂ ಕೂಡ ಅದು ಹೇಳ ಹೆಸರಿಲ್ಲದೆ ಹೋಗಿದೆ ಎಂದು ಕಾಣುತ್ತದೆ. ಆಡಳಿತ ಹೇಗೆ ಇರಬೇಕು ? ನಮಗೆ ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ಸ್ಟೇಟ್ ಲೆವಲ್ ಒಂದು, ಜಿಲ್ಲಾ ಲೇವಲ್ ಒಂದು ಮತ್ತು ತಾಲ್ಲೂಕು ಲೆವಲ್ ಒಂದು ಹೀಗೆ ಇರುತ್ತಿತ್ತು. ನಮ್ಮ ನಮ್ಮ ಮಾತಿನಲ್ಲಿ ಹೇಳುವುದಾದರೆ, ಪೂರ್ವಕಾಲದಲ್ಲಿ ತಾಲ್ಲೂಕಿನ ಧಣಿ ತಹಸೀಲ್ದಾರರು, ಜಿಲೆಯ ಧಣಿ ಡೆಪ್ಯುಟಿಕಮಿಷನರು. ರಾಜ್ಯ ಮಟ್ಟದಲ್ಲಿ ದಿವಾನರು ಇದ್ದರು ; ಅವರನ್ನು ದೇಶದ ಧಣಿ ಎಂದು ಹೇಳುತ್ತಿದ್ದರು. ಈಗ ಏನಾಗಿದೆ ಎಂದರೆ ಸ್ಥಳೀಯ ಆಡಳಿತ

(ಶ್ರೀ ವಿ. ಎಂ. ದೇವ್)

ಕೆಲಸ ಮಾಡಬೇಕೆಂದು ಹೇಳಿಬಿಟ್ಟು ಅಲ್ಲಿಗೆ ಪೋಲೀಸಿನವರಿಲ್ಲ, ಹೀಗಾದರೆಹೇಗೆ? ತಾಲ್ಲೂಕು ಬೋರ್ಡನ್ನು ತೆಗೆದುಕೊಳ್ಳಿ, ಪಂಚಾಯಿತಿಯನ್ನು ತೆಗೆದುಕೊಳ್ಳಿ ಎಲ್ಲಿಯೂ ಇಲ್ಲ. ಈ ಒಂದು ದೃಷ್ಟಿಯ ಕಡೆಗೆ ಗಮನ ಹರಿಯಲು ನಾನು ಉದಾಹರಣೆಯಾಗಿ ಕೊಡುತ್ತಿದ್ದೇನೆ. ಅವರವರ ಕಾರ್ಯ ಎಲ್ಲೆಲ್ಲಿ ನಡೆಯಬೇಕೋ ಆ ಭಾಗದಲ್ಲಿ ಅದಕ್ಕೆ ಸರಿಯಾಗಿ ಕೆಲಸ ಮಾಡುತ್ತಿದ್ದಾರೆ ಎನ್ನುವುದಕ್ಕೆ ಚೆಕ್ ಮಾಡುವ ಅಥಾರಿಟಿ ಇಲ್ಲದೆ ಇದ್ದರೆ ಆಗ ಆಡಳಿತ ಕೆಡುತ್ತದೆ. ಆ ದೃಷ್ಟಿಯಿಂದ ನಾವು ನಿಜವಾಗಿಯೂ ಕೂಡ ಇವತ್ತು ಯೋಚನೆ ಮಾಡಬೇಕಾಗಿದೆ. ಹಾಗೆ ಯೋಚನೆ ಮಾಡದೆ ಎರಡು ಆಡಳಿತವನ್ನು ಇಟ್ಟುಕೊಂಡಿದ್ದೀರಿ. ಪೋಲೀಸ್ ಇಲಾಖೆಗೆ ಆರು ಕೋಟಿ ರೂಪಾಯಿ ಇಟ್ಟುಕೊಂಡಿದ್ದೀರಿ. ಎಷ್ಟೋ ಜನ ಮಂತ್ರಿಗಳಾಗಿದ್ದಾರೆ. ಅವರೆಲ್ಲ ನಿರಕ್ಷರಕುಕ್ಷಿಗಳೇ? ಆಡಳಿತವನ್ನು ಇದಕ್ಕಿಂತ ಹೊಲಸಾಗಿ ಮಾಡುವುದಕ್ಕೆ ಸಾಧ್ಯವೇ ಎಂದು ಗಹನವಾಗಿ ಯೋಚನೆ ಮಾಡಬೇಕು. ಎ.ಐ.ಸಿ.ಸಿ. ಪ್ರೆಸಿಡೆಂಟ್ ಆಗಿದ್ದವರು ಕೂಡ ನಿರಕ್ಷರಕುಕ್ಷಿಗಳಾಗಿಲ್ಲವೆ ಇರಬಹುದು. ಆ ದೃಷ್ಟಿಯಿಂದ ನಾವು ಚೆನ್ನಾಗಿ ಯೋಚನೆ ಮಾಡಬೇಕು. ನಾವು ಒಂದನ್ನು ಮಾತ್ರ ಸಾಧಿಸಿದ್ದೇವೆ, ಏನೆಂದರೆ, ದೇಶ ಈಗ ಇರುವುದನ್ನು ನೋಡಿದರೆ ಅದಕ್ಕಿಂತ ಆಡಳಿತವನ್ನು ಕೆಡಿಸುವುದಕ್ಕೆ ಸಾಧ್ಯವಿಲ್ಲ. ಹೀಗಾಗಬೇಕಾದರೆ ಇದರಲ್ಲಿ ಏನೋ ನ್ಯೂನತೆ ಇರಬೇಕು. ಆಡಳಿತದಲ್ಲಿರುವವರು ಎಷ್ಟೋ ಜನ ದಕ್ಷರಾಗಿಯೂ ಇದ್ದಾರೆ. ಬುದ್ಧಿಯಲ್ಲಿ ಎರಡು ತರಹ ಇರುತ್ತವೆ. ಒಂದು ಟ್ಯಾಲೆಂಟ್, ಇನ್ನೊಂದು ಎಬಿಲಿಟಿ.

One part of the brain has developed and the other one has not developed to the capacity. Why? You have developed incapacity. ಕೆಪಾಸಿಟಿ ಎಂದರೇನು, ಟ್ಯಾಲೆಂಟ್ ಎಂದರೆ ಏನು ಎನ್ನುವುದನ್ನು ಯೋಚನೆ ಮಾಡಬೇಕು. ಕೇಪಬಿಲಿಟಿ ಎಂದರೆ ಏನು ಎನ್ನುವುದನ್ನೂ ಯೋಚನೆ ಮಾಡಬೇಕು. ಈಗ ನಿಜವಾಗಿ ಯೋಚನೆ ಮಾಡುವುದು 'ಎಬಿಲಿಟಿ' ಎಂದರೇನು? Ability and talent ಎಂದರೇನು ಎಂಬುದನ್ನು ನಾನು ಹೇಳುತ್ತೇನೆ. ಮಂತ್ರಿಗಳಾಗಿ ಬರುವುದೇ ಇವರಿಗೆ ability. ಆದರೆ Ability is the gift of serving everybody with truth. ಏನೋ ಒಂದು ವಾತಾವರಣಕ್ಕೆ ಹೊಂದಿಕೊಳ್ಳಲು, ನೀತಿ, ನ್ಯಾಯ ಎಲ್ಲಾ ಬಿಡುವುದು. ಬಹಳ ಬಲವಾಗಿದ್ದುಕೊಂಡು ನನ್ನನ್ನು ಬಿಟ್ಟರೆ ಯಾರೂ ಇಲ್ಲ ಎಂದು ತಿಳಿಯದೆ ಏನಾದರೂ ಕೆಲಸ ಕೊಟ್ಟರೆ ಕ್ಲುಪ್ತ ಕಾಲದಲ್ಲಿ ಅದನ್ನು ವಿಮರ್ಶಿಸಿ ಪೂರೈಸುವುದು. ಇನ್ನು Talent ಅಂದರೆ ಸತ್ಯದರ್ಶನ ಮಾಡುವುದಕ್ಕೆ ಇದರ ಮೂಲ ಎಲ್ಲಿದೆ, ಸತ್ಯ ಎಲ್ಲಿದೆ ಎಂಬುದನ್ನು ಚೆನ್ನಾಗಿ ಕಂಡುಹಿಡಿದು ನಾಲ್ಕು ಜನಗಳಿಗೆ ಹೇಳಿದಾಗ ಅದು ಚೆನ್ನಾಗಿ ಗೊತ್ತಾಗುತ್ತದೆ. ಈ ಒಂದು ದೃಷ್ಟಿಯಿಂದ ನಾನು ಯೋಚನೆ ಮಾಡುತ್ತೇನೆ. ಹಾಗೆ ಮಾಡಿ ನೋಡಿದರೆ ಇವರಿಗೆ ability ಡೆವಲಪ್ ಆಗಿದೆ. Talent ಡೆವಲಪ್ ಆಗಿಲ್ಲ. Human nature ಏನೇ ಇರಲಿ, ಆ ಒಂದು ದೃಷ್ಟಿಯಿಂದ ನಾನು ಕೇಳುತ್ತೇನೆ. ಈಗಿನ ಸತ್ಯಸ್ವರೂಪವನ್ನು ನಾನು ಒಪ್ಪಿಕೊಳ್ಳಲಿಕ್ಕಾಗುವುದಿಲ್ಲ. ಅಡ್ಮಿನಿಸ್ಟ್ರೇಷನ್ tolerable limits ನಿಂದ ಆಚೆಗೆ ಹೋಗಿದೆ. ಪ್ರತಿಯೊಂದು ಖಾತೆಯೂ ಒಂದು ಲಿಮಿಟ್‌ನಿಂದ ಮುಂದೆ ಹೋಗಿದೆ. ಸರ್ಕಾರಕ್ಕೆ ನಾನಾ ಇಲಾಖೆಗಳಿಂದ ಎಷ್ಟೋ ಕೋಟಿ ರೂಪಾಯಿಗಳು ಬರುತ್ತವೆ. ಇದೇ ರೀತಿ ಆಡಳಿತವನ್ನು ಮುಂದೆ ನಡೆಸಿಕೊಂಡು ಹೋದರೆ ಏನಾಗುತ್ತದೆಂಬುದನ್ನು ವಿಚಾರ ಮಾಡಬೇಕು. ಜಾಸ್ತಿ ದುಡ್ಡು ಅಕಲಾಯವಾಗಿ ಖರ್ಚಾಗುತ್ತದೆ. ಆದ್ದರಿಂದ ಯಾವ ಕೆಲಸವನ್ನು ಮಾಡಬೇಕಾದರೂ ಯಾವತರಹ ಖರ್ಚು ಮಾಡೋಣವೆಂಬುದನ್ನು ತಿಳಿದು ಮಾಡಬೇಕು. ಇದಕ್ಕೂ ಸಮಾಜವಾದ ತತ್ವಕ್ಕೂ ತಾಳೆ ಇದೆಯೆಯೆಂಬುದನ್ನು ಯೋಚನೆ ಮಾಡಿ ಕೆಲಸಕಾರ್ಯಗಳನ್ನು ಕಾರ್ಯಗತ ಮಾಡಬೇಕು. ಈ ದೃಷ್ಟಿಯಿಂದ ಆಡಳಿತವನ್ನು ತಿದ್ದಿದರೆ ಆಗ ಪರಿಣಾಮಕಾರಿಯಾದ ಹಾಗೂ ನಿಜವಾದ ಪರಿಸ್ಥಿತಿಯುಂಟಾಗಿ ಎಲ್ಲರಿಗೂ ಬೇಕಾದ ಹಾಗೆ ಅನುಕೂಲವುಂಟಾಗುತ್ತದೆ ಇಲ್ಲದಿದ್ದರೆ ಖಂಡಿತ ಸೌಕರ್ಯವಾಗುವುದಿಲ್ಲ.

ಇನ್ನು ಲೈಸೆನ್ಸ್ ವಿಷಯವಾಗಿ ಹೇಳುವುದಾದರೆ ಅಲ್ಲಿ ಕಂಬಳಿ ನೇಯುವವನಿಗೆ ಈಗ ಎಷ್ಟು ಕೂಲಿ ಕೊಡುತ್ತಿದ್ದಾರೆಯೋ ಅದನ್ನು ಜಾಸ್ತಿ ಮಾಡಬೇಕು. ಅವನಿಗೂ ಒಬ್ಬ ಸಾಮಾನ್ಯ ಮನುಷ್ಯನಿಗೆ ಕೂಲಿ ಕೊಡುವ ಹಾಗೆ ಕೊಟ್ಟರೆ ಅವನಿಗೆ ಹೆಚ್ಚು ಲಾಭವಾಗುತ್ತದೆ. ಆಗ the quality of goods will improve; not only that the man will work with greater zeal. ಇದು ಸಿದ್ಧಾಂತ. ಇದನ್ನು ಸರ್ಕಾರದವರು ಸ್ವಲ್ಪ ಆಲೋಚನೆ ಮಾಡಬೇಕು. ಇದನ್ನು ಬೇಕಾದರೆ latest technology ಎಂದಾದರೂ ಕರೆಯಿರಿ ಅಥವಾ ಇನ್ನೇನಾದರೂ ಕರೆಯಿರಿ. ನಮ್ಮ ನಾಡಿ ಈ ದೃಷ್ಟಿಯಿಂದ ಹೋಗಬೇಕು. ಪಂಚಾಯತಿ ಮತ್ತು

ತಾಲ್ಲೂಕು ಬೋರ್ಡುಗಳು ಹೊಂದಿಕೊಂಡು ಕೆಲಸ ಮಾಡುವಂತಾಗಬೇಕು. ಆದರೆ ದ್ವಂದ್ವ ಆಡಳಿತವನ್ನು ಕಿತ್ತುಹಾಕಬೇಕು. ಬದಲಾವಣೆಯಾಗಬೇಕು. ಇವರು ಯಾವ ದಿಕ್ಕಿಗೆ ಸರಿಯಾಗಿ ಹೋಗಬೇಕೆಂದು ಯೋಚನೆ ಮಾಡಬೇಕು. ಇದು ಸೆಲ್ಫ್ ಗೌರ್ನ್‌ಮೆಂಟ್. ಡೈರೆಕ್ಟಿವ್‌ಪ್ರಿನ್ಸಿಪಲ್ಸ್ ಅಲಕ್ಷ್ಯಮಾಡಿ ನಡೆದರೆ ಆಗ ಅನ್ನಾಡಿ ಅಥವಾ ಅದ್ದನಾಡಿ ಸರ್ಕಾರವಾಗುತ್ತದೆ. ಯಾವಾಗ ಅನ್ನಾಡಿ ಸರ್ಕಾರ ಇದಾಗುತ್ತದೋ ಆಗ ಇದರ ನಾಡಿ ಸರಿಯಾಗಿ ಹೋಗುವುದಿಲ್ಲ.

(Another member rose to speak)

Sri G. V. GOWDA (Palya).—I rise to a point of order. Can a member address the chair and ask to stop another hon'ble member who is speaking ? Is it in order ?

Mr. DEPUTY SPEAKER.—That is no point of order.

ಶ್ರೀ ವಿ. ಎಂ. ದೇವ್.—ಮಾನ್ಯ ಸದಸ್ಯರಿಗೆ ಇಲ್ಲಿಗೇ ಸಂತೋಷವಾಗುವುದಾದರೆ, ನಾನು ಕುಳಿತುಕೊಳ್ಳುತ್ತೇನೆ. ಯಾರಾದರೂ ಮಾತನಾಡುತ್ತಿರುವಾಗ ಸದಸ್ಯರ ಧ್ಯಾನ ಇತ್ತಕಡೆಗೇ ಇರಬೇಕೆಂದು ಹೇಳಿ ನನಗೆ ಈ ನಾಲ್ಕು ಮಾತುಗಳನ್ನು ಹೇಳಲು ಅವಕಾಶ ಕೊಟ್ಟಂತಹ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ).—ಮಾನ್ಯ ಸಭಾಪತಿಗಳೇ, ಈ ದಿವಸ ಬಂದೀ ಖಾನೇ ಪೋಲೀಸ್ ಖಾತೆಯ ಬೇಡಿಕೆಗಳನ್ನು ರಾಷ್ಟ್ರೀಯ ತುರ್ತುಪರಿಸ್ಥಿತಿಯೊಳಗೆ ಸರ್ಕಾರದವರು ಮಂಡಿಸಿರುವುದನ್ನು ನಾನು ಸ್ವಾಗತಿಸಿ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಈವರೆಗೆ ವಿರೋಧಪಕ್ಷದ ಅನೇಕ ಮಾನ್ಯ ಸದಸ್ಯರು ತಂತಮ್ಮ ವಿಚಾರಗಳನ್ನು ಹೇಳಿದ್ದಾರೆ. ಯಥಾಪ್ರಕಾರ ಅವರು ಟೀಕೆ ಮಾಡುವುದು ಅವರ ಸ್ವಭಾವವೇ ಆಗಿದೆ. ನಾವು ಯಾವುದೇ ಕೆಲಸವನ್ನು ಮಾಡಿದರೂ ಅದಕ್ಕೆ ವಿರೋಧ ಮಾಡುವ ಒಂದು ಹವ್ಯಾಸವನ್ನು ಅವರು ಇಟ್ಟುಕೊಂಡ ಹಾಗೆ ಕಾಣುತ್ತದೆ. ಈಗ ಪೋಲೀಸ್ ಖಾತೆಗೆ 6 ಕೋಟಿ 50 ಲಕ್ಷ ರೂಪಾಯಿಗಳನ್ನೂ, ಬಂದೀ ಖಾನೆಗಳ ಬಗ್ಗೆ 57,73,500 ರೂಪಾಯಿಗಳನ್ನು ಸರ್ಕಾರದವರು ಕೇಳಿರುವುದನ್ನು ನಾನು ಏಕೆ ಸ್ವಾಗತಿಸುತ್ತೇನೆಂದು ಹೇಳಿದರೆ ವಿರೋಧ ಪಕ್ಷದ ಕೆಲವು ಸದಸ್ಯರು 1947ರ ಮುಂಚಿನ ಪ್ರಸಂಗವನ್ನು ನೆನೆಸಿಕೊಂಡು ಆಗ ಯಾವ ರೀತಿ ಪೋಲೀಸ್ ಖಾತೆ ಇತ್ತೋ ಅದೇ ರೀತಿಯಾಗಿ ಈಗಲೂ ಇದೆ ಯೆಂದು ಮಾತನಾಡಿದರು. ಆದರೆ 1947 ರ ನಂತರದ ವಿಷಯವನ್ನು ನಾವು ಯೋಚನೆ ಮಾಡಿದರೆ ಮೈಸೂರು ಸಂಸ್ಥಾನದ ಪೋಲೀಸ್ ಖಾತೆಯಲ್ಲಿ ಎಷ್ಟೆಷ್ಟು ಉತ್ತಮವಾದ ಬದಲಾವಣೆಗಳು ಆಗಿವೆಯೋ ಅಷ್ಟು ಉತ್ತಮವಾದ ಬದಲಾವಣೆಗಳು ಇನ್ನೆಲ್ಲಿಯೂ ಆಗಲಿಲ್ಲವೆಂದು ನಾನು ಹೇಳುತ್ತೇನೆ. ಏಕೆಂದರೆ ಹಿಂದೆ ಯೂರೋಪಿಯನರ ಕಾಲದಲ್ಲಿ ಪೋಲೀಸ್ ಖಾತೆಯಲ್ಲಿ ಈ ಪೋಲೀಸರ ಹುದ್ದೆಗಳನ್ನು ಭರ್ತಿಮಾಡುವಾಗ ಯಾವುದಾದರೂ ರಾವ್ ಬಹದ್ದೂರ್ ರಾವ್ ಸಾಹೇಬ್ ಮುಂತಾದ ಬಿರುದುಗಳನ್ನು ಪಡೆದವರ ಕಡೆಯಿಂದಾ ಆಗ ಸರ್ಟಿಫಿಕೇಟ್ ಪಡೆದಿರಬೇಕೆಂಬ ನಿಯಮವಿತ್ತು. ಆಗ ಪೋಲೀಸ್ ಹುದ್ದೆಗಳು ಭರ್ತಿಯಾಗುತ್ತಿದ್ದುವು. ಆ ಕಾಲಕ್ಕೆ ಕೆಲವು ಪೋಲೀಸರು ಏನು ಮಾಡುತ್ತಿದ್ದಾರೆಂದರೆ ಖೈದಿಗಳನ್ನು ಜೋಪಾನಮಾಡಬೇಕು ರಕ್ಷಣೆಮಾಡಬೇಕು ಪಾರಾಮಾಡಬೇಕು. ಟ್ರೆಜರಿ ಕಾಯಬೇಕು ಈ ಕೆಲಸ ಮಾಡುತ್ತಿದ್ದರು. ಅಲ್ಲದೆ ರಾತ್ರಿ 7 ಘಂಟೆಯ ನಂತರ ಯಾರಾದರೂ ಬಂದರೆ Halt who comes there ಎಂದು ಹೇಳಬೇಕಾಗಿತ್ತು. ಆಗ ಪೋಲೀಸ್ ಜನರು pass friend, all is well ಎಂದು ಹೇಳುತ್ತಾ ಇದ್ದರು. ಆಗ್ಯೆ ಹೋಗಬಹುದಾಗಿತ್ತು. ಪೋಲೀಸರು ಆದರೆ halt who comes druoo (ಡುರ್ಯೋ), pass friend. All is well ಎಂಬುದಾಗಿ ಹೇಳುತ್ತಿದ್ದರು. ಅದಕ್ಕೆ ಶಿಕ್ಷಣ ಇದ್ದವರನ್ನು ತೆಗೆದುಕೊಳ್ಳದ್ದೇ ಕಾರಣ. ಈ ಪ್ರಕಾರ ಪೋಲೀಸ್ ಖಾತೆ ಹಿಂದಿತ್ತು. ಈಗ ನೋಡಿದರೆ ಬಹಳ ಸುಧಾರಿಸಿದೆ. ಉತ್ತಮವಾದ ಪೆರೇಡ್, ಉತ್ತಮ ಶಿಕ್ಷಣ, ಒಂದು ಬ್ಯಾಂಡ್ ಹಿಡಿದುಕೊಂಡು ಅವರು ಆಟಪಾಟಗಳನ್ನಾಡುವುದನ್ನು ನೋಡಿದರೆ ಎಷ್ಟೋ ಸಂತೋಷವಾಗುತ್ತದೆ. ಇದರಿಂದಲೇ ನಮ್ಮ ಮೈಸೂರು ಸಂಸ್ಥಾನದ ಪೋಲೀಸ್ ಬ್ಯಾಂಡ್ ಪ್ರಪಂಚದಲ್ಲಿ ಒಂದನೇ ಹೆಸರನ್ನು ಪಡೆದಿದೆ. ಇನ್ನು ಅವರ ಎರಡನೇಯದು ಆಟಪಾಟಗಳನ್ನು ನೋಡಿದರೆ ನಮ್ಮ ಧಾರವಾಡ ಜಿಲ್ಲೆಯ ಪ್ರಥಮವಿದೆ ಪ್ರತಿಯೊಂದು ಕಡೆಯಲ್ಲಿಯೂ ಪೋಲೀಸರ ಮಕ್ಕಳು ಮಾಡತಕ್ಕ ಡ್ರಿಲ್ಲನ್ನು ಯಾರೂ ಮಾಡುವುದಕ್ಕಾಗುವುದಿಲ್ಲ. ಉತ್ತಮ ತರಗತಿಯ ನಾಗರಿಕರನ್ನಾಗಿ ಅವರನ್ನು ಮಾಡಲು ಆ ಮಕ್ಕಳಿಗೆ ಶಿಕ್ಷಣಕೊಡುತ್ತಿದ್ದಾರೆ.

ಇನ್ನು ಪೋಲೀಸ್ ಖಾತೆಯೊಳಗೆ ಲಂಚಕೋರತನ ಹೆಚ್ಚು ಇದೆ. ಸಮಾಜದಲ್ಲಿ ವ್ಯಭಿಚಾರಿಗಳು ಕುಡುಕರು ಇದ್ದಾರೆಂದು ಕೆಲವರು ಹೇಳಿದ್ದಾರೆ. ನಾನು ಅದನ್ನು ಕೆಲಮಟ್ಟಿಗೆ ಒಪ್ಪುತ್ತೇನೆ.

(ಶ್ರೀ ಎಸ್. ವಿ. ಅಗ್ನಿಹೋತ್ರಿ)

ಆದರೆ ಸಮಾಜದಲ್ಲಿ ಅದು ಒಂದು ಕೆಟ್ಟಸ್ಥಿತಿ. ಸಮಾಜದಲ್ಲಿರತಕ್ಕ ಅಂತಹ ಯಾವೊಬ್ಬ ವ್ಯಕ್ತಿಯನ್ನು ಆ ಕ್ಷೇತ್ರದಲ್ಲಿ ಕ್ಷುಲ್ಲಕವಾದ ರೀತಿಯಲ್ಲಿ ಕಂಡರೆ ಅವರು ಯಾವ ರೀತಿಯಲ್ಲಿ ಸರ್ವಿಸ್ ಕೊಡಬೇಕೋ ಆ ಪ್ರಕಾರ ಸರ್ವಿಸ್ ಸಿಗುವುದಿಲ್ಲ. ಏಕೆಂದರೆ ನಮ್ಮನ್ನು ನಾವು ಅವರು ಎಲ್ಲಿಯವರೆಗೆ ಗೌರವಿಸುವುದಿಲ್ಲವೋ ಅಲ್ಲಿಯವರೆಗೆ ನಾವು ಅವರಿಗೆ ಗೌರವಕೊಡುವುದಿಲ್ಲವೆಂದು ಹೇಳಿದ ಹಾಗೆ ಆಗುತ್ತದೆ. ಯಾವಾಗಲೂ ನಮ್ಮವರು ಮಾಡತಕ್ಕ ಕೆಲಸಗಳನ್ನು ಹೊಗಳಿದರೆ ನಿಜವಾಗಿಯೂ ಎಲ್ಲಕ್ಕಿಂತಲೂ ಉತ್ತಮ ಸೇವೆಯನ್ನು ಸಲ್ಲಿಸುತ್ತಾರೆಂದು ನನ್ನ ಭಾವನೆ. ಅವರು ಲಂಚಕ್ಕೋಸ್ಕರ ಕೆಲಸಮಾಡುತ್ತಾರೆಂಬುದು ಎಲ್ಲರಿಗೂ ಗೊತ್ತಿದೆ. ಅವರೊಳಗೆ ನಾನು ಶೇಕಡ 10ರಷ್ಟು ಒಪ್ಪುತ್ತೇನೆ. ಲಂಚ ಕೊಡುವವರು, ಯಾರಿದ್ದಾರೆ, ತೆಗೆದುಕೊಳ್ಳುವವರೂ ಸಹ ತಯಾರಿದ್ದಾರೆ, ಅಂದ ಮೇಲೆ ಸರ್ಕಾರದವರು ಇಂತಹ ಪರಿಸ್ಥಿತಿಯಲ್ಲಿ ಏನು ಮಾಡುವುದಕ್ಕೂ ಸಾಧ್ಯವಿಲ್ಲ. ಈ ವಿಷಯದಲ್ಲಿ ಹೆಚ್ಚು ಮಾತನಾಡಿದರೂ ಉಪಯೋಗವಿಲ್ಲ. ಒಬ್ಬ ಹುಡುಗನನ್ನು ಪೋಲೀಸಿನವನು ಹಿಡಿದುಕೊಂಡರೆ, ಅವನಿಂದ ಲಂಚತೆಗೆದುಕೊಂಡು ಬಿಟ್ಟು ಬಿಡುತ್ತಾನೆ ಆ ಹುಡುಗ ಲಂಚಕೊಡಲು ತಯಾರಿಲ್ಲದಿದ್ದರೆ ಆ ಪೋಲೀಸಿನವರು ಹೇಗೆ ತೆಗೆದುಕೊಳ್ಳುತ್ತಾನೆ ? ಅದು ಸಾಧ್ಯವಿಲ್ಲ. ಇದು ಗಂಡ ಹೆಂಡಿರ ಜಗಳವಿದ್ದಹಾಗೆ. ಎರಡು ತಾಸುಗಳಾದಮೇಲೆ ಸಹಾ ಕೂಡಿಕೊಳ್ಳುವ ಹಾಗೆ ಇದು ಇರುತ್ತದೆ. ದೇವರೂ ಕೂಡ ಇದನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲ. ಅಂಥಾದ್ದರಲ್ಲಿ ಸರ್ಕಾರದವರು ಈ ಬಗ್ಗೆ ತಕ್ಕ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರೆ ಆ ಮಾತನ್ನು ನಾನು ಒಪ್ಪುವುದಿಲ್ಲ. ಪೋಲೀಸ್‌ಖಾತೆ ಹೆಚ್ಚಿಗೆ ಸುಧಾರಣೆಯಾಗಬೇಕಾದರೆ ಅವರಿಗಿರತಕ್ಕ ಸಂಸಾರ ಭಾದೆಯನ್ನು ತಪ್ಪಿಸಲು ಅವರಿಗೆ ಉತ್ತಮವಾದ ಮನೆ, ಹೆಚ್ಚಿನ ಪಗಾರ ಅವರ ಮಕ್ಕಳಿಗೆ ಪುಕ್ಕಟ್ಟೆ ಶಿಕ್ಷಣ ಸೌಕರ್ಯಗಳನ್ನು ಮೊದಲು ಕೊಡಬೇಕು. ಆಗ ಅವರು ಲಂಚಕೊಡಿ ಎಂದು ಕೇಳುವುದಕ್ಕೆ ಅಷ್ಟು ಹೆಚ್ಚಾಗಿ ಮನಸ್ಸು ಮಾಡುವುದಿಲ್ಲವೆಂದು ನಾನು ಭಾವಿಸುತ್ತೇನೆ.

3-30 P.M.

ಓ. ಸಿ. ಕಂಪೆನಿ ಆಟ ಎಂದು ಅಡುತ್ತಾರೆ. ಸಟ್ಟಾವ್ಯಾಪಾರ ನಡೆಯುತ್ತದೆ. ಇದು ನ್ಯೂಯಾರ್ಕಿನಿಂದ ನಡೆಯುತ್ತದೆ. ಒಬ್ಬ ಮನುಷ್ಯ ಸಂಜೆ ವೇಳೆಯಲ್ಲಿ ಒಂದು ಚೀಟಿಯಲ್ಲಿ ಒಂದು ನಂಬರು ಬರೆದು ಆ ಸಟ್ಟ ವ್ಯಾಪಾರಕ್ಕೆ ಸಂಬಂಧಪಟ್ಟ ಒಂದು ಚಿಲ್ಲರೆ ಅಂಗಡಿಗೆ ಕೊಟ್ಟು ಅದರ ಜೊತೆಯಲ್ಲಿ 10 ರೂಪಾಯಿಗಳನ್ನು ಕೊಟ್ಟು ಹೋಗುತ್ತಾನೆ. ಮುಂಜಾನೆ ಆ ನಂಬರು ಬಂದರೆ 10 ರೂಪಾಯಿಗೆ 100 ರೂಪಾಯಿಗಳನ್ನ ಯಾರನ್ನೂ ಹೇಳದೆ ಕೇಳದೆ ಯಾವ ಸಾಕ್ಷಿಯೂ ಇಲ್ಲದೆ ಕೊಡುತ್ತಾನೆ. ಈ ತರಹ ಓ. ಸಿ. ಕಂಪನಿಯ ಆಟವನ್ನ ಆಡುತ್ತಾರೆ. ಕಾಯಿದೆ ಪ್ರಕಾರ ಓ. ಸಿ. ಕಂಪೆನಿಯ ಆಟವನ್ನು ಆಡಕೂಡದು. ಒಂದು ವೇಳೆ ಆಟದ ಏಜೆಂಟರಿಗೆ ಆಗದೆ ಇರುವವರು ಯಾರಾದರೂ ಪೋಲೀಸಿನವರಿಗೆ ತಿಳಿಸಿದರೆ ಅವನು ಪೋಲೀಸಿನವರ ಹತ್ತಿರ ಹೋಗಿ ಭಕ್ತಿಯಿಂದ ಕಾಣಿಕೆಯನ್ನು ಸಲ್ಲಿಸಿ ಬಂದುಬಿಡುತ್ತಾನೆ. ಇಂಥಾದ್ದನ್ನೆಲ್ಲಾ ಬಂದ್ ಮಾಡುವುದಕ್ಕೆ ಸಾಧ್ಯವಿಲ್ಲಿ. ಮಾನ್ಯ ಗೃಹ ಮಂತ್ರಿಗಳಿಗೆ ಇದನ್ನು ಬಂದ್ ಮಾಡಿ ಎಂದು ಹೇಳಿದರೆ ಅದು ಇನ್ನು ನಾಲ್ಕು ವರ್ಷಗಳಲ್ಲಿ ಆಗುತ್ತದೆ ಎಂದೂ ಹೇಳುವುದಕ್ಕೆ ಸಾಧ್ಯವಿಲ್ಲ. ಇದರ ದೆಶೆಯಿಂದ ಅದಕ್ಕೆ ಎಲ್ಲಿಯತನಕ ಜನರು ಹೆಚ್ಚಿನ ತಿಳುವಳಿಕೆಯುಳ್ಳವರಾಗುವುದಿಲ್ಲ, ಆಲೋಚನೆಗೆ ಒಳಗಾಗುವುದಿಲ್ಲ ಅಲ್ಲಿಯತನಕ ಪೋಲೀಸಿನವರನ್ನು ದೂಷಣೆ ಮಾಡುವುದಕ್ಕಾಗುವುದಿಲ್ಲ. ಈಗ ನಮ್ಮ ಭಾಗದಲ್ಲಿ ಯಾವುದಾದರೂ ಒಂದು ಮನೆಯಲ್ಲಿ ಖೂನಿ ಆದರೆ ಪಕ್ಕದಲ್ಲಿರುವವರು ಅಕಸ್ಮಾತಾಗಿ ನೋಡಿದ್ದರೆ ಪೋಲೀಸಿನವರಿಗೆ ಫಸ್ಟ್ ಇಣ್ಫರ್‌ಮೇಷನ್ ಆಗಲೀ ಸೆಕೆಂಡ್ ಇಣ್ಫರ್‌ಮೇಷನ್ ಆಗಲೀ ಕೊಡುವುದಕ್ಕೆ ಹೆದರುತ್ತಾರೆ. ಏತಕ್ಕೆಂದರೆ 5–6 ತಿಂಗಳು ಆಗಾಗ್ಯೆ ಮನೆ ಕೆಲಸ ಬಿಟ್ಟು ಕೋರ್ಟಿಗೆ ಹೋಗಿ ಸಾಕ್ಷಿಯನ್ನು ಹೇಳಬೇಕಾಗುತ್ತದೆ ಎಂದು. ಅದಕ್ಕಾಗಿ ಪಂಚನಾಮೆ ಮಂಡಲಿ ಎಂದು 5 ಜನಗಳನ್ನು ನೇಮಿಸಿಕೊಂಡಿರುತ್ತಾರೆ ಅವರಿಗೆ ಆ ಸಾಕ್ಷಿ ಹೇಳುವ ಕೆಲಸ ಬಹಳ ಮಹತ್ವದ್ದು ಇದೆ. ಅವರು ಕರೆಕ್ಟಾಗಿ ತಮ್ಮ ಡ್ಯೂಟಿ ಮಾಡುತ್ತಾರೆ. ಈ ಕೆಲಸವನ್ನು ಪೋಲೀಸಿನವರು ಮಾಡುತ್ತಾರೋ ಏನೋ ಗೊತ್ತಿಲ್ಲ. ಸಾಕ್ಷಿದಾರನಿಗೆ ಏನಾದರೂ ಕೊಟ್ಟರೆ ಅವನು ಕೋರ್ಟಿಗೆ ಹೋಗಿ ಸಾಕ್ಷಿ ಹೇಳುತ್ತಾನೆ. ಒಂದು ವೇಳೆ ಕಟ್ಲೆ ಸಂಬಂಧದಲ್ಲಿ ಏನಾದರೂ ತಕರಾರು ಬಂದರೆ ಸಾಕ್ಷಿದಾರನಿಗೆ ಹೇಳಿಕೊಟ್ಟು ಹೆದರಿಕೆ ಸಂಬಂಧದಿಂದ ಹಾಗೆ ಸುಳ್ಳು ಹೇಳಿದ್ದೇನೆ ಎಂದು ಹೇಳಿಬಿಡು ಎಂದು ಹೇಳಿಕೊಡುತ್ತಾರೆ. ಇದಕ್ಕೆಲ್ಲಾ ಆಲೋಚನಾ ರೀತಿಯಿಂದ ಪೋಲೀಸಿನವರನ್ನು ದೂಷಣೆ ಮಾಡುವುದು ಅಷ್ಟು ಸಮಂಜಸವಾಗಿವಾಗಿಕಾಣುವುದಿಲ್ಲ. ಈಗ ಯಾವುದಾದರೂ ಒಂದು ಕಟ್ಲೆಯ ಸಂಬಂಧದಲ್ಲಿ ವಕೀಲರ ಹತ್ತಿರ

ಹೋಗಿ ದುಡ್ಡು ಕೊಟ್ಟರೆ, ಅವರು ಕಟ್ಟಲೆ ಸುಳ್ಳಿರಲಿ, ಅಥವಾ ಖರೇ ಇರಲಿ ಕಾನೂನು ಪ್ರಕಾರ ಆರ್ಗ್ಯುಮೆಂಟ್ ಮಾಡುತ್ತಾರೆ. ಯೋಗ್ಯವಾದ ಜಡ್ಜ್‌ಮೆಂಟ್ ಕೊಡಿಸುತ್ತಾರೆ. ಈ ಪ್ರಕಾರ ವಕೀಲರು ಸುಳ್ಳು ಇರುವುದನ್ನು ಖರೇ ಮಾಡುತ್ತಾರೆ, ಖರೇ ಇರುವುದನ್ನು ಸುಳ್ಳು ಮಾಡುತ್ತಾರೆ ಇವರು ಸುಳ್ಳು ಹೇಳುವ ಜನ ಎಂದು ಹೇಳಿ ಅವರನ್ನು ಪೋಲೀಸಿನವರು ಹಿಡಿದುಹಾಕಿದರೆ ಅವರು ಜೈಲಿಗೆ ಹೋಗಿ ಖೈದಿಗಳಾಗಿ ಕೊಡಬೇಕಾಗುತ್ತದೆ. ಇದರ ಸಲುವಾಗಿ ನಾವು ಪೋಲೀಸಿನವರನ್ನು ದೂಷಣೆ ಮಾಡುವುದು ಸರಿಯಲ್ಲ. ಪೋಲೀಸಿನವರಿಗೆ ಸ್ಕಾಟ್‌ಲೆಂಡ್‌ಯಾರ್ಡ್ ಎಫ್. ಬಿ. ಐ. ಮುಂತಾದ ದೇಶಗಳಲ್ಲಿ ಏನು ಸವಲತ್ತುಗಳನ್ನು ಒದಗಿಸಿಕೊಟ್ಟಿದ್ದಾರೆಯೋ ಅದನ್ನು ನಮ್ಮ ರಾಜ್ಯದೊಡನೆ ತುಲನೆ ಮಾಡಿ ನೋಡಿದರೆ ಪೋಲೀಸ್ ಖಾತೆಗೆ ಅನೇಕ ಸೌಲಭ್ಯಗಳನ್ನು ಒದಗಿಸಿಕೊಟ್ಟಿಲ್ಲ. ಸ್ಕಾಟ್‌ಲೆಂಡ್‌ಯಾರ್ಡಿನಲ್ಲಿ ಪೋಲೀಸಿನವರಿಗೆ ಏನೇನು ಸವಲತ್ತುಗಳನ್ನು ಒದಗಿಸಿಕೊಟ್ಟಿದ್ದಾರೆಯೋ ಅದನ್ನು ಇಲ್ಲಿನವರೆಗೂ ಒದಗಿಸಿದರೆ ಅದಕ್ಕಿಂತ ಹೆಚ್ಚಿನ ರೀತಿಯಲ್ಲಿ ನಮ್ಮ ಪೋಲೀಸಿನವರು ಕೆಲಸ ಮಾಡುತ್ತಾರೆ, ಅವರಿಗೆ ಸರಿಯಾದ ಟೇಪ್ ರೆಕಾರ್ಡ್ ಇಲ್ಲ. ತಂಬ್ ಇಂಪ್ರೆಷನ್ ಹಾಕಿಸಿಕೊಳ್ಳುವುದಕ್ಕೆ ಒಂದು ಸರಿಯಾದ ಪ್ಯಾಡ್ ಇಲ್ಲ. ಅವರಿಗೆ ಬೇಕಾದ ಸರಿಯಾದ ಸಲಕರಣೆಗಳಿಲ್ಲ. ಅವರಿಗೆ ಸರಿಯಾದ ಸವಲತ್ತುಗಳಿಲ್ಲ ಹೀಗಿದ್ದರೂ ಕೂಡ ನಮ್ಮ ಪೋಲೀಸ್ ಖಾತೆ ಅಂಥಾ ಕೆಟ್ಟ ಪರಿಸ್ಥಿತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಇಡೀ ಏಷ್ಯಾ ಖಂಡದಲ್ಲೇ ನಮ್ಮ ರಾಜ್ಯದ ಪೋಲೀಸು ಖಾತೆ ಉತ್ತಮವಾದ ಪೋಲೀಸು ಖಾತೆಯಾಗಿದೆ. ಎಂದು ನಾನು ಕೇಳಿದ್ದೇನೆ. ಅದಕ್ಕೆ ಆಧಾರ ಇದೆ. ನಮ್ಮ ರಾಜ್ಯದ ಪೋಲೀಸಿನವರು ಪ್ರತಿ ವರ್ಷ ರಾಷ್ಟ್ರಪತಿಗಳ ಪದಕವನ್ನು ಪೋಲೀಸ್ ಪದಕವನ್ನು ಅನೇಕ ಜನ ಅನೇಕ ಪದಕಗಳನ್ನು ಪಡೆಯುತ್ತಿದ್ದಾರೆ. ಆದ್ದರಿಂದ ಇದರಿಂದಲೇ ಗೊತ್ತಾಗುತ್ತದೆ ನಮ್ಮ ರಾಜ್ಯದಲ್ಲಿ ಪೋಲೀಸು ಖಾತೆ ಎಷ್ಟರಮಟ್ಟಿಗೆ ಉತ್ತಮ ಕೆಲಸ ಮಾಡುತ್ತಿದೆ ಎನ್ನುವುದು.

ಇನ್ನು ಪೋಲೀಸಿನವರನ್ನು ರೆಕ್ರೂಟ್‌ಮೆಂಟ್ ಕಾಯಿದೆ ಪ್ರಕಾರ ಎಸ್.ಎಸ್.ಎಲ್.ಸಿ. ಪಾಸ್ ಆಗಿರುವವರನ್ನು, ಎಸ್.ಎಸ್.ಎಲ್.ಸಿ. ಪಾಸ್ ಆಗದೆ ಇರುವವರನ್ನು ಯೋಗ್ಯ ರೀತಿಯಿಂದ ರೆಕ್ರೂಟ್ ಮಾಡಿಕೊಳ್ಳುತ್ತಿದ್ದಾರೆ. ಈ ವಿಚಾರದಲ್ಲಿ ಇನ್ನೂ ಹೆಚ್ಚಿನ ಸುಧಾರಣೆ ಆಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಜೈಲಿನ ವಿಷಯದಲ್ಲಿ ಹೇಳುವುದಾದರೆ, ಈಗಾಗಲೇ ಈ ವಿಚಾರದಲ್ಲಿ ಶ್ರೀಮಾನ್ ಶಿವಪ್ಪನವರು ಮತ್ತು ಶ್ರೀಮಾನ್ ಸಿದ್ದಯ್ಯ ಕಾಶಿಮಟ್‌ರವರೂ ಹೇಳಿದರು. ಜೈಲಿನಲ್ಲಿ ವಿಶೇಷವಾಗಿ ಇನ್ನೂ ಹೆಚ್ಚಿನ ಸುಧಾರಣೆ ಆಗಬೇಕು ಎಂದು ಹೇಳಿದರು. ಅದು ಸರಿಯಲ್ಲ. ಏತಕ್ಕೆಂದರೆ 1947 ರಿಂದ 1956 ರವರೆಗೆ ಮತ್ತು 1956 ರಿಂದ 1966 ರವರೆಗೆ ಏನೇನು ಸುಧಾರಣೆಗಳು ಜೈಲಿನಲ್ಲಿ ಆಗಿವೆ ಎಂಬುದನ್ನು ನೋಡಿದರೆ ಅದೇನು ಶೈಕ್ಷಣಿಕ ಕೇಂದ್ರಗಳೋ ಅಥವಾ ಫ್ಯಾಕ್ಟರಿಗಳೇನಾದರೂ ಜೈಲಿನಲ್ಲಿ ನಡೆಯುತ್ತಿವೆಯೋ ಎನ್ನುವ ಹಾಗೆ ಕಾಣುತ್ತಿವೆ. ಅಲ್ಲಿ ಖೈದಿಗಳಿಗೆ ಎಲ್ಲಾ ವಿಧವಾದ ಸೌಕರ್ಯಗಳನ್ನೂ ಕೊಡುತ್ತಿದ್ದಾರೆ. ಅಲ್ಲಿ ನೇಕಾರರ ಕೆಲಸ, ಬಡಗಿ ಕೆಲಸ ಕಮ್ಮಾರರ ಕೆಲಸ, ಹೀಗೆ ನಾನಾ ತರಹದ ಕೈಗಾರಿಕೆಯ ಕೆಲಸಗಳು ಅಲ್ಲಿ ನಡೆಯುತ್ತಿವೆ. ಖೈದಿಗಳಿಗೆ ಅನೇಕ ಸೌಕರ್ಯಗಳನ್ನ ಒದಗಿಸಿಕೊಟ್ಟಿದ್ದಾರೆ. ಬೆಳಿಗ್ಗೆ ಕಾಫೀ ಕೊಡುತ್ತಾರೆ, ಊಟ ಕೊಡುತ್ತಾರ ಲಗ್ನ ಆಗಿದ್ದರೆ 15 ದಿವಸಗಳಿಗೊಮ್ಮೆ ಮನೆಗೆ ಹೋಗಿ ಹೆಂಡತಿ ಮಕ್ಕಳನ್ನ ನೋಡಿಕೊಂಡು ಬರುವುದಕ್ಕೆ ಅವಕಾಶ ಕೊಡುತ್ತಾರೆ. ಇನ್ನು ನಾಟಕ ಸಿನಿಮಾ ಮತ್ತು ಸಂಗೀತಗಳ ವ್ಯವಸ್ಥೆಯನ್ನು ಮಾಡಿ ಅದರ ಸವಲತ್ತನ್ನೂ ಅವರಿಗೆ ಒದಗಿಸಬೇಕಾಗಿದೆ ಹೀಗೆ ಎಲ್ಲಾ ವಿಧವಾದ ಸೌಕರ್ಯಗಳನ್ನು ಖೈದಿಗಳಿಗೆ ಒದಗಿಸಿಕೊಟ್ಟಿದ್ದಾರೆ. ಇನ್ನು ಇದಕ್ಕೂ ಹೆಚ್ಚಿನ ಸೌಕರ್ಯಗಳನ್ನು ಅವರಿಗೆ ಒದಗಿಸಿಕೊಟ್ಟರೆ ಅವರು ಜೈಲಿನಿಂದ ಹೊರಗಡೇ ಬರುವುದೇ ಇಲ್ಲ. ಆ ಮೇಲೆ ಹೊರಗಡೆ ಇರುವವರು ಜೈಲಿಗೆ ಹೋಗುವುದಕ್ಕೆ ಅಪೇಕ್ಷೆ ಪಡುತ್ತಾರೆ. ಆದರ ಸಲುವಾಗಿ ಜೈಲಿನಲ್ಲಿ ಖೈದಿಗಳಿಗೆ ಇನ್ನೂ ಹೆಚ್ಚಿನ ಸುಖವನ್ನು ಕೊಡಬಾರದು. ನಮ್ಮ ಮಾನ್ಯ ಗೃಹಮಂತ್ರಿಗಳು ಖೈದಿಗಳಿಗೆ ಇನ್ನು ಹೆಚ್ಚಿನ ಸೌಕರ್ಯಗಳನ್ನು ಒದಗಿಸುವುದಕ್ಕೆ ಒಪ್ಪುವುದಿಲ್ಲ. ಏತಕ್ಕೆಂದರೆ ಅವರು ಕಟ್ಟಾವಾದಿಗಳು. ಅವರಲ್ಲಿ ನನಗೆ ನಂಬಿಕೆ ಇದೆ.

ಇನ್ನು ತುರ್ತು ಪರಿಸ್ಥಿತಿಯ ವಿಚಾರದಲ್ಲಿ ಹೇಳುವುದಾದರೆ, ತುರ್ತು ಪರಿಸ್ಥಿತಿ ಯಾವಾಗ ಬರುತ್ತದೆ ಎಂದರೆ ಒಂದು ರಾಷ್ಟ್ರ ಮತ್ತೊಂದು ರಾಷ್ಟ್ರದಮೇಲೆ ಯುದ್ಧವನ್ನು ಸಾರಿದಾಗ ತುರ್ತು ಪರಿಸ್ಥಿತಿ ಬರುತ್ತದೆ. ಎರಡು ರಾಷ್ಟ್ರಗಳಿಗೂ ರಾಜೀ ಆದಾಗ ಒಮ್ಮೇಲೆ ತುರ್ತು ಪರಿಸ್ಥಿತಿಯನ್ನು ತೆರೆಯಬೇಕು ಎಂದರೆ ಆಗುವುದಿಲ್ಲ. ರಾಜಿ ಆದ ಮೇಲೆ 7–8 ತಿಂಗಳು ನೋಡಬೇಕಾಗುತ್ತದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).— ಚುನಾವಣೆ ಮುಗಿಯುವವರೆಗೂ ತುರ್ತು ಪರಿಸ್ಥಿತಿ ಹಾಗೆಯೇ ಇರಲಿ ಎಂದು ಹೇಳುತ್ತೀರಾ ?

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಮುಂದಿನ ಸಲ ಚುನಾವಣೆಯಲ್ಲಿಯೂ ಕಾಂಗ್ರೆಸ್ಸಿನವರೇ ಬರುತ್ತಾರೆ. ಚುನಾವಣೆಗೋಸ್ಕರ ಬೆದರಿ ತುರ್ತು ಪರಿಸ್ಥಿತಿಯನ್ನು ಮುಂದೂಡುತ್ತಿದ್ದಾರೆ ಎಂದು ಹೇಳುವುದು ತಪ್ಪು. ಕಾಂಗ್ರೆಸ್ಸಿನವರಿಗೆ ವೈಯ್ಯಕ್ತಿಕವಾದ ಸಾಂಘಿಕ ಶಕ್ತಿ ಇದೆ. ಆದ್ದರಿಂದ ಕಾಂಗ್ರೆಸ್ಸಿನವರು ಚುನಾವಣೆಯಲ್ಲಿ ಬಂದೇ ಬರುತ್ತಾರೆ. ಆಮೇಲೆ ಡಿಫೆನ್ಸ್ ಕಾಯಿದೆ ಪ್ರಕಾರ ದೇಶದಲ್ಲಿ ಶಾಂತ ಪರಿಸ್ಥಿತಿ ಇದೆಯೆಂದು ಸಾಕಷ್ಟು ಸರ್ಕಾರದ ತಿಳುವಳಿಕೆಗೆ ಬಂದಾಗ ತುರ್ತು ಪರಿಸ್ಥಿತಿಯನ್ನು ತೆಗೆದುಹಾಕಬೇಕು. ಈ ತುರ್ತು ಪರಿಸ್ಥಿತಿಯನ್ನು ತೆಗೆದುಹಾಕತಕ್ಕ ವಿಷಯ ಮೈಸೂರು ಸರ್ಕಾರಕ್ಕೆ ಸಂಬಂಧಪಟ್ಟದ್ದಲ್ಲ. ಅದು ಕೇಂದ್ರ ಸರ್ಕಾರಕ್ಕೆ ಸಂಬಂಧ ಪಟ್ಟ ವಿಷಯ. ಇಷ್ಟು ಹೇಳಿ ಇದಕ್ಕೆ ಇಲ್ಲಿ ನಮ್ಮ ಮಾನ್ಯ ಮಂತ್ರಿಗಳು ಇಟ್ಟಿರುವ ಬೇಡಿಕೆಗಳನ್ನು ಒಪ್ಪುವುದು ಯೋಗ್ಯವಾದುದು ಮತ್ತು ನಾನು ಹೇಳಿರುವ ಕೆಲವು ಸಲಹೆಗಳನ್ನು ವಿಚಾರ ಮಾಡಬೇಕೆಂದು ನಾನು ವಿನಂತಿಮಾಡಿಕೊಳ್ಳುತ್ತೇನೆ. ಮಾನ್ಯ ಸದಸ್ಯರೆಲ್ಲರೂ ಈ ಬೇಡಿಕೆಗಳನ್ನು ಒಪ್ಪಬೇಕೆಂದು ಹೇಳಿ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಎರಡು ನಿಮಿಷ ಹೆಚ್ಚು ಕಾಲಾವಕಾಶವನ್ನು ಕೊಟ್ಟದ್ದಕ್ಕಾಗಿ ಅವರಿಗೆ ನನ್ನ ಆಭಾರವನ್ನು ಮನ್ನಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎ. ಕೃಷ್ಣಶೆಟ್ಟಿ (ಮಂಗಳೂರು-2).—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಅಗ್ನಿಹೋತ್ರಿಯವರು ಮಾತನಾಡುವಾಗ ಅವರು ಜೈಲಿನೊಳಗೆ ಇದ್ದು ಅದರ ಬಗ್ಗೆ ಅನುಭವ ಪಡೆದು ಅಲ್ಲಿ ಬದಲಾವಣೆಯಾಗಬೇಕೆಂದು ಜೈಲಿನಿಂದ ಹೊರಕ್ಕೆ ಬಂದು ಹೇಳಿದುದಲ್ಲ. ಎರಡನೆಯದು ಅವರು ಜೈಲಿನ ಅನುಭವವನ್ನು ಕುರಿತು ಮಾತನಾಡುವಾಗ ಏನಾದರೂ ಒಂದು ಪೆನ್ನನ್ನು ಆದರೂ ಕದ್ದು ಜೈಲಿನೊಳಗೆ ಹೋದರೆ ಒಳ್ಳೆಯದಾದೀತು ಎನ್ನುವಂತೆ ಹೇಳಿದರು. ಆದರೆ ಇದು ಅವರು ಸರಿಯಾದ ತಿಳುವಳಿಕೆಯಿಂದ ಹೇಳಿದ ಮಾತಲ್ಲ ಎಂದು ಇಲ್ಲಿ ಹೇಳಬಯಸುತ್ತೇನೆ. ಜೈಲು ಹಾಗೂ ಪೋಲೀಸು ಬೇಡಿಕೆಗಳವಟ್ಟಿಗೆ ಇಲ್ಲಿ ಒಂದೆರಡು ವಿಷಯಗಳನ್ನು ಮಾತ್ರ ತಮ್ಮ ಮುಂದೆ ಇಡ ಬಯಸುತ್ತೇನೆ. ಒಂದು ಸರಕಾರ ಹೇಗೆ ಪ್ರವರ್ಧಮಾನಕ್ಕೆ ಬರಬೇಕು ಎಂದರೆ ಪೋಲೀಸಿನವರು ಹೇಗೆ ದಕ್ಷತೆಯಿಂದ ಇರಬೇಕು, ಜೈಲುಗಳಲ್ಲಿ ಇರುವವರಿಗೆ ಹೇಗೆ ತರಬೇತಿ ಶಿಬಿರವನ್ನು ಮಾಡಿ ಅಲ್ಲಿ ಶಿಕ್ಷಣ ಕೊಡಬೇಕು. ಅಲ್ಲಿರುವಾಗ ಅವರ ಮನಸ್ಸನ್ನು ಬದಲಾವಣೆ ಮಾಡುವಂತಹ ಮತ್ತು ಆಮೇಲೆ ಅವರು ಒಂದು ಹೊಸ ಜೀವನವನ್ನು ನಡೆಸಲು ಅನುಕೂಲವಾದ ಮಾರ್ಗಗಳನ್ನು ಹೇಗೆ ಕಲ್ಪಿಸಿಕೊಡಬೇಕೆನ್ನುವ ಸಲಹೆಗಳೂ ಇವೆ. ಪೋಲೀಸಿನವರು ನ್ಯಾಯವಾಗಿ ವರ್ತಿಸಿ ರಾಜ್ಯದ ಪ್ರಜಾಪ್ರಭುತ್ವವನ್ನು ಉಳಿಸಿಕೊಂಡು ಜನತೆಗೆ ಬಂದಿರುವ ಸ್ವಾತಂತ್ರ್ಯವನ್ನು ಸರಿಯಾಗಿ ಉಳಿಸಿ ಕೊಂಡು, ಪ್ರಜಾಪ್ರಭುತ್ವದ ಮೂಲಭೂತವಾದ ಹಕ್ಕುಗಳನ್ನು ಸರಿಯಾಗಿ ಕಾಪಾಡಿಕೊಂಡು ಹೋಗಲು ಸಹಾಯ ಮಾಡಲಲ್ಲ ಎಂದು ಹೇಳಬೇಕಾಗಿದೆ.

ಈಗ ಜೈಲು ವಿಷಯವಾಗಿ ಹೇಳುವುದು ಇದ್ದರೆ ನಾನು ಹೇಳುವ ಮಟ್ಟಿಗೆ ಜೈಲಿನಲ್ಲಿ 1947ರ ಮೊದಲಿಗೆ ಕಾನೂನು ಏನು ಇತ್ತೊ ಅದರಿಂದ ಈಚೆಗೆ ಏನೂ ಸುಧಾರಣೆಯಾಗಿಲ್ಲ ಎಂದು ನನ್ನ ಅಭಿಪ್ರಾಯ. ಈಗ ಸರಕಾರದ ಭಾಗದ ಭರವಸೆ ಮತ್ತು ಅಂಕೆ ಸಂಖ್ಯೆಗಳನ್ನು ಕೊಡಬೇಕೆಂದರೆ ನಾನು ಈಚೆಗೆ ಜೈಲಿಗೆ ಹೋಗಿ ಬಂದವನು. ಅಲ್ಲಿ ಮೊದಲಿಗಿಂತ ಇದ್ದ ಸೌಕರ್ಯಗಳು ಇನ್ನೂ ಕಡಿಮೆಯಾಗಿದೆ. ಈಗ ಜೈಲಿನಲ್ಲಿ ಯಾವ ರೀತಿಯಾಗಿ ಆಹಾರಗಳನ್ನು ಕೊಡುತ್ತಿದ್ದಾರೆ ಎಂದರೆ, ಹಿಂದೆ ನಮ್ಮ ಮಂಗಳೂರು ಸಬ್ ಜೈಲಿನಲ್ಲಿ ಮಾಂಸಾಹಾರವನ್ನು ಖೈದಿಗಳಿಗೆ ಕೊಡುತ್ತಿದ್ದರು. 1947ರ ಮೊದಲಿಗೆ ಏನು ಒಂದು ಕಾಳು ಕೊಡುತ್ತಿದ್ದರೋ ಅದಕ್ಕಿಂತ ಹೆಚ್ಚಾಗಿ ಒಂದು ಕಾಳನ್ನೂ ಈಗ ಇಲ್ಲಿ ಕೊಡುತ್ತಿಲ್ಲ. ಇದು ಮಂಗಳೂರು ಸಬ್ ಜೈಲಿನಲ್ಲಿ ನಡೆಯುತ್ತಿರುವ ವ್ಯವಹಾರ. ಇಲ್ಲಿ 1947ರಲ್ಲಿ ಎಷ್ಟು ಆಹಾರ ಕೊಡುತ್ತಾ ಇದ್ದರೋ ಅದಕ್ಕಿಂತ ಒಂದು ಕಾಳನ್ನೂ ಹೆಚ್ಚಿಸಿಲ್ಲ. ಮೊದಲು ತರಕಾರಿ ಹಾಗೂ ನಾನ್ ವೆಜಿಟೇರಿಯನ್ ಫುಡ್‌ನ್ನು ಕೊಡುತ್ತಿದ್ದರು. ಈಗ ಮೈಸೂರು ದೇಶದ ಇತರ ಜೈಲುಗಳಲ್ಲಿ ಕೊಡುತ್ತಿದ್ದಾರೆ, ಆದರೆ ಇಲ್ಲಿ ಕೊಡುತ್ತಿಲ್ಲ. ಮಂಗಳೂರು ಸಬ್ ಜೈಲಿನಲ್ಲಿ ಏನಾದರೂ ಬದಲಾವಣೆಯಾಗಿದೆಯೋ ಮತ್ತು ಇತರ ಕಡೆ ಇರುವ ಜೈಲಿನೊಳಗೆ ಹೋದ ಖೈದಿಗಳಿಗೆ ಏನಾದರೂ ಬದಲಾವಣೆಯಾಗಿದೆಯೋ ಎಂದರೆ ಏನೂ ಆಗಿಲ್ಲ. ಇದನ್ನು ನೀವು ಚೆನ್ನಾಗಿ ನೋಡಬೇಕು. ಬರೀ ಭುಜ ಚಪ್ಪರಿಸುವಂತಹ ಒಂದೆರಡು ಮಾತುಗಳನ್ನು ಇಲ್ಲಿ ಮಾತಾಡಿದರೆ, ಅದೂ ಜೈಲಿನ ಬಗ್ಗೆ, ಸರಿಯಾಗಿರುವುದಿಲ್ಲ. ಹಿಂದೆ ಹಳೇ ಕಾಲದಲ್ಲಿ ಏನಿತ್ತೋ ಅದಕ್ಕೆ ಮೇಲೆ ಏನೂ ಆಗಿಲ್ಲ. ಇಲ್ಲಿ ಜೈಲಿನ ವಿಷಯದಲ್ಲಿ ಮಾತನಾಡುವಾಗ ಶಿಕ್ಷೆ ಪಡೆದು ದಂಡ ಕೊಡುವ ಸ್ಥಾನ ಎನ್ನುವುದೂ ಅಲ್ಲದೆ ರಕ್ಷಣೆ ಕೊಡುವ ಪೋಲೀಸಿನವರ ಮಟ್ಟಿಗೆ ನಿಜವಾದ ಒಂದು ಸಹಜ ಚಿತ್ರವನ್ನು ನಮ್ಮ ಜನರ ಮುಂದೆ ಇಡದೇ ಇದ್ದರೆ ಅದು ಒಳಿತಾಗುವುದಿಲ್ಲ. ಮೊದಲಿನಿಂದಲೂ ಜೈಲಿನಲ್ಲಿ ಯಾವ ರೀತಿ ಹಳೆಯ ಮಾದರಿಯಲ್ಲಿ ಸಾಮಾನುಗಳು ಸರಬರಾಜಾಗುತ್ತಿತ್ತೊ ಅದಕ್ಕಿಂತ ಒಂದು ಕಾಸೂ ಹೆಚ್ಚಾಗಿ ಕೊಡುತ್ತಿಲ್ಲ. ಒಂದು ರೂಪಾಯಿನ ಸಾಮಾನುಗಳು ಎಂದು ಹಿಂದೆ ಏನು ಖೈದಿಗಳಿಗೆ ಕೊಡುತ್ತಿದ್ದರೋ ಅದಕ್ಕಿಂತ ಒಂದು ಕಾಸು ಕೂಡ ಹೆಚ್ಚಿಗೆ ಕೊಡುತ್ತಿಲ್ಲ.

ಕೊಡುವುದರಲ್ಲಿಯೂ ಅರಾಣೆಯಷ್ಟು ಪಾಲು ಕೂಡ ಖೈದಿಗೆ ಸಿಗುತ್ತೋ ಇಲ್ಲವೋ. ಅದು ಸಾಕಾಗುತ್ತದೋ ಏನು ಎನ್ನುವುದನ್ನು ತಾವು ಯೋಚನೆ ಮಾಡಬೇಕು. ಒಂದು ರೂಪಾಯಿನ ಸಾಮಾನುಗಳಲ್ಲಿ ಬೇರೆಯವರು ಪಾಲು ತೆಗೆದುಕೊಳ್ಳದೆ ಒಳಕ್ಕೆ ಹೋಗುವಂತೆಯೇ ಇಲ್ಲ. ಒಂದು ಭಾಗ ಜೈಲು ಸೂಪರಿಂಟೆಂಡೆಂಟರವರಿಗೆ ಹೋಗಬೇಕು, ಅನಂತರ ಒಂದು ಪಾಲು ಜೈಲು ವಾರ್ಡರುಗಳಿಗೆ ಹೋಗಬೇಕು ಮತ್ತು ಇನ್ನಿತರರಿಗೆ ಕೂಡ ಹೋಗಬೇಕು. ಅವರ ಪಾಲುಗಳನ್ನು ಕೊಡದೇ ನೇರವಾಗಿ ಖೈದಿಗಳಿಗೆ ಪದಾರ್ಥಗಳು ಹೋಗಲಿಕ್ಕೆ ಅವಕಾಶವೇ ಇಲ್ಲ. ಹೀಗಾಗಿ ಖೈದಿಗಳ ಕೈಗೆ ಬರುವ ವೇಳೆಗೆ ಅರಾಣೆಯಷ್ಟು ಪಾಲು ಬರುತ್ತದೋ ಇಲ್ಲವೋ ಅದೂ ಕೂಡ ಕಷ್ಟವಾಗುತ್ತದೆ. ಅಲ್ಲದೆ ಇಲ್ಲಿ ಒಳ್ಳೆಯ ಅಕ್ಕಿಯನ್ನು ಖೈದಿಗಳಿಗೆ ಕೊಡಬೇಕು ಎಂದಿದೆ. ಇದು ಖೈದಿಗಳಿಗೆ ಸರಿಯಾಗಿ ಬರುತ್ತೋ ಇಲ್ಲವೋ ಯಾರೂ ನೋಡುತ್ತಿಲ್ಲ. ಒಳ್ಳೆಯ ಅಕ್ಕಿ ಎಲ್ಲ ಜೈಲು ಸೂಪರಿಂಟೆಂಡೆಂಟರವರಿಗೆ ಹಾಗೂ ವಾರ್ಡರುಗಳಿಗೆ ಮೀಸಲಾಗಿರುತ್ತದೆ. ಕಲ್ಲು ಕಸಗಳಿಂದ ಕೂಡಿದ ಅಕ್ಕಿ ಖೈದಿಗಳಿಗೆ ಸರಬರಾಜು ಆಗುತ್ತದೆ. ಸಂಬಂಧಪಟ್ಟವರು ಎಲ್ಲ ಅನುಕೂಲಗಳನ್ನೂ ಖೈದಿಗಳಿಗೆ ಕಲ್ಪಿಸಿ ಕೊಡಲಾಗಿದೆ ಎಂದು ಬರೀ ಬಾಯಿಲ್ಲಿ ಇಲ್ಲಿ ಬಂದು ಹೇಳಬಹುದು. ಆಕ್ಟು ಪ್ರಕಾರ ಎಲ್ಲ ಸೌಕರ್ಯಗಳನ್ನೂ ಒದಗಿಸಿಕೊಡಲಾಗಿದೆ ಎಂದು ಇಲ್ಲಿ ಬಂದು ಹೇಳಬಹುದು. ಅವರಿಗೆ ಕಟ್ಟಿಗೆ ಕೊಡುವಾಗಲೂ ಕೂಡ ಒಳ್ಳೆಯ ಚನ್ನಾಗಿರುವ ಕಟ್ಟಿಗೆಗಳೆಲ್ಲಾ ಜೈಲು ವಾರ್ಡರು ಹಾಗೂ ಇತರ ಅಧಿಕಾರಿಗಳಿಗೆ ಹೋಗುತ್ತದೆ. ಹಸಿಯಾಗಿರುವ ಹಾಗೂ ಕೆಟ್ಟ ಕಟ್ಟಿಗೆಯನ್ನು ಖೈದಿಗಳಿಗೆ ಎಂದು ಸ್ಪೆಷಲ್ಲಾಗಿ ಒದಗಿಸಿಕೊಡುತ್ತಿದ್ದಾರೆ. ಇದನ್ನೆಲ್ಲಾ ನೋಡಿಕೊಂಡು ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಅಗ್ನಿಹೋತ್ರಿಯವರು ಹಾಗೂ ಮಾನ್ಯ ಸದಸ್ಯರಾದ ಶ್ರೀಮಾನ್ ಗುರ್ರೆಡ್ಡಿಯವರು ಇಲ್ಲಿ ಎಲ್ಲ ಚೆನ್ನಾಗಿ ನಡೆಯುತ್ತಿದೆ ಎಂದು ಹೇಳಿದ್ದರೆ ನನಗೂ ಸಂತೋಷವಾಗುತ್ತಿತ್ತು. ಇದನ್ನು ಬಿಟ್ಟು ಸುಮ್ಮನೆ ಆಡಳಿತ ಚೆನ್ನಾಗಿದೆ ಎಂದು ಹೇಳಿದರೆ ಅದು ಸರಿಯಾಗಿ ಕಾಣುವುದಿಲ್ಲ. ಕೆಲವು ಜನ ಸಿನಿಮಾಗಳಿಗೆ ಹೋಗುತ್ತಿದ್ದಾರೆ, ಕೆಲವು ಜನ ನಾಟಕಗಳಿಗೆ ಹೋಗುತ್ತಾರೆ ಹೀಗೆ ಇದಕ್ಕೆಲ್ಲಾ ಅವಕಾಶಗಳನ್ನು ಮಾಡಿಕೊಟ್ಟಿದ್ದರೂ ಖೈದಿಗಳ ಜೀವನದಲ್ಲಿ ಏಕೆ ಸುಧಾರಣೆಯಾಗಲಿಲ್ಲ? ಬದಲಾವಣೆಯಾಗಲಿಲ್ಲ ಎಂದು ಮಾನ್ಯ ಸದಸ್ಯರನ್ನು ನಾನು ಕೇಳಬೇಕಾಗಿದೆ. ಕೆಲವು ವೇಳೆ ಕೆಟ್ಟ ಸಿನಿಮಾ ಹಾಗೂ ನಾಟಕಗಳನ್ನು ಜನ ನೋಡುವುದರಿಂದ ಸಮಾಜದಲ್ಲಿನ ಜನ ಕೆಡುತ್ತಾರೆ. ಕೆಲವು ಸಮಯದಲ್ಲಿ ಒಳ್ಳೆಯ ನೀತಿಯುತವಾದ ನಾಟಕಗಳನ್ನು ನೋಡಿದರೆ ಅದರಿಂದ ಒಳ್ಳೆಯ ಪರಿಣಾಮವೂ ಆಗುತ್ತದೆ. ಆದರೆ ಎಲ್ಲ ಕಡೆಗಳಲ್ಲಿಯೂ ಒಳ್ಳೆಯದೇ ಖೈದಿಗಳಿಗೆ ಆಗಿದೆ ಎಂದು ಹೇಳುವುದು ಬಹಳ ಕಷ್ಟ. ಇದರಲ್ಲಿನ ಇನ್ನೊಂದು ಭಾಗವನ್ನು ಇಲ್ಲಿ ಹೇಳುತ್ತೇನೆ. ಜೈಲಿನಿಂದ ಹೊರಗಡೆ ಊಟ ಮಾಡಲಿಕ್ಕೆ ಸುಮಾರು 85 ಪೈಸೆಯಷ್ಟು ಒಂದು ಊಟಕ್ಕೆ ಕೊಡಬೇಕು. ಆದರೆ ಜೈಲಿನೊಳಗೆ ಇರುವ ಖೈದಿಗಳಿಗೆ ಹನ್ನೆರಡು ಬೀಡಿಗಳನ್ನು ಕೊಟ್ಟರೆ ಅವರು ಅನ್ನವನ್ನು ಬಿಡಲಿಕ್ಕೆ ಸಾಕು. ಕೆಲವು ವೇಳೆ ಆರು ಬೀಡಿಗಳಿದ್ದರೂ ಸಾಕು. ಜೈಲಿನಲ್ಲಿ ಇಷ್ಟೇ ಅನ್ನ ತೆಗೆದುಕೊಂಡು ಊಟ ಮಾಡಬೇಕೆಂದು ಒಬ್ಬನಿಗೆ ಯಾವ ವ್ಯವಸ್ಥೆ ಇದೆಯೋ ಅದರಂತೆ ಕೊಡುತ್ತಾರೋ ಇಲ್ಲವೋ ಎಂದು ಯಾರೂ ನೋಡುತ್ತಿಲ್ಲ. ಅಲ್ಲದೆ ಇಲ್ಲಿ ಕಂಬಳಿಗಳನ್ನು ಮಾಡುತ್ತಾರೆ, ಇದರ ಮಾರಾಟ ಹೇಗೆ ಆಗುತ್ತಿದೆ ಎಂದರೆ 30 ಬೀಡಿಗಳಿಗೆ ಒಂದು ಕಂಬಳಿ ಎಂದು ಮಾರಾಟ ಮಾಡುತ್ತಾರೆ. ಮಾರಾಟ ಹೇಗೆ ಆಗುತ್ತದೆ ಎನ್ನುವುದನ್ನು ತಮಗೆ ತೋರಿಸುತ್ತೇನೆ, ಯಾರಾದರೂ ಬರಲಿ ನನ್ನೊಡನೆ ಆಗ ಇದರ ವಿವರಗಳನ್ನು ಅವರೇ ನೋಡಬಹುದು. ಹೀಗೆಲ್ಲಾ ಮಾಡಿದರೆ ಜೈಲಿನಲ್ಲಿ ಸುಧಾರಣೆ ಮಾಡಿದಂತಾಯಿತೇ? 1960ನೇ ಇಸವಿಯಿಂದ ಬಳ್ಳಾರಿ ಜೈಲಿನಲ್ಲಿ ಒಂದು ಮಿಲ್ಲು ಓಡಾಡುತ್ತಿತ್ತು. ಆದರೆ ಈಗ ಅದು ಇಲ್ಲ. ಸರಕಾರದಲ್ಲಿ ಜವಾಬುದಾರಿ ಹೊತ್ತವರು ಏತಕ್ಕಾಗಿ ಇಲ್ಲಿ ಮಿಲ್ಲು ಓಡಾಡುತ್ತಿಲ್ಲ ಅದೇಕೆ ಹೀಗಾಗಿದೆ ಎನ್ನುವುದರ ಅಂಕೆ ಸಂಖ್ಯೆಗಳನ್ನು ಇಲ್ಲಿ ಹೇಳಬೇಕಾಗಿದೆ ಎಂದು ಕೇಳುತ್ತೇನೆ. ಇಷ್ಟು ಮಾತ್ರವಲ್ಲ. ಈಗ ಜೈಲುಗಳಲ್ಲಿ ಯಾವ ರೀತಿಯ ಸುಧಾರಣೆಯೂ ಇಲ್ಲ. ಸುಧಾರಣೆ ಎಲ್ಲಿ ಆಗಿದೆ ಎನ್ನುವುದನ್ನು ಹೇಳಬೇಕಾದರೆ, ನಿಜವಾಗಿಯೂ ಜನರಲ್ಲಿ ಬಹಳ ಬದಲಾವಣೆಯಾಗಲು ಸಹಾಯ ಮಾಡಬೇಕು. ರಾಜ್ಯ ಸರಕಾರದವರು ಎಷ್ಟು ವರ್ಗದ ಜೈಲಿನವರಿಗೆ ಬೇರೆ ಬೇರೆ ರೀತಿಯಾದ ಸೌಕರ್ಯಗಳನ್ನು ಕೊಡಬೇಕೆಂದು ಇದೆಯೋ ಆ ರೀತಿ ಒದಗಿಸಿಕೊಡುತ್ತಿದ್ದಾರೆಯೇ ಎಂದು ನೋಡಿದರೆ, ಇಲ್ಲ ಎನ್ನುವುದು ಗೊತ್ತಾಗುತ್ತದೆ. ಮಂಗಳೂರಿನಲ್ಲಿರುವ ಸಬ್ ಜೈಲಿನಲ್ಲಿ ತರಕಾರಿ ಹಾಗೂ ಮಾಂಸಾಹಾರವನ್ನು ಇತರ ಕಡೆಗಳಲ್ಲಿನ ಜೈಲುಗಳಂತೆ ಅಲ್ಲಿ ಕೊಡದೇ ಇರಲು ಕಾರಣವೇನು? ಮಂಗಳೂರಿನಲ್ಲಿ ಹಿಂದೆ ಮದರಾಸು ಸರಕಾರ ಇದ್ದಾಗ ಏನು ಕೊಡುತ್ತಿದ್ದರೋ ಅದಕ್ಕಿಂತ ಹೆಚ್ಚಾಗಿ ಕೊಡುತ್ತಿದ್ದೇವೆ ಎಂದು ಹೇಳುವುದು ಸರಿಯಲ್ಲ. ಇಷ್ಟೊಂದು ತಾರತಮ್ಯವೇಕೆ ಇರಬೇಕು? ಒಬ್ಬನಿಗೆ ಜೈಲು ಒಳಗೆ ಇರುವಾಗ ಅವನ ಜೀವನದಲ್ಲಿ ಸುಧಾರಣೆಯಾಗಿ ಅವನು ಹೊರಕ್ಕೆ ಬಂದಮೇಲೆ ಸುಧಾರಿತವಾದ ಜೀವನವನ್ನು ಅನುಸರಿಸಲು ಅದಕ್ಕೆ ತಕ್ಕ ಮಾರ್ಗಗಳು ಇರುವಂತೆ ಇಲ್ಲಿ ಕಲ್ಪಿಸಿಕೊಡಬೇಕು. ಹಾಗೆ ಕಲಿಸಿ

(ಶ್ರೀ ಎ. ಕೃಷ್ಣಶೆಟ್ಟಿ)

ಕೊಡುವುದಕ್ಕೆ ಸಾಧ್ಯವಾದರೆ ಆಗ ಜೈಲಿನಲ್ಲಿ ಅನುಸರಿಸುತ್ತಿರುವ ನೀತಿ ಸಫಲವಾಗುತ್ತದೆ. ಇವೊತ್ತು ಇರುವ ಜೈಲುಗಳ ಸ್ಥಿತಿಯನ್ನು ನೋಡಿದರೆ ಅಲ್ಲಿರುವ ಜನಕ್ಕೆ ಸುಧಾರಣೆ ಹೊಂದಿದ ಯಾವ ಸೌಕರ್ಯಗಳೂ ಇಲ್ಲ ಮತ್ತು ಯಾವ ಜೈಲು ಕೂಡ ಸುಧಾರಣೆ ಹೊಂದಿಲ್ಲ. 1965ನೇ ಇಸವಿಯಲ್ಲಿದ್ದ ಕಾಲದಂತೆ 66ನೇ ಇಸವಿಯ ಕಾಲ ಇಲ್ಲ. ಆಗ ಇದ್ದಂತೆ ಈಗ ಎಲ್ಲಿಯೂ ಇಲ್ಲ. ತಾವು ಇಲ್ಲಿ ಫ್ರಾನ್ಸ್ ದೇಶದ ವಿಚಾರ ಹೇಳಿದಿರಿ. ಫ್ರಾನ್ಸಿನಲ್ಲಿ 1789ರಲ್ಲಿ ಕ್ರಾಂತಿಯಾಯಿತು. ಅಲ್ಲಿ ಆಗ ಒಬ್ಬ ಡಾಕ್ಟರು ಜೈಲಿನೊಳಗೆ ಸುಮಾರು ಇಪ್ಪತ್ತು ವರ್ಷಗಳಿಂದಲೂ ಇದ್ದವರನ್ನು ಜೈಲಿನಿಂದ ಹೊರಕ್ಕೆ ಬಿಟ್ಟಾಗ ಅವರು ಹೊರಕ್ಕೆ ಬರುವುದಿಲ್ಲ, ನಾನು ಜೈಲಿನೊಳಗೇ ಇರುತ್ತೇನೆ ಎಂದು ಹೇಳಿದರು. ಅವರಿಗೆ ಹೊರಗಿನ ಜೀವನವೇ ಮರೆತುಹೋಗಿತ್ತು. ಏಕೆಂದರೆ, ಅವರ ಮೆದುಳು ಒಂದು ರೀತಿಯಾಗಿ ಸ್ಥಗಿತವಾಗಿತ್ತು. ಅದರಿಂದಾಗಿ ಅಂತಹ ಒಬ್ಬ ಡಾಕ್ಟರು ಜೈಲಿನಿಂದ ಹೊರಕ್ಕೆ ಬರಲು ಇಷ್ಟಪಡದೇ ಜೈಲಿನೊಳಗೇ ಹೋಗಬೇಕೆಂದು ಹೇಳುತ್ತಿದ್ದರು. ಆದರೆ ನೀವು ಇಲ್ಲಿ ಕೊಡುವ ಉತ್ತರ ಜೈಲಿನೊಳಗೆ ಸುಧಾರಣೆಯಾಗಿದೆ ಎನ್ನುವುದು. ಇಲ್ಲಿ ರಾಜಕೀಯ ಖೈದಿಗಳ ಬಗ್ಗೆ ನೀವು ನಿಜವಾಗಿಯೂ ಯಾವ ರೀತಿಯ ಅನುಕೂಲಗಳನ್ನು ಮಾಡಿಕೊಡಬೇಕೋ ಆ ರೀತಿ ಮಾಡಿ ಕೊಡುತ್ತಿಲ್ಲ. ನಾವು ಕಾಂಗ್ರೆಸಿನಲ್ಲಿದ್ದಾಗಲೂ ರಾಜಕೀಯ ಖೈದಿಗಳಾಗಿ ಅನುಭವ ಪಡೆದಿದ್ದೇವೆ. ಈಗ ಕಾಂಗ್ರೆಸ್ಸು ಪಕ್ಷದಲ್ಲಿರುವ ಆಡಳಿತದವರು ವಿರೋಧ ಪಕ್ಷದಿಂದ ಬಂದಿರುವ ರಾಜಕೀಯ ಖೈದಿಗಳನ್ನು ಯಾವ ರೀತಿಯಲ್ಲಿ ನೋಡಬೇಕೋ ಆ ರೀತಿಯಲ್ಲಿ ನೋಡಿ ಕೊಳ್ಳುತ್ತಿಲ್ಲ. ನಮ್ಮ ರಾಜ್ಯದಲ್ಲಿ ಮದರಾಸು ರಾಜ್ಯದಲ್ಲಿ ರಾಜಕೀಯ ಖೈದಿಗಳಿಗೆ ತೋರಿಸು ತ್ತಿರುವ ಸೌಕರ್ಯಗಳನ್ನು ಕೂಡ ಇಲ್ಲಿ ಕೊಡುತ್ತಿಲ್ಲ. ಅದು ಸಿಗುವುದಿಲ್ಲ. ಆಹಾರದ ಮಟ್ಟಿಗೆ ತೆಗೆದುಕೊಳ್ಳಿ ಇಲ್ಲವೇ ಮಾಸಿಕ ವೇತನದ ಬಗ್ಗೆ ತೆಗೆದುಕೊಳ್ಳಿ ಯಾವುದರಲ್ಲಿ ನೋಡಿದರೂ ಅನುಕೂಲ ಗಳಿಲ್ಲ. ಮಾಸಿಕ ವೇತನ ಬಹು ಕಡಿಮೆಯಾಗಿ ಎಂದರೆ ತಿಂಗಳಿಗೆ 50 ರೂಪಾಯಿ ಎಂದು ಇದ್ದರೂ ಇದು ಕೆಲವರಿಗೆ ಸಿಗುತ್ತದೆ, ಕೆಲವರಿಗೆ ಸಿಗುತ್ತಿಲ್ಲ.

'ಫ್ಯಾಮಿಲಿ' ಡೆಫನಿಷನ್ ನಲ್ಲಿ ಮಾತ್ರ ಕುಟುಂಬದವರಿಗೆ ಕೊಡಕೂಡದು ಎಂದು ಹೇಳುತ್ತ ಇದ್ದರು. ಅವರ ಪ್ರಕಾರ ಕುಟುಂಬ ಎಂದರೆ ಅಣ್ಣ-ಅಣ್ಣನ ಮಕ್ಕಳು, ತಂಗಿ ಇವರುಗಳು ಅಷ್ಟೆ. ನಮ್ಮಲ್ಲಿ ಅಳಿಯ ಸಂತಾನಕ್ಕೂ ಸಂಬಂಧ ಇದೆ. ಮೆಟ್ರಿಯಾರ್ಕಿಯಲ್ ಸಿಸ್ಟಂನಲ್ಲಿ ಹೆಂಡತಿಗಿಂತಲೂ ತಾಯಿ ತಾಯಿಯ ಅಣ್ಣ ತಮ್ಮಂದಿರು ಹತ್ತಿರ ಸಂಬಂಧಿಗಳು. ತಮ್ಮ ಪ್ರಕಾರ ಅವರ ಕುಟುಂಬ ಬರುವುದಿಲ್ಲ. ಅಂತಹ ಒಬ್ಬಿಬ್ಬರು ಜೈಲಿನಲ್ಲಿದ್ದರೆ ಅವನಿಗೆ ಹೆಂಡತಿ ಇಲ್ಲ, ಮಕ್ಕಳು ಇಲ್ಲ ಎಂದು ಹೇಳಿದ ಮಾತ್ರಕ್ಕೆ ಅವನಿಗೆ ಮಾಸಿಕ ವೇತನ ಕೊಡುವುದಕ್ಕಾಗುವುದಿಲ್ಲ ಎಂದು ನಿರ್ಣಯ ಮಾಡಿರು ವುದು ಸರಿಯೇ ? ಫ್ಲಾಟ್ ರೇಟ್ ಕೊಟ್ಟಿಲ್ಲ, ಕೆಲವರಿಗೆ ಹೆಚ್ಚು ಕೊಟ್ಟಿದ್ದಾರೆ, ಕೆಲವರಿಗೆ ಕಡಿಮೆ ಕೊಟ್ಟಿದ್ದಾರೆ. ಇನ್ನು ನಮಗೆ ಬರುವ ಪತ್ರಿಕೆಗಳು ಯಾವ ರೀತಿ ಇರುತ್ತವೆ ಎಂಬುದರ ವಿಷಯದಲ್ಲಿ ಒಂದೆರಡು ಮಾತನ್ನು ಹೇಳಬೇಕೆಂದಿದ್ದೇನೆ. ನಮಗೆ ಬರುವ ಪತ್ರಿಕೆಗಳಲ್ಲಿ ಅಡ್ವರ್‌ಟೈಸ್‌ಮೆಂಟ್ ಬಿಟ್ಟು ಬಾಕಿ ಯಾವ ಸುದ್ದಿಯೂ ಇರುವುದಿಲ್ಲ. ಎಲ್ಲ ಸುದ್ದಿಗಳೂ ಬ್ಲಾಕ್ ಔಟ್ ಆಗಿರುತ್ತವೆ. ಇಂತಹ ಪತ್ರಿಕೆಯನ್ನು ಜೈಲಿನಲ್ಲಿದ್ದುಕೊಂಡು ಓದಿ ಏನು ತಾನೆ ಮಾಡಿಯಾನು ? ಚಳುವಳಿ ಯಾವ ರೀತಿ ಇದೆ ಎಂಬುದು ಅವನಿಗೆ ಗೊತ್ತಾದರೂ ಕೂಡ ಏನು ಮಾಡಲು ಅಲ್ಲಿ ಸಾಧ್ಯವಿದ್ದೀತು ಆ ಪತ್ರಿಕೆ ಯಲ್ಲಿರುವುದು ಜಾಹೀರಾತು, ಟೆಂಡರ್ ನೋಟೀಸು, ಯಾರೋ ಸತ್ತುಹೋಗಿದ್ದಾರೆ, ವೈಕುಂಠ ಸಮಾರಾಧನೆ, ಇದನ್ನು ಓದುವುದು, ಯಾರಿಗೆ ಸಮಾರಾಧನೆ ಸ್ವಾಮಿ, ಜೈಲಿನ ಸಂಬಂಧ ಅಗ್ನಿ ಹೋತ್ರಿಯವರಿಗೆ ಇರಬಹುದು, ಗುರೆಡ್ಡಿಯವರಿಗೆ ಇರಬಹುದು. ನಿಜವಾಗಿಯೂ ಜೈಲಿನ ಸ್ಥಿತಿ ಯನ್ನು ಈ ರೀತಿಯಾಗಿ ಮಾಡಿದರೆ ಈ ಕಾಂಗ್ರೆಸ್ ಸರ್ಕಾರ ಜನತೆಯ ಸರ್ಕಾರ ಎಂದು ಹೇಳು ವುದೇ, ಅಥವಾ ಇದನ್ನು ಜನ ವಿರೋಧೀ ಸರ್ಕಾರ, ನಿರಂಕುಶ ಸರ್ಕಾರ ಎಂದು ಹೇಳುವುದೇ ! ವಿರೋಧಪಕ್ಷದ ಮೇಲೆ ಗೌರವ ಇದ್ದರೆ, ಪ್ರಜಾಪ್ರಭುತ್ವದ ಮೇಲೆ ಗೌರವ ಇದ್ದರೆ ಅವರೂ ಕೂಡ ಒಂದು ಒಳ್ಳೆಯ ರೀತಿಯಲ್ಲಿ ಮುಂದೆ ಬರಬೇಕು, ನಿಮ್ಮ ಎದುರು ಬಂದು ಅಧಿಕಾರದಲ್ಲಿರು ವವರೊಡನೆ ಸಹಕರಿಸಿ ಕೆಲಸ ಮಾಡಬೇಕೆಂದು ಇದ್ದರೆ, ಈ ರೀತಿ ಅವರಿಗೆ ಹಿಂಸೆ ಕೊಟ್ಟು ಜೈಲಿನಲ್ಲಿ ಡುವುದು ಒಳ್ಳೆಯದೇ ಎಂದು ತಮ್ಮನ್ನು ಪ್ರಶ್ನೆ ಮಾಡುತ್ತೇನೆ. ರಕ್ಷಣಾ ನಿಧಿಗೆ ಹಣ ಕೊಡಬೇಕು. ಕೊಡದೇ ಇರುವವರಿಗೆ ಏನು ಮಾಡುತ್ತಾ ಇದ್ದೀರಿ ಎಂಬುದು ನನಗೆ ಗೊತ್ತಿದೆ. ಯಾರಿಗೆ ಏನು ಮಾಡಿದಿರಿ ಎಂಬುದು ನನಗೆ ಗೊತ್ತು ಅವರ ಹೆಸರು ಹೇಳುವುದಿಲ್ಲ. ಇಲ್ಲಿ ಪ್ರತ್ಯಕ್ಷವಾಗಿ ಒಬ್ಬರ ಹೆಸರು ಹೇಳುವುದು ಬೇಡ. ಜೈಲಿನಲ್ಲಿ ಒಬ್ಬರು ರಕ್ಷಣಾ ನಿಧಿಗೆ ಹಣ ಕೊಡಲಿಲ್ಲ ಎಂದು ಅವರಿಗೆ ಶಿಕ್ಷೆಯಾದದ್ದು ತಮಗೆ ಗೊತ್ತೇ ! ಇದು ನಿಮ್ಮ ರಕ್ಷಣಾ ನಿಧಿಗೆ ಒದಗಿಸುವ ಫಂಡು. ನಮ್ಮಲ್ಲಿ ಇದ್ದವರೆ ಸ್ವಲ್ಪ ಜನರು, ಹೆಚ್ಚು ಜನರು ಇರಲಿಲ್ಲ. ಅವರಿಗೆ ಒಳ್ಳೆಯ ರೀತಿಯಲ್ಲಿ ಮಾಸಿಕ ವೇತನ

ಕೊಟ್ಟಿಲ್ಲ. ಪೇರೋಲ್‌ನಲ್ಲಿ ಕಮ್ಯೂನಿಸ್ಟರ ಮುಖಂಡರನ್ನು ಕೇರಳದಲ್ಲಿ ಬಿಟ್ಟಿದ್ದರು, ಪೇರೋಲನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಅದೇ ರೀತಿ ಅನೇಕ ಕಡೆ ಬಿಟ್ಟಿದ್ದಾರೆ. ಅವರು ಎಲ್ಲಿಗೇ ಆಗಲಿ ಹೋಗುವವುಟ್ಟಿಗೆ, ಬರುವ ಮಟ್ಟಿಗೆ ನಿರ್ಬಂಧ ಹಾಕಲಿಲ್ಲ. ಆ ತರಹ ಒಂದು ಅವಕಾಶವನ್ನು ಇಲ್ಲಿ ಕೊಡಲಿಲ್ಲ, ಕಾಗದ ಬರೆದರೂ ಸಹ ಅದು ತಮಗೆ ಮುಟ್ಟಿಲ್ಲ. ಕೇರಳದಲ್ಲಿ ಯಾವ ಒಂದು ಅವಕಾಶವನ್ನು ಮಾಡಿಕೊಟ್ಟಿದ್ದರೋ ಆ ಒಂದು ಅವಕಾಶ ಇಲ್ಲಿ ಇದೆಯೇ ? ಇಲ್ಲ. ಸುಧಾರಿತ ಪರಿಸ್ಥಿತಿ ಇರುವಾಗ ಒಂದು ಒಳ್ಳೆಯ ರೀತಿಯಲ್ಲಿ ಕೊಂಡು ಹೋಗಬೇಕು. ಜೈಲಿನಲ್ಲಿ ರಾಜಕೀಯ ಕೈದಿಗಳನ್ನು ಮಾತ್ರವಲ್ಲದೆ ಇನ್ನಿತರ ಕೈದಿಗಳ ಮಟ್ಟಿಗೂ ಸಹ ಒಳ್ಳೆಯ ರೀತಿಯಲ್ಲಿ ನೋಡಿಕೊಂಡು ಹೋಗಬೇಕೆಂದು ಹೇಳುತ್ತೇನೆ. ಈ ಡಿಮ್ಯಾಂಡಿನ ಮೇಲೆ ನಾನು ಕೇಳುವುದೇನೆಂದರೆ, ರಾಜಕೀಯ ಕೈದಿಗಳಿಗೆ ಹೆಚ್ಚಿನ ಸೌಲತ್ತು ಒದಗಿಸಿ, ಅದೇ ರೀತಿ ಬೇರೆ ಕೈದಿಗಳಿಗೂಕೂಡ ಅವರ ಜೀವನದಲ್ಲಿ ಹೊಸ ಮಾರ್ಪಾಡು ಆಗುವಂತೆ ಒಳ್ಳೆಯ ವ್ಯವಸ್ಥೆಗಳನ್ನು ಮಾಡಿ, ಈ ನಮ್ಮ ಜೈಲುಗಳನ್ನು ಆದರ್ಶ ಜೈಲುಗಳನ್ನಾಗಿ ಮಾಡಿ ಅವರು ಜೈಲಿನಿಂದ ಹೊರಗೆ ಬಂದು ಹೊಸ ಜೀವನ ನಡೆಸಲಿಕ್ಕೆ, ಮೊದಲು ಮಾಡಿದ ತಪ್ಪು ಮರೆತು ಹೊಸ ರೀತಿಯ ಜೀವನ ಮಾಡಲಕ್ಕೆ ಅನುಕೂಲಕರವಾದ ವಾತಾವರಣವನ್ನು ಕಲ್ಪಿಸುವುದಕ್ಕೆ, ಜೈಲಿನಲ್ಲಿ ಅವಕಾಶ ಮಾಡಿಕೊಡಿ ಎಂದು ಹೇಳುತ್ತೇನೆ. ಮಂಗಳೂರು ಜೈಲಿಗೆ ಹೆಚ್ಚಿನ ರೇಷನ್ ಒದಗಿಸಿ, ಅಲ್ಲಿ ಈಗ ತರಕಾರಿ ಕೊಡುವುದು, ಆಹಾರ ಕೊಡುವುದು ನಾನ್ ವೆಜಿಟೇರಿಯನ್ ಫುಡ್ ಅಲ್ಲ. ಈ ಅನುಕೂಲ ಮಂಗಳೂರಿನ ಜೈಲಿಗೆ ಸಿಕ್ಕಿಲ್ಲ. ಇದೇ ರೀತಿ ಇಲ್ಲಾ ಜೈಲುಗಳಲ್ಲೂ ಕೆಲಸ ಮಾಡತಕ್ಕವರಿಗೆ ಯಾವ ರೀತಿ ಹೆಚ್ಚಿಗೆ ಸಂಬಳ ಸಿಕ್ಕುತ್ತದೆ ಆ ರೀತಿ ಇಲ್ಲಿ ಇಲ್ಲ. ಒಂದು ಒಳ್ಳೆಯ ಖುರ್ಚಿ ಮಾಡಿದವನಿಗೆ ಬ್ಲಾಂಕೆಟ್ ಮಾಡಿದವನಿಗೆ ಇಂತಿಷ್ಟು ಸಂಬಳ ಅಂತ ಉಂಟು. ಅದು ಹೆಚ್ಚು ಒಳ್ಳೆಯ ಸಂಬಳ ಬರುವಂತಾಗಿ ಅವರಿಗೆ ಅನುಕೂಲ ಮಾಡಿಕೊಡಿ ಎಂದು ಹೇಳುತ್ತೇನೆ. ಅದು ಬಿಟ್ಟು ನೀವು ಕಾಂಗ್ರೆಸ್ ಸರ್ಕಾರ ಎಂದು ಹೇಳುತ್ತೀರಿ, ನಿಜ, ಸ್ವಾತಂತ್ರ್ಯವನ್ನು ಗಳಿಸುವುದಕ್ಕೆ ಹೋರಾಟ ಮಾಡಿದ್ದೀರಿ, ಬ್ರಿಟಿಷರೊಡನೆ ಹೋರಾಟ ಮಾಡಿ ದೇಶಕ್ಕೆ ಸ್ವಾತಂತ್ರ್ಯವನ್ನು ತಂದಿದ್ದೇವೆ ಎಂದು ತಾವು ಹೆಮ್ಮೆಯಿಂದ ಹೇಳಿಕೊಳ್ಳುವುದಾದರೆ ತಾವು ಈ ಜೈಲಿನ ಪರಿಸ್ಥಿತಿಯನ್ನು ಮೊದಲು ಸುಧಾರಿಸಬೇಕು. ಎಂದು ಹೇಳುತ್ತೇನೆ.

ಪೋಲೀಸ್ ವಿಷಯವಾಗಿ ಒಂದೆರಡು ಮಾತನ್ನು ಹೇಳುತ್ತೇನೆ. ಪೋಲೀಸರು ಎಂದರೆ ನಮ್ಮ ಆಡಳಿತ ಯಾವ ರೀತಿಯಲ್ಲಿದೆ ಎಂಬುದೇ ಅದಕ್ಕೆ ಹಿಡಿದ ಒಂದು ಕನ್ನಡಿ. ಸರ್ಕಾರ ಹೇಗಿದೆ ಎಂಬುದನ್ನು ಪೋಲೀಸರು ಕೆಲಸ ಮಾಡುವುದರಲ್ಲಿ ತೀರ್ಮಾನ ಮಾಡಬಹುದು. ಪುರಂದರದಾಸರ ಪದದಲ್ಲಿ ಒಂದು ಹೇಳಿದ್ದಾರೆ ಕಬ್ಬಿನೊಳು ಸಕ್ಕರೆಯೋ ಸಕ್ಕರೆ ಕಬ್ಬಿನೊಳಗೋ ಎಂದು ನಿಮ್ಮ ಅಡ್ಮಿನ್‌ಸ್ಟ್ರೇಷನ್ ಪೋಲೀಸರೊಳಗೆ, ಪೋಲೀಸರೊಳಗೆ ನಿಮ್ಮ ಅಡ್ಮಿನ್‌ಸ್ಟ್ರೇಷನ್ನೋ ಅಂತ. ಸಬ್‌ಇನ್‌ಸ್ಪೆಕ್ಟರ್‌ರ ಸಂಬಳ ಸಂಪಾದನೆ ಬಹಳವಾಗಿ ಬೆಳೆದಿದೆ. ನಮ್ಮ ಜಿಲ್ಲೆಯಲ್ಲಿ ಒಬ್ಬ ಸಬ್‌ಇನ್‌ಸ್ಪೆಕ್ಟರ್‌ಗೆ ಇರುವ ಆದಾಯ ಹೋಂ ಮಿನಿಸ್ಟರಿಗಿಂತ ಹೆಚ್ಚಿಗೆ ಉಂಟು. ಇಷ್ಟೆಲ್ಲಾ ಲಂಚರುಷುವತ್ತು ಇರಲಿಕ್ಕೆ ಕೂಡದು ಭ್ರಷ್ಟಾಚಾರ ಇರಲಿಕ್ಕೆ ಕೂಡದು. ಈ ರೀತಿಯ ಒಂದು ಲಂಚರುಷುವತ್ತು, ಭ್ರಷ್ಟಾಚಾರ ಇರುವುದನ್ನು ನೋಡಿದರೆ ಸಾಧಾರಣ ಜನತೆಯನ್ನು, ಸನ್‌ಮಾರ್ಗದಲ್ಲಿ ನಡೆಯುತ್ತಾ ಇರತಕ್ಕ ಕಾಮನ್ ಮ್ಯಾನ್‌ನ್ನು ರಕ್ಷಣೆ ಮಾಡುವವರು ಯಾರು ಎಂಬುದು ಈ ಹೊತ್ತು ಇರತಕ್ಕ ಮುಖ್ಯವಾದ ಪ್ರಶ್ನೆ. ಎಲ್ಲರಲ್ಲೂ ಭ್ರಷ್ಟಾಚಾರ ಇರುವಾಗ ಇವರಲ್ಲಿ ಏಕೆ ಕೂಡದು ಇಂಬ ಪ್ರಶ್ನೆ ಇದೆ. ಇದು ಸರಿಯಾದ ಉದಾಹರಣೆ ಅಲ್ಲ. ಇದಕ್ಕೆ ಒಂದು ತರ್ಕ ಉಂಟು. ಅದನ್ನು ಈಗ ಹೇಳಲಿಕ್ಕೆ ಬರುವುದಿಲ್ಲ. ಪೋಲೀಸರು ಈಗ ಕೇಸು ನಡೆಸುವುದನ್ನು ನೋಡುವಾಗ ನಮಗೆ ಗೊತ್ತಾಗುತ್ತದೆ. ನಮ್ಮ ಊರಿನಲ್ಲಿ ಬೂಟ್‌ಲೆಗ್ಗರ್ಸ್ ಕೈಯಲ್ಲಿ ಪೋಲೀಸರು ಇದ್ದಾರೆ ಎಂದು ಹೇಳುತ್ತೇನೆ.

4-00 P.M.

ಈ ಇಂಡಸ್ಟ್ರಿಗಳು ಪೋಲೀಸರನ್ನು ಬೆಂಬಲಿಸುತ್ತಿವೆ, ಇದು ಪರ್ಕಿನ್‌ಸನ್ನನ ಹೊಸ ಲಾ, ಬೇರೆ ಲಾ ಇಲ್ಲ, ಇದು ಸರಕಾರಕ್ಕೆ ಗೊತ್ತಿದೆ. ಆದುದರಿಂದ ಪಾನನಿರೋಧ ತೆಗೆಯುವುದಿಲ್ಲ. ತೆಗೆದರೆ ಪೋಲೀಸರ ಗತಿಯೇನು ? ಹೀಗೆ ವ್ಯವಹಾರ ನಡೆದರೆ ಕಲ್ಕತ್ತ ಕೇರಳಗಳಲ್ಲಿರುವ ವಾತಾವರಣಕ್ಕೆ ನಾವು ಇಲ್ಲೂ ಆಹ್ವಾನ ಕೊಟ್ಟಂತಾಗುತ್ತದೆ. ಹೀಗೆಲ್ಲಾ ಮಾಡುತ್ತಾಹೋದರೆ ಜನರಿಗೆ ದಿಕ್ಕೇ ತೋರದಂತಾಗಿ ತುರ್ತು ಪರಿಸ್ಥಿತಿಯನ್ನು ಹೋಗಲಾಡಿಸಲು, ಇರುವ ಕಷ್ಟಗಳನ್ನು ಪರಿಹಾರ ಮಾಡಲು, ಆಹಾರವನ್ನು ಪಡೆಯಲು, ಸರಕಾರದ ಭ್ರಷ್ಟಾಚಾರವನ್ನು ತೊಡೆದುಹಾಕಲು ಕೇರಳ ಮತ್ತು ಕಲ್ಕತ್ತದಲ್ಲಿರುವ ಪರಿಸ್ಥಿತಿ ಇಲ್ಲೂ ತಲೆದೋರಲು ಅವಕಾಶಮಾಡಿಕೊಡುತ್ತೀರಿ ಎಂಬುದು ನನ್ನ ಅಭಿಪ್ರಾಯ.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ಸ್ವಾಮಿ, ನಮ್ಮ ಮುಂದಿರುವ ಬೇಡಿಕೆಗಳನ್ನು ನಾನು ಅನುಮೋದಿಸುತ್ತೇನೆ. ಇದುವರೆಗೂ ಮಾನ್ಯ ಸದಸ್ಯರು ನಾನಾ ರೀತಿಯಿಂದ ಪೋಲೀಸು

(ಶ್ರೀ ಟಿ. ಡಿ. ದೇವೇಂದ್ರಪ್ಪ)

ಇಲಾಖೆಯ ಬಗ್ಗೆ ಪ್ರಸ್ತಾಪಮಾಡಿದ್ದಾರೆ. ಪೋಲೀಸು ಇಲಾಖೆ ಎಲ್ಲಾ ಇಲಾಖೆಗಳಿಗಿಂತಲೂ ಕೂಡ ಶ್ರೇಷ್ಠವಾದುದು ಹಾಗೂ ದಕ್ಷತೆಯಿಂದಲೂ ಕೂಡಿರುವ ಇಲಾಖೆ. ಈ ಇಲಾಖೆ ಒಂದು ಪಕ್ಷ ಇಲ್ಲದಿದ್ದರೆ ರಾಜ್ಯದಲ್ಲಿ ಇನ್ನೂ ಅನೇಕ ಕಡೆ ಕ್ರಾಂತಿಯಾಗುತ್ತಿತ್ತು. ಈ ಇಲಾಖೆ ಇದ್ದೂ ಕೂಡ ಸಮಾಜದಲ್ಲಿ ವಿಷಬೀಜವನ್ನು ಬಿತ್ತಿ ಜನರನ್ನು ನಾನಾ ರೀತಿಯಲ್ಲಿ ಕ್ರಾಂತಿಕಾರರನ್ನಾಗಿ ಮಾಡಿ ರಾಜ್ಯಕ್ಕೂ ಮತ್ತು ಸರಕಾರಕ್ಕೂ ಕೆಟ್ಟ ಹೆಸರನ್ನು ತರಲು ತೊಡಗಿರುವವರು ಕೆಲವರಿದ್ದಾರೆ, ಅವರಲ್ಲಿ ಕೆಲವರು ವಿದ್ಯಾವಂತರು, ಸಾಮಾನ್ಯ ಜನರು-ಹೀಗೆ ನಾನಾ ರೀತಿಯ ಜನರಿದ್ದಾರೆ. ಸಮಾಜದಲ್ಲಿ ಹೆಚ್ಚು ಲಾಭ ಸಂಪಾದಿಸುತ್ತಿರುವ ಸಮಾಜಘಾತುಕರೂ ಇದ್ದಾರೆ, ದರೋಡೆಕಾರರೂ, ಖೂನಿ ಮಾಡುವವರೂ ಇದ್ದಾರೆ. ಕೆಲವರು ವಿಷಬೀಜ ಬಿತ್ತಿ ಪರಾರಿಯಾಗಿದ್ದಾರೆ. ಪೋಲೀಸು ಇಲಾಖೆ ಅತಿ ಮುಖ್ಯವಾದುದೆಂಬುದನ್ನು ನಾವೆಲ್ಲರೂ ಒಪ್ಪಿಕೊಳ್ಳಬೇಕು. ಆದರೆ ಪೋಲೀಸು ಇಲಾಖೆ ಕೆಟ್ಟುಹೋಗಿದೆ, ಆ ಇಲಾಖೆಯಲ್ಲಿರುವ ಅಧಿಕಾರಿಗಳೆಲ್ಲರೂ ಕೆಟ್ಟಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳುವುದು ಅಷ್ಟು ಸರಿಯಲ್ಲ. ಅನೇಕ ಒಳ್ಳೆಯ ಅಧಿಕಾರಿಗಳೂ ಇದ್ದಾರೆ, ದಕ್ಷರೂ ಇದ್ದಾರೆ, ಪ್ರಾಮಾಣಿಕತೆಯಿಂದ ನಡೆಯುವವರೂ ಇದ್ದಾರೆ. ಅವರೂ ಕೂಡ ದೇಶಾಭಿಮಾನಿಗಳು. ನಮ್ಮ ದೇಶ, ನಮ್ಮ ರಾಜ್ಯ, ನಾವು ಈ ರಾಜ್ಯದಲ್ಲಿ ಹುಟ್ಟಿ ಬೆಳೆದಿರುವಾಗ ನಮ್ಮ ಕರ್ತವ್ಯವನ್ನು ನ್ಯಾಯವಾಗಿ ಮಾಡಬೇಕು ಎಂದರಿತು ಕೆಲಸಮಾಡುವ ಅಧಿಕಾರಿಗಳೂ ಬಹು ಮಂದಿ ಇದ್ದಾರೆ. ತುಂಬಿದ ಹಾಲಿನ ಕೊಡದಲ್ಲಿ ಒಂದು ಹನಿ ನಿಂಬೆಹುಳಿಯನ್ನು ಬಿಟ್ಟು ಇಡೀ ಹಾಲು ಕೆಟ್ಟಿದೆ ಎಂದು ಹೇಳುವುದು ಸರಿಯಲ್ಲ. ನಾವು ಇದನ್ನು ಪರಿಶೀಲಿಸಬೇಕಾಗಿದೆ. ಒಂದು ನಿಂಬೆ ಹುಳಿಯಷ್ಟು ಕೆಟ್ಟ ಜನರಿದ್ದಾರೆ. ಅವರನ್ನು ಪತ್ತೆಮಾಡಿ ತಕ್ಕ ಕ್ರಮ ಅವರಮೇಲೆ ಕೈಕೊಳ್ಳಬೇಕು. ಈ ಖಾತೆ ವಹಿಸಿ ಕೊಂಡಿರುವ ಸಚಿವರು ಬಹಳ ದಕ್ಷರು, ಯಾರ ಮಾತನ್ನೂ ಕೇಳುವವರಲ್ಲ, ಕೆಲವರು ಅವರಿಗೆ ಏನೋ ಹೇಳುವಂತೆ ನನ್ನ ಬಳಿ ಬಂದಾಗ ಅವರಿಗೆ ನನ್ನಹತ್ತಿರ ಬರಬೇಡಿ, ನಾವೇನಾದರೂ ಹೇಳಿದರೆ ತೊಂದರೆಯಾಗುತ್ತದೆ ಎಂದು ಹೇಳಿದೆ. ಅವರು ಯಾರ ಮಾತನ್ನು ಕೇಳದೆ ದಿಟ್ಟತನದಿಂದ, ನ್ಯಾಯದಿಂದ ಕೆಲಸಮಾಡುವವರು. ಕೆಲವು ಅಧಿಕಾರಿಗಳೇನಿದ್ದಾರೆ ಅವರ ಬಗ್ಗೆ ಒಂದು ಸಲಹೆ-ಅದು ಸರಿಯೋ ತಪ್ಪೋ-ಮಾಡಬೇಕೆಂದಿದ್ದೇನೆ. ರಾಜ್ಯ ಮಟ್ಟದಲ್ಲಿ ಶ್ರೇಷ್ಠಮಟ್ಟದ ಒಬ್ಬ ಅಧಿಕಾರಿಯನ್ನು ನೇಮಕಮಾಡಿ ಅವರಿಗೆ ಕಾಕಿಬಟ್ಟೆ ಹಾಕಲು ನಿರ್ಬಂಧಮಾಡಬಾರದು ಅವರು ಯಾವ ಕಡೆ ಯಾವಾಗ ಹೋಗುತ್ತಾರೆಂಬುದು ಯಾರಿಗೂ ಗೊತ್ತಾಗಬಾರದು —ಅವರು ದೇಶದಲ್ಲೆಲ್ಲಾ ಸಂಚಾರ ಮಾಡಿ ಎಲ್ಲಿ ಕಳ್ಳಬಟ್ಟಿ ವ್ಯಾಪಾರ ನಡೆಯುತ್ತಿದೆ ಎಂಬುದನ್ನು ಕಂಡುಹಿಡಿಯುವಂತೆ ತಿಳಿಸಬೆಕು. ದೊಡ್ಡ ಪಟ್ಟಣಗಳಲ್ಲಿ ಅಂಗಡಿಗಳಿವೆ, ಒಬ್ಬ ಅಧಿಕಾರಿ ಹೋಗಿ ನೋಡಿದರೆ ವಾಸ್ತವಾಂಶ ಗೊತ್ತಾಗುತ್ತದೆ. ಹಾಗೆ ಹೋಗಿ ನೋಡಿ ಸಬ್ ಇನ್‌ಸ್ಪೆಕ್ಟರು ಮತ್ತು ಪೋಲೀಸರು ಯಾರು ತಪ್ಪುಮಾಡಿದ್ದಾರೋ ಅವರ ಬಗ್ಗೆ ಶಿಸ್ತಿನ ಕ್ರಮ ತೆಗೆದುಕೊಂಡು ಅವರನ್ನು ಇಲಾಖೆಯಿಂದ ತಪ್ಪಿಸಿ ಒಳ್ಳೆಯ ಕೀರ್ತಿ ಬರುವಂತೆ ಇಲಾಖೆಯನ್ನ ಬೆಳೆಸಬೇಕೆಂದು ಅರಿಕೆಮಾಡಿಕೊಳ್ಳುತ್ತೇನೆ.

ಡಿಫೆನ್ಸ್ ಆಫ್ ಇಂಡಿಯಾ ಕಾಯಿದೆಯನ್ನು ತೆಗೆದುಹಾಕಬೇಕೆಂದು ಹೇಳಿದರು. ಯಾವ ಕಾಯಿದೆಯೇ ಇರಲಿ, ಅದಕ್ಕೇಕೆ ಹೆದರಬೇಕು ! ಸಮಾಜದಲ್ಲಿ ನಾವು ಸರಿಯಾಗಿ ಕೆಲಸಮಾಡುತ್ತಿದ್ದರೆ ಈ ಕಾನೂನು ನಮಗೇನು ಮಾಡಬಲ್ಲದು ? ಇದು ಇರಲೇಬೇಕು. ಏಕೆಂದರೆ ಈಗ ಅಭಾವ ಪರಿಸ್ಥಿತಿ ಇದೆ, ಮಳೆಬೆಳೆ ಇಲ್ಲ, ಈಗ ಆಹಾರದ ಅಭಾವವಿದೆ, ಆಹಾರ ತಂದು ಸರಕಾರ ಒದಗಿಸಿದರೂ ಕೂಡ ಸರಿಯಾಗಿ ಒದಗಿಸದೆ ಹೋದುದರಿಂದ ಜನರು ಸತ್ತರು ಎಂದು ಅಪಪ್ರಚಾರಮಾಡುವ ಜನರು ನಮ್ಮಲ್ಲಿದ್ದಾರೆ. ಹೀಗೆ ನಾನಾ ಬಗೆಯಾಗಿ ಕ್ರಾಂತಿಯನ್ನುಂಟುಮಾಡಿ ವಿಷಬೀಜ ಬಿತ್ತುವ ಜನರು ನಮ್ಮಲ್ಲಿದ್ದಾರೆ. ಆ ದೆಶೆಯಿಂದ ಸಮಾಜ ಘಾತಕರನ್ನು ಮಟ್ಟಹಾಕಿ ಅವರನ್ನು ಜೈಲಿಗೆ ಕಳಿಸಲು ಈ ಕಾಯಿದೆ ಇರಲೇಬೇಕು ಎಂದು ಈ ಸಂದರ್ಭದಲ್ಲಿ ಮಾನ್ಯ ಸರಕಾರಕ್ಕೆ ಸಲಹೆಮಾಡುತ್ತೇನೆ. ಇದರ ಬಗ್ಗೆ ಗಾಬರಿಪಡಬೇಕಾಗಿಲ್ಲ. ಅದೂ ಅಲ್ಲದೆ ಈಗಾಗಲೇ ಅನೇಕ ಸಣ್ಣಪುಟ್ಟ ವಿಚಾರಗಳನ್ನು ತೆಗೆದುಕೊಂಡು ಅಪಪ್ರಚಾರ ಮಾಡುತ್ತಿದ್ದಾರೆ. ಆ ದೆಶೆಯಿಂದ ಇದು ಇರಲೇಬೇಕೆಂದು ನಾನು ಸಲಹೆಮಾಡುತ್ತೇನೆ.

ಸ್ವಾಮಿ, ಇನ್ನು ಜೈಲು ವಿಚಾರದಲ್ಲಿ ಒಂದು ಮಾತು ಹೇಳಿ ನನ್ನ ಮಾತು ಮುಗಿಸುತ್ತೇನೆ. ನನಗೆ ತಿಳಿದಮಟ್ಟಿಗೆ ಹೇಳುವುದಾದರೆ ಕೆಲವರು ಮರ್ಡರ್, ಕಳ್ಳಭಟ್ಟಿ ಸರಾಯಿ ಮಾಡಿದ ತಪ್ಪಿಗಾಗಿ ಜೈಲುಗಳಿಗೆ ಹೋಗಿ ಬಂದಿದ್ದಾರೆ. ಅವರು ಹೇಳುವುದು ಏನೆಂದರೆ, ನಾವು ಏನೂ ಮಾಡುವುದು ಬೇಡ, ಜೈಲಿಗೆ ಹೋದರೆ ಸಾಕು, ಜೈಲಿನಲ್ಲಿ ಫಸ್ಟ್ ಕ್ಲಾಸ್ ಊಟ ಕೊಡುತ್ತಾರೆ, ಫಸ್ಟ್ ಕ್ಲಾಸ್ ತರಕಾರಿ ಜೊತೆಗೆ ಅನ್ನ ಕೊಡುತ್ತಾರೆ ಸುಖವಾಗಿ ಊಟ ಮಾಡುವುದಕ್ಕೆ ನಾವು ರೆಡಿಯಾಗಿದ್ದೇವೆ, ಅಲ್ಲಿ ಬಹಳ ಚೆನ್ನಾಗಿ ಇದೆ ಎಂದು ಹೇಳುತ್ತಾರೆ. ಜೈಲಿನಲ್ಲಿ ಇರಬೇಕಾದ ಇದು ಒಂದು ಸರಿಯಾದ

ವ್ಯವಸ್ಥೆ ಅಲ್ಲ. ಇದನ್ನು ಯಾರೂ ಒಪ್ಪತಕ್ಕ ಮಾತಲ್ಲ. ನಮ್ಮ ಊರಿನವರು ಒಬ್ಬನು ಜೈಲಿಗೆ ಹೋಗಿ ಬಂದವನಿಂದ ಇದನ್ನು ಕೇಳಿದ್ದೇನೆ. ಜೈಲಿನಲ್ಲಿ ಸುಖ ಜೀವನ ನಡೆಸುವುದು, ಶ್ರೇಷ್ಠ ಊಟ ಕೊಡತಕ್ಕಂಥಾದ್ದು ಸರಿಯಲ್ಲ. ಬುದ್ಧಿ ಇರುವುದಿಲ್ಲ ಎಂದು ತಪ್ಪು ಮಾಡುತ್ತಾನೆ ಮತ್ತು ಜೈಲಿಗೆ ಹೋಗುತ್ತಾನೆ. ತಪ್ಪು ಮಾಡಿದವನು ಮುಂದೆ ಅಂಥ ತಪ್ಪು ಮಾಡದ ಹಾಗೆ ಬುದ್ಧಿ ಕಲಿಯಬೇಕು. ಅವನಿಗೆ ಜ್ಞಾನ ಬರಬೇಕು. ಆದುದರಿಂದ ಸ್ವಲ್ಪಮಟ್ಟಿಗೆ ಊಟ ಕೊಡಬೇಕು. ತಪ್ಪು ಮಾಡಿದವನು ಸುಧಾರಿಸಬೇಕು. ಅಂದರೆ ಸರಕಾರಕ್ಕೆ ಒಳ್ಳೇ ಹೆಸರು ಬರುತ್ತದೆ. ಅಧಿಕಾರಿಗಳು ಇಲಾಖೆಗೆ ಒಳ್ಳೆ ಹೆಸರು ತರುತ್ತಾರೆ ಎಂದು ನಂಬಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತು ಮುಗಿಸುತ್ತೇನೆ.

† ಶ್ರೀಮತಿ ನಾಗಮ್ಮ (ಕಲಮಲ).—ಸ್ವಾಮಿ, ಈಗ ಸಭೆಯ ಮುಂದೆ ಇರತಕ್ಕ ಬೇಡಿಕೆಗಳನ್ನು ನಾನು ಅನುಮೋದಿಸುತ್ತೇನೆ. ಗುಲಬರ್ಗದಲ್ಲಿ ಒಂದು ಸೆಂಟ್ರಲ್ ಜೇಲು ಇದೆ. ಅಲ್ಲಿ ಒಂದು ಸಬ್ ಜೈಲು ಕಟ್ಟುವುದಕ್ಕಾಗಿ 4 ಲಕ್ಷ ರೂಪಾಯಿ ಈ ಸಾರಿ ಬಜೆಟ್ಟಿನಲ್ಲಿ ಒದಗಿಸಿದ್ದೀರಿ. ಇದನ್ನು ನಾನು ಸ್ವಾಗತಿಸುತ್ತೇನೆ. ಗುಲಬರ್ಗ ಜೈಲಿನಲ್ಲಿ ತಯಾರಾಗುವ ಜಮಖಾನೆಗಳು, ಚಾದರುಗಳು ಬಹಳ ಚೆನ್ನಾಗಿರುತ್ತವೆ ಎಂಬುದು ಎಲ್ಲರಿಗೂ ಗೊತ್ತಿದೆ. ಅವುಗಳಿಗೆ ಬೇಡಿಕೆ ಬಹಳ ಇದೆ. ಇಂಥ ಸಾಮಾನುಗಳು ಅಲ್ಲಿ ಬಹಳ ದಿನದಿಂದ ತಯಾರಾಗುತ್ತಿವೆ.

ಇನ್ನು ಪೊಲೀಸ್ ಡಿಪಾರ್ಟ್‌ಮೆಂಟ್ ವಿಷಯ ಹೇಳಬೇಕಾದರೆ, ಎಲ್ಲ ಕ್ಷೇತ್ರಗಳಲ್ಲಿ ನಮಗೆ ಪೋಲೀಸರ ಸಹಾಯ ಬೇಕಾಗುತ್ತದೆ. ಅವರು ಜನರಿಗೆ ಸಹಾಯಕರಾಗಿ ಕಾಯಿದೆಗೆ ಹೊಂದಿಕೊಂಡು ಜನರಿಗೆ ಹೆಚ್ಚು ಕಷ್ಟ ಕೊಡದೆ ತಮ್ಮ ಕರ್ತವ್ಯ ಅವರು ಮಾಡಬೇಕು. ಸ್ವಾಮಿ, 15-20 ವರ್ಷ ಜೈಲಿನಲ್ಲಿ ಇದ್ದಂಥ ಕೈದಿಗಳನ್ನು ಬಿಡುಗಡೆ ಮಾಡಬೇಕು ಎಂದು ನಾನು ಸರಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಅಂಥ ಕೈದಿಗಳು ಜೈಲಿನಲ್ಲಿ ಬೇಕಾದಷ್ಟು ಕಷ್ಟ ಅನುಭವಿಸಿರುತ್ತಾರೆ. ಅವರು ಹೊರಗೆ ಬಂದ ಮೇಲೆ ಸಹ ಅವರಿಗೆ ಕಷ್ಟ ಇರುತ್ತದೆ. ಬಹು ಕಾಲ ಜೈಲಿನಲ್ಲಿದ್ದ ಕೈದಿಗಳನ್ನು ಆಂಧ್ರ ದೇಶದಲ್ಲಿ ಬಿಟ್ಟುಬಿಟ್ಟಿದ್ದಾರೆ. ಅದೇ ರೀತಿಯಾಗಿ ನಮ್ಮ ರಾಜ್ಯದಲ್ಲೂ ಅಂಥವರನ್ನು ಬಿಡಬೇಕು ಎಂದು ಕೇಳುತ್ತೇನೆ.

ಪೋಲೀಸು ಅಧಿಕಾರಿಗಳ ಬಗ್ಗೆ ಕೆಲವು ಸದಸ್ಯರು ಟೀಕೆ ಮಾಡಿದರು. ಆದರೆ ನಮ್ಮ ರಾಯಚೂರು ಡಿಸ್ಟ್ರಿಕ್ಟ್‌ನಲ್ಲಿ ಮಾತ್ರ ಪೋಲೀಸು ಡಿಪಾರ್ಟ್‌ಮೆಂಟಿನವರು ಸಾಕಷ್ಟು ದಕ್ಷತೆಯಿಂದ ಕೆಲಸ ನಡೆಸುತ್ತಿದ್ದಾರೆ. ಕೆಲವು ಕಡೆ ಪೋಲೀಸರು ಹಿಂದೆ ಉಳಿದಿರಬಹುದು. ಅವರೂ ಸಹ ತಮ್ಮ ಕರ್ತವ್ಯವನ್ನು ಪೂರ್ಣವಾಗಿ ಮಾಡಿ ಮುಂದುವರಿಯಬೇಕು. ಹಳ್ಳಿಗಳಲ್ಲಿ ಪೋಲೀಸರಿಗೆ ಇರುವುದಕ್ಕೆ ಮನೆ ಇರುವುದಿಲ್ಲ. ಇದರಿಂದ ಅವರಿಗೆ ಬೇಕಾದಷ್ಟು ತೊಂದರೆಯಾಗುತ್ತದೆ. ಆದುದರಿಂದ ಜವಾನರಿಗೆ ಮನೆಗಳನ್ನು ಶೀಘ್ರವಾಗಿ ಒದಗಿಸಬೇಕು ಎಂದು ಹೇಳುತ್ತೇನೆ. ಸ್ವಾಮಿ, ನಮ್ಮ ರಾಯಚೂರು ಡಿಸ್ಟ್ರಿಕ್ಟ್‌ನಲ್ಲಿ ಪೋಲೀಸ್ ಡಿಪಾರ್ಟ್‌ಮೆಂಟ್ ಬಗ್ಗೆ ಹಿಂದೆ ನಿಂದೆ ಮಾಡುತ್ತಾರೆ. ಪೋಲೀಸ್ ಡಿಪಾರ್ಟ್‌ಮೆಂಟ್ ಅವರಿಗೆ ತೊಂದರೆ ಕೊಟ್ಟು ಮಾತನಾಡಿದರೆ ನನ್ನ ಮನಸ್ಸು ಒಪ್ಪುವುದಿಲ್ಲ. ಶ್ರೀ ಅಗ್ನಿಹೋತ್ರಿಯವರು ಹೇಳಿದ್ದನ್ನು ಕೇಳಿ ನನಗೆ ಬಹಳ ಸಂತೋಷವಾಯಿತು. ಅವರೂ ನಮ್ಮ ಹಾಗೆ ಇರುತ್ತಾರೆ. ಕೆಲವರು ಚನ್ನಾಗಿ ಕೆಲಸ ಮಾಡುತ್ತಾರೆ. ಜನ ತಪ್ಪು ಮಾಡಿದರೆ ಪೋಲೀಸ್ ಡಿಪಾರ್ಟ್‌ಮೆಂಟು ಇರಬೇಕಾಗುತ್ತದೆ. ನಮ್ಮ ರಾಯಚೂರು ಎಸ್.ಪಿ. ಬಹಳ ಚೆನ್ನಾಗಿ ಕೆಲಸ ಮಾಡುತ್ತಾ ಇದ್ದಾರೆ. ಪೋಲೀಸರ ಮಕ್ಕಳಿಗಾಗಿ ಒಂದು ಸ್ಕೂಲ್ ಮಾಡಿದ್ದಾರೆ, ಪೋಲೀಸು ಕ್ವಾರ್ಟರ್ಸ್ ಮಾಡಿದ್ದಾರೆ. ಅವರು ಮಕ್ಕಳನ್ನು ಎಷ್ಟು ಚೆನ್ನಾಗಿ ನೋಡಿಕೊಳ್ಳುತ್ತಾರೆ ಎಂಬುದನ್ನು ನೋಡಿದರೆ ಸಂತೋಷವಾಗುತ್ತದೆ. ಯಾರಾದರೂ ಅವರ ಮೇಲೆ ನಿಂದೆ ಮಾಡಿದರೆ ಆ ತಪ್ಪಿಗೆ ಅವರಿಗೆ ಶಿಕ್ಷೆ ಮಾಡಬೇಕು. ಒಟ್ಟಿನಲ್ಲಿ ಹೇಳುವುದಾದರೆ, ನಮ್ಮ ರಾಯಚೂರು ಡಿಸ್ಟ್ರಿಕ್ಟ್‌ನಲ್ಲಿ ಬಹಳ ಚನ್ನಾಗಿ ಕೆಲಸ ಮಾಡುತ್ತಿದ್ದಾರೆ. ಬೆಂಗಳೂರು ಜೈಲು ಸೂಪರಿಂಟೆಂಡೆಂಟ್ ಅವರು ರಾಯಚೂರ್ ಡಿಸ್ಟ್ರಿಕ್ಟಿಗೆ ಭೇಟಿ ಕೊಟ್ಟಾಗ್ಗೆ ಅಲ್ಲಿ ತಯಾರಾಗುವ ಜಮಖಾನೆ ನೋಡಿ ಸಂತೋಷಪಟ್ಟರು. ಈ ಜಮಖಾನೆ ತಯಾರಿಕೆಯಿಂದ ಸರಕಾರಕ್ಕೆ ಸಾಕಷ್ಟು ಹಣ ಉತ್ಪತ್ತಿ ದೊರೆಯುತ್ತಿದೆ. ಕೊನೆಯದಾಗಿ ಸಭೆಯ ಮುಂದೆ ಇರತಕ್ಕ ಬೇಡಿಕೆಗಳನ್ನು ಅನುಮೋದಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸುತ್ತೇನೆ.

ಶ್ರೀಮತಿ ರತ್ನಮ್ಮ ಮಾಧವರಾವ್ (ಶಿವಮೊಗ್ಗ).—ಸ್ವಾಮಿ, ಈ ಸಭೆಯ ಮುಂದೆ ಬಂದಿರುವ ಈ ಎಲ್ಲಾ ಬೇಡಿಕೆಗಳನ್ನು ಅನುಮೋದಿಸುತ್ತಾ ಒಂದೆರಡು ಮಾತುಗಳನ್ನು ಆಡಬೇಕೆಂದು ನಿಂತಿದ್ದೇನೆ. ಕೆಲವು ವಿರೋಧ ಪಕ್ಷದ ಸದಸ್ಯರು ಈ ಬಂದಿಖಾನೆ ವಿಷಯದಲ್ಲಿ ಮಾತನಾಡುತ್ತಾ ಬಹಳವಾಗಿ ಹೇಳಿದರು. ಕೆಲವು ಸದಸ್ಯರು ಕಟ್ ಮೋಷನ್ ಸೂಚನೆಗಳನ್ನು ತಂದಿದ್ದಾರೆ. ಅವುಗಳಲ್ಲಿ ಒಂದೊಂದನ್ನು ಓದಿನೋಡಿದೆ. ಅದರಲ್ಲಿ ಎಲ್ಲವೂ ಮೊದಲೇ ಜಾರಿಗೆ ಬಂದಿವೆ. ಅವರು

(ಶ್ರೀಮತಿ ರತ್ನಮ್ಮ ಮಾಧವರಾವ್)

ಜೈಲುಗಳಿಗೆ ಹೋಗಿ ನೋಡಿದರೆ ಯಾರಿಗೆ ಬಂದಿರುವುದು ಗೊತ್ತಾಗುತ್ತದೆ. ಖೈದಿಗಳು ತುಂಬಾ ಸುಖವಾಗಿ ಇದ್ದಾರೆ. ಆಟಪಾಟಗಳನ್ನು ಮಾಡಿ ನಾಟಕಗಳನ್ನು ಆಡಿ ಯುದ್ಧ ನಿಧಿಗೆ ಸಹಾಯ ಧನವನ್ನು ಕೊಟ್ಟಿದ್ದಾರೆ. ಒಳ್ಳೆಯ ನೀತಿ ನಡತೆಯನ್ನು ಕಲಿಯುತ್ತಿದ್ದಾರೆ. ಜೈಲಿನಿಂದ ಹೊರಗೆ ಬಂದಮೇಲೆ ಜೈಲಿನಲ್ಲಿ ಏನು ಕೈಗಾರಿಕೆಗಳನ್ನು ಕಲಿತಿರುತ್ತಾರೋ ಅದನ್ನು ಮಾಡಿಕೊಂಡು ಜೀವನ ಮಾಡಿಕೊಂಡು ಸುಸಂಸ್ಕೃತರಾಗಿರುವುದನ್ನು ನಾನು ನೋಡಿದ್ದೇನೆ. ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಮಾತನಾಡುತ್ತಾ ಅವರ ಅನುಭವಗಳನ್ನು ತುಂಬಾ ಹೇಳಿದರು. ಅದನ್ನು ಕೇಳಿ ನನಗೆ ಬಹಳ ಆಶ್ಚರ್ಯವಾಯಿತು. ಅದನ್ನು ಕೇಳುವಾಗ ಗೃಹಮಂತ್ರಿಗಳು ಒಮ್ಮೆ ಒಂದು ಸರ್‌ಪ್ರೈಸ್ ವಿಸಿಟ್ ಕೊಟ್ಟರೆ ಅವರು ಹೇಳಿದ್ದು ಎಷ್ಟು ನಿಜ ಎಂಬುದು ಗೊತ್ತಾಗುತ್ತದೆ.

ಇನ್ನು ಪೋಲೀಸ್ ಖಾತೆ ಬಗ್ಗೆ ಒಂದೆರಡು ವಿಷಯಗಳನ್ನು ಹೇಳುತ್ತೇನೆ. ಈ ಪೋಲೀಸ್ ಖಾತೆಯಲ್ಲಿ ಸ್ವಲ್ಪಮಟ್ಟಿಗೆ ಪ್ರಾಮಾಣಿಕತೆಯ ದಕ್ಷತೆಯ ಅಭಾವ ಇದೆ ಎನ್ನುವುದು ನಿಜ. ಆದರೆ ಅದು ಏನು ಕೊಂಡುಕೊಳ್ಳುವುದಕ್ಕೆ ಬರುತ್ತದೆಯೇ? ಅಥವಾ ನಾವು ಕೊಡುವುದಕ್ಕೆ ಬರುತ್ತದೆಯೇ? ಯಾವುದೂ ಇಲ್ಲ. ಅದು ತಾನಾಗಿಯೇ ಬರಬೇಕು. ಅವರಾಗಿಯೇ ತಿಳಿಯಬೇಕು. ನಾವು ಜವಾಬ್ದಾರಿ ಸ್ಥಾನದಲ್ಲಿದ್ದೇವೆ, ನಮ್ಮ ಕೆಲಸವನ್ನು ನಾವು ನಿರ್ವಂಚನೆಯಿಂದ ಮಾಡಬೇಕು, ನಾವು ದೇಶದ ರಕ್ಷಣಾ ಶಾಖೆಯಲ್ಲಿರುವವರು ದೇಶ ರಕ್ಷಣೆಯ ಜವಾಬ್ದಾರಿ ನಮ್ಮದು ನಾವು ಭಕ್ಷಣಾ ಶಾಖೆಯಲ್ಲಿಲ್ಲವೆಂಬುದನ್ನು ಅರಿಯಬೇಕು. ಅವರು ಪ್ರಾಮಾಣಿಕರಾದ ಹೊರತು ನಮ್ಮ ದೇಶದ ರಕ್ಷಣೆಯಾಗುವುದಿಲ್ಲ. ಸರ್ಕಾರದವರು ಸಹ ಅವರ ಕುಂದುಕೊರತೆಗಳೇನಾದರೂ ಇದ್ದರೆ ವಿಚಾರಿಸಿ ನಿವಾರಿಸಬೇಕು. ಅದನ್ನು ನಿವಾರಿಸಿ ಅವರಲ್ಲಿ ದಕ್ಷತೆ ಹೆಚ್ಚುವಂತೆ ಆಗಲ ನಿರ್ವಂಚನೆಯಿಂದ ಕೆಲಸಮಾಡುವಂತಾಗಲಿ. ಮೊನ್ನೆ ಬೆಂಗಳೂರಿನ ಜೈಲಿನಿಂದ ಕೆಲವು ಖೈದಿಗಳು ಕದ್ದು ಓಡಿಹೋದರು, ಇದಕ್ಕೆ ಪೋಲೀಸರ ಸಹಕಾರವಿತ್ತು ಎಂದು ಜನತೆ ಸಂಶಯಪಡುತ್ತಿದ್ದಾರೆ. ಅಲ್ಲದೆ ಈ ಪೋಲೀಸರು ಲಂಚಕ್ಕೆ ಕೈಯೊಡ್ಡುತ್ತಾರೆ ಎಂದು ಹೇಳಿದರು. ಇದಕ್ಕೆ ಕಾರಣ ಈಗ ಇರುವ ಆಹಾರದ ಅಭಾವ, ಅವರಿಗಿರುವ ಬಡತನ, ಅವರಿಗೆ ಬರುವ ಸ್ವಲ್ಪ ಸಂಬಳ, ಅಲ್ಲದೆ ಬಡವರಿಗೆ ಮಕ್ಕಳು ಜಾಸ್ತಿ, ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆ ಇರುವುದು. ಆದ್ದರಿಂದ ಇವರಿಗೆ ಸಾಕಷ್ಟು ಸಂಬಳ ಜಾಸ್ತಿ ಮಾಡುವುದು ಒಳ್ಳೆಯದು ಎಂದು ನಾನು ಸಲಹೆ ಮಾಡುತ್ತೇನೆ. ಇನ್ನೂ ಹೆಚ್ಚಿಗೆ ಸೌಕರ್ಯ ಕೊಡುವುದಿದ್ದರೆ ಕೊಡಬಹುದು. ಅವರಿಗೆ ಏನು ಜಾಸ್ತಿ ಕೊಡುವುದು ಬೇಡ ಕೊಟ್ಟಿರುವುದರಿಂದಲೇ ಈರೀತಿಯಾಗಿದ್ದಾರೆ ಎಂದು ಕೆಲವರು ಹೇಳಿದರು, ಆದರೆ ನನಗೆ ಹಾಗೆ ಅನ್ನಿಸುವುದಿಲ್ಲ.

ಆಹಾರ ಅಭಾವ ಕಾಲದಲ್ಲಿ ಆಹಾರ ಧಾನ್ಯಗಳು ಹೊರಗಡೆ ಹೋಗದ ಹಾಗೆ ಚೆಕ್ ಪೋಸ್ಟ್‌ಗಳನ್ನು ಇಟ್ಟಿದ್ದರೂ ಸಹ ಆಹಾರ ಧಾನ್ಯಗಳು ಹೊರಗಡೆಗೆ ಹೋಗುತ್ತಿದೆ. ಇದಕ್ಕೆ ಕಾರಣಗಳನ್ನು ಕೆಲವರು ಹೇಳಿದರು, ಚೆಕ್ ಪೋಸ್ಟ್ ಇರುವ ಕಡೆಗಳಲ್ಲಿ ಪೋಲೀಸಿನವರು ಇರುವುದಕ್ಕೆ ಜಾಗವಿಲ್ಲದೆ ಮರದ ಕೆಳಗೆ ನಿಂತುಕೊಂಡಿರುತ್ತಾರೆಂದು ತಿಳಿದುಬಂದಿದೆ. ಇವರಿಂದ ಹೆಚ್ಚಿನ ಪ್ರಯೋಜನ ಪಡೆಯಬೇಕಾದರೆ ಹಂಗಾಮಿ ಷೆಡ್‌ಗಳನ್ನಾದರೂ ಹಾಕಿಕೊಡಬೇಕು. ಈ ರೀತಿ ಅನುಕೂಲ ಮಾಡಿಕೊಟ್ಟರೆ ದಕ್ಷತೆಯಿಂದ ಕಾಯುತ್ತಾರೆ. ಭಾರತ ರಕ್ಷಣಾ ಕಾನೂನಿನ ವಿಷಯವಾಗಿ ಕೆಲವರು ಹೇಳಿದರು. ಅದು ಹಾಗೆಯೇ ಇರುವುದು ಒಳ್ಳೆಯದು. ಏಕೆಂದರೆ ಕೆಲವು ಕಡೆ ಹಾವಳಿಗಳು ನಿಂತಿದೆ, ಇನ್ನೂ ಹಾವಳಿಗಳು ನಿಲ್ಲುತ್ತವೆ.

ಹೋಂ ಗಾರ್ಡ್ಸ್ ಶಿಕ್ಷಣ ಎಲ್ಲಾ ತಾಲ್ಲೂಕಿನ ಮಟ್ಟದಲ್ಲೂ ಹೆಚ್ಚು ಮಾಡಬೇಕು. ಹೆಣ್ಣು ಮಕ್ಕಳು ಕೆಲವರು ತಪ್ಪುಮಾಡಿ ಜೈಲಿನಲ್ಲಿದ್ದರೆ ಅವರನ್ನು ನೋಡಿಕೊಳ್ಳಲು ಹೆಣ್ಣುಮಕ್ಕಳನ್ನೇ ನೋಡಿಕೊಳ್ಳಲು ನೇಮಿಸಿ. ಸಾಮಾನ್ಯವಾಗಿ ಹೆಣ್ಣುಮಕ್ಕಳು ತಪ್ಪುಮಾಡುವುದಿಲ್ಲ. ಪೋಲೀಸಿನವರಿಗೆ ಮನೆಯ ಅವಕಾಶ ಮಾಡಿಕೊಡುವುದಕ್ಕೆ ಕೆಲವು ಕಡೆ ಕಟ್ಟುತ್ತಿದ್ದೀರಿ, ಎಲ್ಲಾ ಕಡೆಗಳಲ್ಲೂ ಕಟ್ಟಿಸುವ ಏರ್ಪಾಡು ಮಾಡಬೇಕು.

ಇನ್ನು ಪಾನನಿರೋಧದ ಬಗ್ಗೆ ಒಂದು ಪ್ರತ್ಯೇಕವಾದ ಪೋಲೀಸ್ ಖಾತೆ ಇಟ್ಟರೆ ಬಹಳ ಒಳ್ಳೆಯದೆಂದು ನನ್ನ ಸಲಹೆ. ನನ್ನ ಮಾನ್ಯ ಸೋದರಿ ಹೇಳುತ್ತಿದ್ದರು, ನಮ್ಮ ಬೆಂಗಳೂರು ಸೆಂಟ್ರಲ್ ಜೈಲ್‌ನಲ್ಲಿ ಅಂಡರ್‌ಗ್ರೌಂಡ್ ಡ್ರೈನೇಜ್ ಸಿಸ್ಟಮ್ ಮಾಡಿದರೆ ಒಳ್ಳೆಯದು. ಅಲ್ಲಿನ ಸುತ್ತಮುತ್ತಲಿನ ಜನತೆಗೂ ಅನುಕೂಲವಾಗುತ್ತೆ. ಕಾಕಿಬಟ್ಟೆಗೆ ಹೆದರುವ ಕಾಲ ಹೊರಟುಹೋಗಿದೆ. ಮೀಸೆಗಾದರೂ ಹೆದರಲಿ. ಮೀಸೆ ಬಿಟ್ಟರೆ ಅಲೋಯನ್ಸ್ ಕೊಡುತ್ತಾರೆಂತ ತಿಳಿದೆ. ಹಾಗಿದ್ದಲ್ಲಿ ಹೆಚ್ಚಾಗಿ ಅಲೋಯನ್ಸ್ ಕೊಡಿ, ಮೀಸೆ ಬಿಡುವಂತಾಗಲಿ.

ಕೊನೆಯದಾಗಿ, ಬರೀ ಪೋಲೀಸಿನವರು ಎಲ್ಲಾ ಸಾಧಿಸುತ್ತಾರೆ ಎಂದರೆ ಆಗುವುದಿಲ್ಲ. ಸಾರ್ವಜನಿಕರು ಅವರ ಜೊತೆ ಸಹಕರಿಸಬೇಕು. ಆಗಲೇ ದೇಶರಕ್ಷಣೆ ಸಾಧ್ಯ. ಇಷ್ಟು ಹೇಳಿ ಈ ಡಿಮ್ಯಾಂಡ್‌ಗಳನ್ನು ಅನುಮೋದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಸ್ವಾಮಿ, ಈ ಸಭೆಯ ಮುಂದಿರುವ ಪೋಲಿಸ್. ಜೈಲು ಮತ್ತು ಇತರ ಬೇಡಿಕೆಗಳನ್ನು ವಿರೋಧಿಸುತ್ತಾ ಒಂದೆರಡು ಮಾತುಗಳನ್ನು ಹೇಳಬೇಕೆಂದು ಇಷ್ಟಪಡುತ್ತೇನೆ. ಈ ಸಭೆಯಲ್ಲಿ ಇದಕ್ಕಿಂತ ಮೊದಲು ಮಾತನಾಡಿದಂಥ ಶ್ರೀಮಾನ್ ಅಗ್ನಿಹೋತ್ರಿ ಮತ್ತು ಶ್ರೀಮಾನ್ ದೇವೇಂದ್ರಪ್ಪನವರುಗಳ ಭಾಷಣವನ್ನು ಕೇಳಿದಮೇಲೆ ನನಗಾದರೂ ವ್ಯಥೆಯಾಗುತ್ತದೆ. ಏಕೆಂದರೆ ಅವರ ಭಾಷಣ ಕೇಳಿದಮೇಲೆ ನನಗೆ ಕೆಲವು ವರ್ಷಗಳ ಹಿಂದಿನ ಹಿಟ್ಲರ್ ನಾಜೀ ಪಕ್ಷದ ಬೆಂಬಲಿಗರ ಭಾಷಣ ಜ್ಞಾಪಕಕ್ಕೆ ಬರುತ್ತದೆ. ನಮ್ಮ ಗೃಹಮಂತ್ರಿಗಳು ಕೂಡ ನಮ್ಮ ಜೈಲುಗಳಲ್ಲಿ ಎಲ್ಲಾ ಸರಿಯಾಗಿದೆ, ಅಥವಾ ನಮ್ಮ ಪೋಲಿಸರೆಲ್ಲಾ ಸತ್ಯಹರಿಶ್ಚಂದ್ರರಾಗಿದ್ದಾರೆ ಎಂದು ಭಾಷಿಸಿದ್ದಾರೆ. ಮಾನ್ಯಸದಸ್ಯರುಗಳು ಕೆಲವರು ಪ್ರಜಾಪ್ರಭುತ್ವದ ಹೆಸರಿನಲ್ಲಿ ಈ ದಿವಸ ರಾಜಕೀಯ ನಡೆಸುವುದಕ್ಕೆ ಹೊರಟಿದ್ದಾರೆ. ಡಿಫೆನ್ಸ್ ಆಫ್ ಇಂಡಿಯಾ ರೂಲ್ಸ್ ಏನು ಇದೆ, ತುರ್ತುಪರಿಸ್ಥಿತಿಯ ನೆಪದಲ್ಲಿ ಏನೂ ತಪ್ಪಿಲ್ಲದ ಜನಗಳನ್ನು ಜೈಲಿನಲ್ಲಿಟ್ಟು ನಾವು ಮಾಡಿರುವುದು ಸರಿ ಎಂದು ಹೇಳುವುದನ್ನು ನೋಡಿದರೆ ವ್ಯಥೆಯಾಗುತ್ತದೆ. ಗೃಹಮಂತ್ರಿಗಳಿಗೆ ಮತ್ತು ಈ ಹಿಂದೆ ಮಾತನಾಡಿದ ಸ್ನೆಹಿತರಿಗೆ ಹೇಳಬಯಸುತ್ತೇನೆ, ತಪ್ಪು ಇಲ್ಲದ ಜನಗಳನ್ನು ಜೈಲಿನಲ್ಲಿಡುವುದರಿಂದ, ಕೆಲವು ರಾಜಕೀಯದ ಅಭಿಪ್ರಾಯದ ವ್ಯತ್ಯಾಸಗಳಿಂದ ಅವರನ್ನು ಜೈಲ್ಲಿಡುವುದರಿಂದ, ತಮ್ಮ ಒಂದು ರಾಜಕೀಯ ಹೆಚ್ಚಾಗುತ್ತದೆ ಎಂದು ತಿಳಿದುಕೊಂಡಿದ್ದರೆ ಅದು ತಪ್ಪು ಎಂದು ಹೇಳುತ್ತೇನೆ. ಅದಕ್ಕೆ ಒಂದು ಉದಾಹರಣೆ ಹೇಳಬೇಕು ಎಂದರೆ ಹಿಂದೆ ನಮ್ಮ ರಾಷ್ಟ್ರದ ಅನೇಕ ನಾಯಕರುಗಳೆಲ್ಲಾ ಎಷ್ಟೋ ವರ್ಷಗಳವರೆಗೆ ಜೈಲಿನಲ್ಲಿದ್ದರು. ಜೈಲಿನಲ್ಲಿದ್ದಮಾತ್ರಕ್ಕೇ ಅವರ ಪ್ರಜಾಪ್ರಭುತ್ವವೇನು ಕಡಿಮೆಯಾಗಲಿಲ್ಲ; ಬ್ರಿಟಿಷರಿಗೂ ಅದ್ದರಿಂದ ಲಾಭವಾಗಲಿಲ್ಲ. ಅವರ ಬಗ್ಗೆ ಜನಗಳಲ್ಲಿ ವಿಶ್ವಾಸ ಹೆಚ್ಚಾಯಿತು. ಇವತ್ತಿನದಿವಸ ಪಾರ್ಲಿಮೆಂಟ್‌ನಲ್ಲಿ ನಮ್ಮ ಪ್ರಧಾನಮಂತ್ರಿಗಳು ತಿಳಿಸಿರುವಂತೆ ಡಿಫೆನ್ಸ್ ಆಫ್ ಇಂಡಿಯಾ ಕಾನೂನನ್ನು ಬಹಳ ಚೆನ್ನಾಗಿ ಯೋಚನೆ ಮಾಡಿ ನೋಡಬೇಕು. ಕೆಲವು ಕಡೆ ಇದು ಕೆಟ್ಟ ರೀತಿಯಲ್ಲಿ ಉಪಯೋಗವಾಗಿದೆ ಎಂದು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಈ ಒಂದು ಹಿನ್ನೆಲೆಯಲ್ಲಿ ಕೆಲವು ಮಾನ್ಯಸದಸ್ಯರ ಭಾಷಣ ಕೇಳಿ ನನಗಾದರೂ ಅನ್ನಿಸುತ್ತದೆ, ಅದರಲ್ಲೂ ಮೈಸೂರಿನ ಈಗಿನ ಪರಿಸ್ಥಿತಿಯನ್ನು ನೋಡಿದರೆ, ನನ್ನ ಸ್ನೇಹಿತರಾದ ಶ್ರೀ ಮಾನ್ ಕೃಷ್ಣಶೆಟ್ಟಿಯವರು ತಿಳಿಸಿದಹಾಗೆ, ಮದ್ರಾಸ್ ಮತ್ತು ಕೇರಳಗಳಲ್ಲಿರುವಂತೆ ಮೈಸೂರಿನ ಜನತೆಯಲ್ಲಿ ಸಂಘಟನೆ, ರೈತರಲ್ಲಿ ಸಂಘಟನೆ, ಕೂಲಿಗಾರರಲ್ಲಿ ಸಂಘಟನೆ ಇಲ್ಲವೆಂದು. ಈ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ತಮಗೆ ಆಗದವರನ್ನು ಏನೋ ಗಲಾಟೆ ಮಾಡಿದರು ಎಂದು ಜೈಲಿನಲ್ಲಿಡುವುದು, ಕಾರ್ಪೊರೇಷನ್ ಎಲೆಕ್ಷನ್‌ನಲ್ಲಿ ಕಾಂಗ್ರೆಸ್ ಪಾರ್ಟಿಗೆ ಓಟು ಕೊಡುವುದಿಲ್ಲವೆಂದು ಜೈಲಿನಲ್ಲಿಡುವುದು, ಅದು ಗಾಂಧಿ ಶಿಷ್ಯರಾದ ಇವರು ಪ್ರಜಾಪ್ರಭುತ್ವಕ್ಕೆ ವಿರುದ್ಧವಾದ ನೀತಿಯನ್ನು ಅನುಸರಿಸುವುದು ಸರಿಯೇ ಎಂದು ಅವರೇ ವಿಮರ್ಶೆ ಮಾಡಿಕೊಂಡು ನೋಡಬೇಕು ಎಂದು ಗೃಹಮಂತ್ರಿಗಳಿಗೆ ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಇದುವರೆಗೂ ಏನು ಹೇಳುತ್ತಿದ್ದರು ಎಂದರೆ ಈ ತುರ್ತುಪರಿಸ್ಥಿಯಲ್ಲಿ ಭಾರತ ಸರ್ಕಾರದ ಒಂದು ಆದೇಶದ ಮೇಲೆ ಕೆಲವೊಂದು ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ ಎಂದು. ಈ ಒಂದು ನೆಪದಲ್ಲಿ ಅನೇಕ ಜನರನ್ನು ಜೈಲಿನಲ್ಲಿಟ್ಟಿದ್ದಾರೆ ಅವರಲ್ಲಿ ನನ್ನ ಸ್ನೆಹಿತರು ಕೆಲವರಿದ್ದಾರೆ. ಇಂಥಾವರು ದೇಶದ ವಿರೋಧಿಗಳು, ದೇಶದ ಕಂಟಕವಾದ ಜನಗಳು ಎಂದು ಹೇಳಿದರೆ ನಾನು ನಂಬುವುದಿಲ್ಲ.

ಕೆಲವು ರಾಜಕೀಯ ಕಾರಣಕ್ಕಾಗಿ ಕೆಲವರು ಅವರ ಜಿಲ್ಲೆಯವರು ಎಂದು ಏನಾದರೂ ಕೆಲವು ಕಾರಣಗಳಿಗೋಸ್ಕರವಾಗಿ ಈ ವಾದ ಮಾಡಬಹುದು. ಈ ದಿವಸ ನಮ್ಮ ಗೃಹಮಂತ್ರಿಗಳು ಬಹಳ ಉನ್ನತಮಟ್ಟದ ವ್ಯಕ್ತಿಗಳು ಮತ್ತು ಒಳ್ಳೆಯ ಮನುಷ್ಯರು ಎಂದು ಹಿಂದಿನಿಂದ ಏನು ಒಂದು ಅಭಿಪ್ರಾಯ ಇದೆ, ಆ ಅಭಿಪ್ರಾಯವನ್ನು ಗೃಹಮಂತ್ರಿಗಳಾದರೂ ಕೂಡ ಉಳಿಸಿಕೊಂಡು ಬರಬೇಕು. ಕೆಲವೊಂದು ಸ್ನೇಹಿತರು ಹೇಳಿದ ಹಾಗೆಪೋಲೀಸ್‌ನಲ್ಲಿ ಎಲ್ಲರೂ ಒಳ್ಳೆಯವರು ಇದ್ದಾರೆ ಎನ್ನುವ ಭಾವನೆ ಮಾಡುವುದಕ್ಕಾಗುವುದಿಲ್ಲ. 100ಕ್ಕೆ 5-10 ಜನ ಒಳ್ಳೆಯ ಪೋಲೀಸರು ಇರಬಹುದು. ಕೆಲವು ಪೋಲೀಸ್ ಸ್ಟೇಷನ್ ಬಟವಾಡೆ ಸ್ಟೇಷನ್ಸ್ ಆಗಿವೆ. ಕಂಪ್ಲೇಟ್ಸ್ ತಂದವರ ಹತ್ತಿರವೂ ದುಡ್ಡು ತೆಗೆದುಕೊಂಡು ಕಂಪ್ಲೇಂಟ್ ಯಾರಮೇಲೆ ಮಾಡಿರುತ್ತಾರೋ ಅವರಿಂದಲೂ ದುಡ್ಡು ತೆಗೆದುಕೊಳ್ಳುತ್ತಿದ್ದಾರೆ. ಕೊಲೆ ಮೊಕದ್ದಮೆಗಳು ಕಡಿಮೆ ಆದ ರೀತಿಯಲ್ಲಿ ತಿಳಿಸಿದ್ದಾರೆ. ಆದರೆ ಕೊಲೆ ಬಹಳ ಹೆಚ್ಚಿಗೆ ನಡೆಯುತ್ತಾ ಇದೆ. ಹೆಚ್ಚಿನ ನೂತನ ವಿಧಾನಗಳನ್ನು ಉಪಯೋಗಿಸಿ ಕೃತ್ಯಗಳನ್ನು ಮಾಡುವ ಅನುಭವ ಆಗುತ್ತಾ ಇದೆ. ನನಗೆ ಗೊತ್ತಿರುವ ಹಾಗೆ, ಒಂದು ಕೊಲೆ ಪ್ರಕರಣದಲ್ಲಿ ಕೊಲೆ ಮಾಡಿದ ಜನ ಯಾವರೀತಿ ತಪ್ಪಿಗೂ ಸಿಕ್ಕಿಕೊಳ್ಳದೆ, ಬೇರೆಯವರು ತಾವು ಕೊಲೆ ಮಾಡಿದೆವು

(ಶ್ರೀ ಬಿ. ವೆಂಕಟಗಿರಿಯಪ್ಪ)

ಎಂದು ಒಪ್ಪಿಕೊಂಡು ಅವರು ಕೋರ್ಟಿನ ಮುಂದೆ ಬರುವ ಪ್ರಸಂಗ ಒದಗಿತ್ತು. ಇದನ್ನು ಗೃಹಮಂತ್ರಿಗಳಿಗೂ ಉನ್ನತ ಪೋಲೀಸ್ ಅಧಿಕಾರಿಗಳಿಗೂ ತಿಳಿಸಿದೆ. ಪೋಲೀಸಿನವರು ತಾಲ್ಲೂಕು ಮಟ್ಟದಲ್ಲಿ ಏನೇನು ವರದಿ ಮಾಡುತ್ತಾರೆ, ಅದನ್ನು ನಿಜವೆಂದು ತಿಳಿಯಬೇಡಿ, ನನಗೆ ಹೆಚ್ಚಿನ ಜವಾಬ್ದಾರಿ ಇದೆ, ಗೌರವ ಕೊಡುವುದಾದರೆ ಇದು ಸರಿಯೇ ತಪ್ಪೇ ಎಂದು ನಿಮ್ಮ ಮನಸ್ಸಿಗೆ ತೃಪ್ತಿಪಡಿಸಿಕೊಳ್ಳಿ ಎಂದು ಅಂಗಲಾಚಿ ಬೇಡಿಕೊಂಡೆ. ಆದರೂ ಪೋಲೀಸಿನವರು ತಾಲ್ಲೂಕು ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ ಏನು ರಿಪೋರ್ಟು ಬರಸಿಕೊಂಡಿರುತ್ತಾರೋ ಅದೇ ರೀತಿ ವಾದ ಮಾಡುತ್ತಾರೆ. ಇಂಗ್ಲಿಷ್‌ನವರ ಕಾಲದಲ್ಲಿ ಯಾವ ಧೋರಣೆಯಿಂದ ಅಧಿಕಾರ ನಡೆಸುತ್ತಿದ್ದರೋ ಅದೇರೀತಿ ಈಗಲೂ ನಡೆಸಿದರೆ ನಮ್ಮ ಗೃಹಮಂತ್ರಿಗಳು ನಡೆಸಿದ ಆಡಳಿತ ಆಗುವುದಿಲ್ಲ. ಈ ದಿವಸ ಮುಖ್ಯವಾಗಿ ಖೂನಿ ಮೊಕದ್ದಮೆ ಬಗ್ಗೆ ಪೋಲೀಸಿನವರು ಏನು ವರದಿ ಕಳುಹಿಸುತ್ತಾರೋ ಅದನ್ನೇ ಗೃಹ ಮಂತ್ರಿಗಳು ಮತ್ತು ಉನ್ನತಮಟ್ಟದ ಅಧಿಕಾರಿಗಳು ಒಪ್ಪಿಕೊಂಡು ಮೊದಲು ಯಾವ ಅಪರಾಧಿಗಳೂ ಸಿಕ್ಕಲಿಲ್ಲ ಎಂದು ಹೇಳುತ್ತಾರೆ, ಅದು ಸರಿಯಾಗಿದೆಯೇ ನ್ಯಾಯವಾದ ಅಪರಾಧಿಗಳನ್ನು ಕೋರ್ಟಿನ ಮುಂದೆ ತಂದಿದ್ದಾರೋ ಇಲ್ಲವೋ ಎಂದು ಸಿ. ಐ. ಡಿ. ಮೂಲಕ ಪರಿಶೀಲನೆ ಮಾಡಬೇಕು. ಇಂತಹ ಒಂದು ವಿಶೇಷವಾದ ವ್ಯವಸ್ಥೆಯನ್ನು ಗೃಹಮಂತ್ರಿಗಳು ಏರ್ಪಡಿಸಿ, ಇಂತಹ ಕೃತ್ಯಗಳು ನಡೆಯದೇ ಇರುವ ರೀತಿಯಲ್ಲಿ ಒಂದು ಕ್ರಮ ತೆಗೆದುಕೊಳ್ಳಬೇಕು.

ಪೋಲೀಸಿನವರು ಏನು ಬರೆದರೂ ಕೂಡ ಸರ್ಕಾರ ಒಪ್ಪಿಕೊಳ್ಳುತ್ತದೆ ಎನ್ನುವ ಭಾವನೆ ಬರಕೂಡದು ಎಂದು ಹೇಳುತ್ತೇನೆ. ಒಂದೊಂದು ಡಿಸ್ಟ್ರಿಕ್ಟ್‌ನಲ್ಲಿ ಕೆಲವು ಪೋಲೀಸ್ ಅಧಿಕಾರಿಗಳು ಎಂದರೆ ಸಬ್‌ಇನ್‌ಸ್ಪೆಕ್ಟರ್ ಇದ್ದಾರೆ ಅವರು ಸರ್ವಿಸ್ ಆಗುವವರೆಗೂ ಅದೇ ಡಿಸ್ಟ್ರಿಕ್ಟ್‌ನಲ್ಲಿ ರೌಂಡು ಹೊಡೆಯುತ್ತಾರೆ. ಎಂ. ಎಲ್. ಎ. ಕೈಯ್ಯಲ್ಲಿ ಹೇಳಿಸಿ ಅಲ್ಲೇ ಇರುವಹಾಗೆ ಮಾಡುತ್ತಾರೆ. ಈ ದಿವಸ ಮುಖ್ಯವಾಗಿ ಇಷ್ಟಾದರೂ ಮಾಡಿದರೆ ಬಹಳ ಒಳ್ಳೆಯದು. ಎರಡು ವರ್ಷಕ್ಕಿಂತ ಹೆಚ್ಚಿಗೆ ಯಾವ ಅಧಿಕಾರಿಯೂ ಕೂಡ ಒಂದುಸ್ಟೇಷನ್ನಿನಲ್ಲಿ ಇರಬಾರದು. ಇನ್‌ಸ್ಪೆಕ್ಟರ್, ಸಬ್ ಇನ್‌ಸ್ಪೆಕ್ಟರ್ ಯಾರೇ ಆಗಲಿ ಇರಬಾರದು. ನಾಲ್ಕು ವರ್ಷಕ್ಕಿಂತ ಹೆಚ್ಚಿಗೆ ಒಂದು ಡಿಸ್ಟ್ರಿಕ್ಟ್‌ನಲ್ಲಿ ಸೇವೆ ಮಾಡಬಾರದು. ಒಂದು ಡಿಸ್ಟ್ರಿಕ್ಟ್‌ನಲ್ಲಿ 4ವರ್ಷ ಕೆಲಸ ಮಾಡಿದಮೇಲೆ ಪುನಃ ಆ ಡಿಸ್ಟ್ರಿಕ್ಟ್‌ನಲ್ಲಿ ಕೆಲಸ ಮಾಡುವುದಕ್ಕೆ ಅವಕಾಶ ಇರಬಾರದು. ಈ ಸಣ್ಣ ಸೂಚನೆಯನ್ನು ಗೃಹಮಂತ್ರಿ ಗಳು ನಡೆಸಿಕೊಟ್ಟರೆ, ಬಹುಮಟ್ಟಿಗೆ ಸುಧಾರಿಸುತ್ತದೆ, ಸ್ಥಳೀಯ ಜನರು ಅಲ್ಲೇ ಕೆಲಸ ಮಾಡುತ್ತಾ ಇರುವುದರಿಂದ ಏನು ಮಾಡುವುದಕ್ಕೂ ಸಾಧ್ಯವಾಗುವುದಿಲ್ಲ. ಜನರಲ್ಲಿ ನೇರ ಸಂಪರ್ಕ ರೌಡಿ ಮತ್ತು ಕೆಟ್ಟ ಜನರ ಸ್ನೇಹ ಮಾಡಿಕೊಂಡು ನಾನಾ ರೀತಿಯಲ್ಲಿ ಪೋಲೀಸಿನವರು ಪ್ರಭಾವ ಬೀರುವುದಕ್ಕೆ ಕಾರಣವಾಗುವುದರಿಂದ ಎರಡು ವರ್ಷಕ್ಕಿಂತ ಹೆಚ್ಚಿಗೆ ಯಾವ ಒಬ್ಬ ಅಧಿಕಾರಿಯನ್ನೂ ಒಂದು ಸ್ಟೇಷನ್‌ನಲ್ಲಿ ಇಡಬಾರದು. ನಾಲ್ಕು ವರ್ಷಕ್ಕಿಂತ ಹೆಚ್ಚಿಗೆ ಒಂದು ಡಿಸ್ಟ್ರಿಕ್ಟ್‌ನಲ್ಲಿ ಯಾವ ಆಫೀಸರೂ ಕೆಲಸ ಮಾಡುವುದಕ್ಕೆ ಅವಕಾಶ ಕೊಡಬಾರದು. ಅವರು ಬೇರೆ ಜಿಲ್ಲೆಯಲ್ಲಿ ಕೆಲಸ ಮಾಡುವುದಕ್ಕೆ ಅವಕಾಶ ಕೊಡಬೇಕು.

ಈ ದಿವಸ ನ್ಯಾಯಾಂಗದ ಬಗ್ಗೆ ಒಂದು ಮಾತು ಹೇಳಿ ಮುಗಿಸುತ್ತೇನೆ. ಎಷ್ಟೋ ಸಂದರ್ಭದಲ್ಲಿ ಸಭೆಯಲ್ಲಿ ತಿಳಿಸಿದ್ದೇನೆ. ಅದೇನೆಂದರೆ, ಕೋರ್ಟುಗಳಲ್ಲಿ ವಿಚಾರಣೆಗಳು ಬಹಳ ನಿಧಾನವಾಗುತ್ತಾ ಇವೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಜಿ. ಸತ್ಯನಾರಾಯಣ (ಬಳ್ಳಾರಿ).—ಪೋಲೀಸ್ ಮತ್ತು ಜೈಲಿಗೆ ಸಂಬಂಧಪಟ್ಟ ಹಾಗೆ ಬೇಡಿಕೆಗಳನ್ನು ಅನುಮೋದಿಸುತ್ತಾ ಎರಡು ಮಾತುಗಳನ್ನಾಡಬೇಕು ಎಂದು ಅಂದುಕೊಂಡಿದ್ದೇನೆ. ನನಗೆ 1947 ರಲ್ಲಿ ಜೈಲುಗಳ ಅನುಭವ ಇದೆ. ನಾನು ಸ್ವಲ್ಪ ಅಂಡರ್‌ಗ್ರೌಂಡ್ ಕೆಲಸ ಮಾಡಿ ಕೆಲವು ಮಟ್ಟಿಗೆ ಅನುಭವ ಇದೆ. ಬಳ್ಳಾರಿಯಲ್ಲಿ ಎರಡು ಜೈಲು ಇವೆ, ಸೆಂಟ್ರಲ್ ಜೈಲು, ಅಲ್ಲಪುರಮ್ ಜೈಲು. ಅಲ್ಲಪುರಮ್ ಜೈಲನ್ನು ಈಗ ಮೆಡಿಕಲ್ ಕಾಲೇಜು ಮಾಡಿದ್ದಾರೆ. ಜೈಲುಗಳು ಜಾಸ್ತಿ ಬೇಕಾಗಿಲ್ಲ ಎನ್ನುವ ಕಾರಣದಿಂದ ಜೈಲನ್ನು ಹಾಸ್ಪಿಟಲ್ ಆಗಿ ಬದಲಾವಣೆ ಮಾಡಿದ್ದಾರೆ. ಹಾಸ್ಪಿಟಲ್ ಮಾಡುವುದಕ್ಕೆ ಕಾರಣ ಏನು ! ಜೈಲುಗಳು ಚೆನ್ನಾಗಿ ಇವೆ. ಆ ಅಭಿಪ್ರಾಯದಿಂದ ಜೈಲನ್ನು ಮೆಡಿಕಲ್ ಕಾಲೇಜನ್ನಾಗಿ ಕನ್‌ವರ್ಟ್ ಮಾಡಿದ್ದಾರೆ. It will be one of the best medical colleges in India, ಎಂದು ಅದನ್ನು ನೋಡಲು ಬಂದ ಕಮಿಟಿಯವರು ಹೇಳಿದ್ದಾರೆ. ಬ್ರಿಟಿಷರ ಕಾಲದಲ್ಲಿ ಇದ್ದ ಜೈಲಿಗೂ ಈಗ ಇರುವುದಕ್ಕೂ ಬಹಳ ವ್ಯತ್ಯಾಸವಾಗಿದೆ ; ಮತ್ತು ಸುಧಾರಿಸಿದೆ. ನಾನು ಜೈಲ್ ವಿಚಾರವಾಗಿ ಇರತಕ್ಕ ಅಡ್ವೈಸರಿ ಕಮಿಟಿಯ ಮೆಂಬರ್ ಆಗಿ ಇರುತ್ತೇನೆ. ಜೈಲಿಗೆ ಹೋದಾಗ ಫುಡ್ ಮುಖ್ಯವಾಗಿ ಟೆಸ್ಟ್ ಮಾಡುತ್ತೇನೆ. ಫುಡ್ ಚೆನ್ನಾಗಿ ಇರುತ್ತದೆ. ಸರಿಯಾಗಿ ಕುಕ್ ಮಾಡಿರುತ್ತಾರೆ. ಹೊಸ ಅಕ್ಕಿ ಆಗಿದ್ದರೆ ಅನ್ನ ಮೆತ್ತಗೆ ಆಗುತ್ತದೆ. ಮಾಮೂಲ್ ಅಕ್ಕಿ

ತಂದರೆ ಅನ್ನ ಚೆನ್ನಾಗಿ ಇರುತ್ತದೆ. ಊಟ ಮಾತ್ರ ಚೆನ್ನಾಗಿರುತ್ತದೆ. ಮೆಡಿಕಲ್ ಟ್ರೀಟ್‌ಮೆಂಟ್ ಮಾತ್ರ ಸ್ವಲ್ಪ ಸುಧಾರಿಸಬೇಕು. ಈಗ ಇರುವ ಮೆಡಿಕಲ್ ಟ್ರೀಟ್‌ಮೆಂಟ್ ಅಷ್ಟು ಹೇಳಿಕೊಳ್ಳುವಷ್ಟು ಇಲ್ಲ. ಕಾಂಪೌಂಡಿನಲ್ಲಿ ಟಾರ್ ರೋಡ್ಸ್ ಹಾಕಿದ್ದಾರೆ. ಅಲ್ಲಿ ಕಟ್ಟಡಗಳು ಹೈಕ್ಲಾಸ್ ಇವೆ. ಅವು ಬ್ರಿಟಿಷರ ಟೈಮ್‌ನಲ್ಲಿ ಕಟ್ಟಿಸಿದ್ದು; ಚೆನ್ನಾಗಿ ಇವೆ. ರೇಡಿಯೋ ಇದೆ, ಪುಸ್ತಕ ಮತ್ತು ಪೇಪರ್ಸ್ ಕೊಡುತ್ತಾರೆ. ಎಲ್ಲ ವಿಧವಾದ ಸೌಕರ್ಯ ಕೊಡುತ್ತಾರೆ. ಟ್ರೀಟ್‌ಮೆಂಟ್ ಚೆನ್ನಾಗಿ ಇದೆ. ಪೋಲೀಸ್‌ನಲ್ಲಿ ಕರಪ್‌ಕ್ಷನ್ ಸುಮಾರಾಗಿ ಇದೆ. ನಮ್ಮ ಸರ್ಕಾರದವರು ಸ್ವಲ್ಪ ಶ್ರದ್ಧೆವಹಿಸಿ ಕರಪ್‌ಕ್ಷನ್ ವಿಚಾರ ಚೆನ್ನಾಗಿ ನೋಡಿಕೊಳ್ಳಬೇಕು. ಎಮರ್ಜೆನ್ಸಿ ಕಂಟಿನ್ಯೂ ಮಾಡಿದರೆ ಚಲೋ ಇರುತ್ತದೆ ಎಂದು ಹೇಳುತ್ತೇನೆ. ಪೋಲೀಸಿನವರಿಗೆ ಮನೆಗಳನ್ನು ಕೊಟ್ಟಿದ್ದಾರೆ. ಇನ್ನೂ ಸ್ವಲ್ಪ ಮನೆಗಳನ್ನು ಕಟ್ಟಿದರೆ ಅವರ ಪ್ರಶ್ನೆ ಬಗೆಹರಿಯುತ್ತದೆ.

ಇನ್ನು ಹೋಮ್‌ಗಾರ್ಡ್ಸ್ ವಿಷಯ. ಹೋದ ಸೆಪ್ಟೆಂಬರ್ ತಿಂಗಳಿನಲ್ಲಿ ಬಳ್ಳಾರಿಯಲ್ಲಿ ಹೋಮ್‌ಗಾರ್ಡ್ಸ್ ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ. ಹೋಮ್‌ಗಾರ್ಡ್ಸ್‌ನ್ನು ನಮ್ಮ ಸ್ಟೇಟಿನಲ್ಲಿ ಬಹಳ ಸುಧಾರಿಸಬೇಕು. ಹೋಮ್‌ಗಾರ್ಡ್ಸ್ ಎಷ್ಟು ಸುಧಾರಿಸುತ್ತೀರೋ ಅಷ್ಟು ಒಳ್ಳೆಯದು. ಪೋಲೀಸ್ ಸ್ಟ್ರೆಂಗ್ತ್ ಬಹಳ ಕಡಿಮೆ ಇದೆ. ಬ್ರಿಟಿಷರ ಕಾಲದಿಂದ ಇಲ್ಲಿಯವರೆಗೆ ಜನಸಂಖ್ಯೆ ಬಹಳ ಹೆಚ್ಚು ಬೆಳೆದು ಬಂದಿದೆ. ಆದರೆ ಪೋಲೀಸ್ ಸ್ಟ್ರೆಂಗ್ತ್ ಮಾತ್ರ ಬೆಳೆದಿಲ್ಲ. ಅದು ಬೆಳೆಯಬೇಕು. ಎಲ್ಲರೂ ಪೋಲೀಸ್ ಸ್ಟ್ರೆಂಗ್ತ್ ಬೆಳೆಯಬೇಕು ಎಂದು ಹೇಳುತ್ತಾರೆ. ಅವರ ಸಂಬಳ ಇಂಪ್ರೂವ್ ಮಾಡಿದರೆ ಕರಪ್‌ಕ್ಷನ್ ಕಡಿಮೆಯಾಗುತ್ತದೆ ಎಂದು ನನ್ನ ಅಭಿಪ್ರಾಯ ಇದೆ. ನಮ್ಮ ಸ್ನೇಹಿತರು ಹೇಳಿದ ಹಾಗೆ ಎರಡು ವರ್ಷಕ್ಕೊಮ್ಮೆ ವರ್ಗ ಮಾಡಿದರೆ ಚೆನ್ನಾಗಿರುತ್ತದೆ. ಆ ಡಿಸ್ಟ್ರಿಕ್ಟ್‌ನವರನ್ನು ಅವರ ಡಿಸ್ಟ್ರಿಕ್ಟ್‌ನಲ್ಲೇ ಹಾಕಿದರೆ ಅಷ್ಟು ಚೆನ್ನಾಗಿರುವುದಿಲ್ಲ. 25 ಪರ್ಸೆಂಟು ಇತರ ಡಿಸ್ಟ್ರಿಕ್ಟ್‌ಗಳಲ್ಲಿ ಇದ್ದವರನ್ನು ತಂದರೆ ಚೆನ್ನಾಗಿರುತ್ತದೆ. ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ)—ಮಾನ್ಯ ಸಭಾಪತಿಯವರೆ, ಮಾನ್ಯ ಗೃಹ ಮಂತ್ರಿಗಳು ಮಂಡಿಸಿರತಕ್ಕಂತಹ ಬೇಡಿಕೆಗಳನ್ನು ವಿರೋಧಿಸುತ್ತಾ ಸರ್ಕಾರಕ್ಕೆ ಕೆಲವು ಸೂಕ್ತ ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆ ಪಡುತ್ತೇನೆ. ವರ್ಷ ವರ್ಷ ಈ ಇಲಾಖೆಯಲ್ಲಿ ಹಣದ ಹೆಚ್ಚಿನ ಬೇಡಿಕೆಯನ್ನು ತರತಕ್ಕಂತದ್ದು ಒಂದು ಸಂಪ್ರದಾಯವಾಗಿದೆ. ಒಂದು ವೇಳೆ ಹಣ ವ್ಯಯವಾದರೂ ಕೂಡ ಅದರ ಫಲ ಅಷ್ಟಾಗಿ ದೊರೆಯುತ್ತಾ ಇದೆಯೇ ? ಎಂದರೆ ಅದೂ ಇಲ್ಲ. ದೇಶದಲ್ಲಿ ಜನತೆಗಾಗಲೀ. ದೇಶಕ್ಕಾಗಲೀ ಈ ಇಲಾಖೆಯಿಂದ ಕಲ್ಯಾಣವಾಗುತ್ತಿದೆಯೇ ಎನ್ನತಕ್ಕಂತದ್ದನ್ನು ಸ್ವಲ್ಪ ಯೋಚನೆ ಮಾಡಬೇಕಾಗಿದೆ. ಮಾನ್ಯ ಹಿಂದಿನ ಸಚಿವರು ಐದು ಕೋಟಿ ಚಿಲ್ಲರೆಯ ಬೇಡಿಕೆಯನ್ನು ಕಳೆದ ವರ್ಷ ಇಟ್ಟಿದ್ದರು. ಈ ಸಾರಿ ಇನ್ನೂ ಆರು ಕೋಟಿ ರೂಪಾಯಿಯ ಬೇಡಿಕೆಯನ್ನು ಮಾನ್ಯ ಮಂತ್ರಿಯವರು ಜೈಲು ಇಲಾಖೆಗೆ ಹಾಗೂ ಪೋಲೀಸು ಇಲಾಖೆಗೆ ಸಂಬಂಧಪಟ್ಟಂತೆ ಇಟ್ಟಿದ್ದಾರೆ. ಹೀಗೆ ವರ್ಷೇ ವರ್ಷೇ ಹಣದ ವೆಚ್ಚ ಜಾಸ್ತಿಯಾಗುತ್ತದೆಯೇ ವಿನಹ ಇದರಿಂದ ಜನತೆಯ ನೆಮ್ಮದಿಗಾಗಲೀ, ಅಥವಾ ಜನತೆಯ ಒಳಿತಿಗಾಗಲೀ. ಅಷ್ಟಾಗಿ ಪ್ರಯೋಜನವಾಗುತ್ತಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ.

ಜೈಲು ವಿಚಾರವಾಗಿ ಎರಡು ಮಾತುಗಳನ್ನು ಹೇಳಬೇಕಾಗಿದೆ. ಮಾನ್ಯ ಸ್ನೇಹಿತರಾದಂತಹ ಶ್ರೀಮಾನ್ ಕೊಳ್ಳೆಬೈಲ್ ಮತ್ತು ಶ್ರೀಮಾನ್ ಅಗ್ನಿಹೋತ್ರಿಯವರು, ವಿರೋಧ ಪಕ್ಷದ ನಾಯಕರು ಮತ್ತು ಶ್ರೀ ಸಿದ್ದಯ್ಯ ಕಾಶೀಮಠ ಇವರುಗಳು ಮಾತನಾಡಿದ ನಂತರ ಹೇಳಿದರು 'ಎಲ್ಲಾ ಸೌಕರ್ಯಗಳನ್ನೂ ಅವರಿಗೆ ಕೊಡುತ್ತಿದ್ದೇವೆ. ಮತ್ತು ಅವರು ಜೈಲನ್ನು ಬಿಟ್ಟು ಹೊರಗಡೆ ಹೋಗುವ ಸಂದರ್ಭ ಬಂದಾಗ ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಕೊಡುತ್ತ ಇದ್ದರೆ, ಅವರು ಮತ್ತೆ ವಾಪಾಸು ಜೈಲಿಗೆ ಬಂದು ಬಿಟ್ಟಾರು ಎಂದೂ, ಮತ್ತು ವಿರೋಧಿ ಪಕ್ಷದವರು ಹೇಳಿದುದು ಸರಿಯಲ್ಲ ಎಂದು.' ಅಂದರೆ ಹೆಚ್ಚಿನ ಸೌಲಭ್ಯಗಳನ್ನು ಕೊಡಕೊಡದು ಎಂಬ ಧಾಟಿಯಲ್ಲಿ ಅವರ ಭಾಷಣದಲ್ಲಿ ನಿಳಿಸಿದರು. ಆದರೆ ನಾನು ಶ್ರೀಮಾನ್ ಅಗ್ನಿಹೋತ್ರಿಯವರಿಗೆ ಇಷ್ಟು ಮಾತ್ರ ಹೇಳಬಯಸುತ್ತೇನೆ. ನಮ್ಮ ವಿರೋಧ ಪಕ್ಷದ ನಾಯಕರು, ಹೇಳಿದ್ದೇನೆಂದರೆ, ಜೈಲಿನಲ್ಲಿ ಅವರ ಮನಸ್ಸು ಪರಿವರ್ತನೆಯಾಗುವರೀತಿಯಲ್ಲಿ ಸರ್ಕಾರ ವ್ಯವಸ್ಥೆ ಮಾಡಬೇಕೆ, ಹೊರತು, ಅವರಿಗೆ ಸುಪ್ಪತ್ತಿಗೆಯನ್ನಾಗಲಿ ಒಳ್ಳೆಯ ರುಚಿಕರವಾದ ಊಟವನ್ನಾಗಲಿ ಅಥವಾ ಎಲ್ಲಾ ವಿಧವಾದ ಸೌಲಭ್ಯಗಳನ್ನೂ ಕೊಡುವಂತೆ ಹೇಳಿದ್ದಲ್ಲ. ಅವರ ಮನಸ್ಸು ಪರಿವರ್ತನೆ ಯಾಗಬೇಕು. ಒಂದು ಸಾರಿ ಬಂದಂತಹ ಒಬ್ಬ ವ್ಯಕ್ತಿಯು ಕೊಂಚ ಮಟ್ಟಿಗಾದರೂ ಪರಿವರ್ತನೆ ಹೊಂದಿ ಆವನು ಸಮಾಜದಲ್ಲಿ ಒಬ್ಬ ಉತ್ತಮನಾದ ಮನುಷ್ಯನಾಗುವುದಕ್ಕೆ ವ್ಯವಸ್ಥೆ ಮಾಡತಕ್ಕಂತ ಒಂದು ರೀತಿ ನೀತಿಯು ಜೈಲುಗಳಲ್ಲಿ. ಬಂದೀಖಾನೆಗಳಲ್ಲಿ ಆಗಬೇಕೆನ್ನುವುದನ್ನು ಅವರು ಹೇಳಿದ್ದು ಅಲ್ಲದೆ ಮತ್ತೇನೂ ಅಲ್ಲ. ಅದನ್ನು ನಾನುಕೂಡ ಈಗ

(ಶ್ರೀ ಬಿ. ಬೈರಪ್ಪಾಜಿ)

ಹೇಳುತ್ತಿದ್ದೇನೆ. ಅವರು ಅನೇಕ ರೀತಿಯ ಕೆಡುಕುಗಳನ್ನು ಅಥವಾ ಕಳ್ಳತನಗಳನ್ನು ಮಾಡಿರುತ್ತಾರೆ; ತಪ್ಪುಗಳನ್ನೂ ಮಾಡಿರುತ್ತಾರೆ. ಅವರಲ್ಲಿ ಕೆಲವರು ಬೇಕುಬೇಕಾಗಿಯೋ, ಅಥವಾ ಅವರ ಇನ್ನಿತರ ಅಭಾವಗಳಿಂದಲೋ, ಅಥವಾ ಬೇರೆ ಕಾರಣದಿಂದಲೋ ಬಂದಿರ ಬಹುದು. ಅವರ ಮನಸ್ಸನ್ನು ಪರಿವರ್ತನೆ ಮಾಡುವುದಕ್ಕೆ ಹಿಂದೆ ಕೆಲವು ರೀತಿ ಸೂಚನೆ ಗಳನ್ನು ಕೊಟ್ಟಿದ್ದೆವು. ಜೈಲಿನಲ್ಲಿ ಪ್ರತಿವಾರ ಅವರಿಗೆ ದೇವರ ವಿಚಾರವಾಗಿ, ನಮ್ಮ ಸಂಸ್ಕೃತಿ, ಧರ್ಮದ ವಿಚಾರವಾಗಿ, ಮತ್ತು ನಮ್ಮ ದೇಶದ ವಿಚಾರವಾಗಿ ಅವರಿಗೆ ತಿಳುವಳಿಕೆಯನ್ನು ಕೊಡತಕ್ಕ ಕೆಲವು ಉಪನ್ಯಾಸಗಳನ್ನು ಏರ್ಪಡಿಸುವುದು, ಅಗತ್ಯ. ಇತ್ಯಾದಿಗಳನ್ನು ಏರ್ಪಡಿಸುವುದ ರಿಂದ ತನ್ಮೂಲಕ ಅವರ ಮನಸ್ಸು ಪರಿವರ್ತನೆಯಾಗಿ ಅವರು ಮತ್ತೆ ತಪ್ಪನ್ನು ಮಾಡುವುದು ಅಥವಾ ಬೇರೆ ರೀತಿಯ ಸಮಾಜಕ್ಕಾಗಲೀ, ದೇಶಕ್ಕಾಗಲೀ ದ್ರೋಹವನ್ನು ಬಗೆಯುತ್ತಿರುವ ರೀತಿ ನೀತಿಗಳನ್ನು ಬಿಡುವಂತೆ ಮಾಡುವ ಒಂದು ಹವ್ಯಾಸವನ್ನು ತರತಕ್ಕಂತ ಚಟುವಟಿಕೆಗಳನ್ನು ಜೈಲಿನಲ್ಲಿ ಮಾಡುವುದು ಸೂಕ್ತ ಮತ್ತು ಉತ್ತಮವೆಂದು ಹೇಳುತ್ತೇನೆ. ಮಾನ್ಯ ಮಿತ್ರರಾದಂತಹ ಶ್ರೀಮಾನ್ ಕೃಷ್ಣ ಶೆಟ್ಟರು ಹೇಳಿದರು, ರಾಜಕೀಯ ಬಂಧಿಖಾನೆಯಲ್ಲಿ ಕೊಡತಕ್ಕಂತ ಮತ್ತು ನಡೆಯುತ್ತಿರುವಂತಹ ರೀತಿ ನೀತಿಗಳು ಸರಿಯಾಗಿಲ್ಲ. ಇನ್ನೂ ಉತ್ತಮವಾಗಬೇಕು. ಅವರು ಮೊನ್ನೆ ತಾನೇ ಬಿಡುಗಡೆಯಾಗಿ ಬಂದಿದ್ದಾರೆ. ತಾವು ಕೂಡಾ ಜೈಲು ವಾಸವನ್ನು ಅನುಭವಿಸಿದ್ದೀರಿ, ನಾವು ಕೂಡ ಅನುಭವಿಸಿದ್ದೇವೆ. ಆದರೆ ಹಿಂದೆ ನಾವು ಹೋಗುವಂತಹ ಸಂದರ್ಭಗಳಲ್ಲಿದ್ದಂತೆ ರೀತಿ ನೀತಿಗಳು ಇಂದು ಇಲ್ಲ ಮತ್ತು ಅದನ್ನು ಸ್ವಲ್ಪ ಯೋಚನೆ ಮಾಡಿ, ವಿಮರ್ಶೆ ಮಾಡುವುದು ಉತ್ತಮ ಎಂದು ನಾನು ಸರ್ಕಾರಕ್ಕೆ ಸೂಚನೆ ಕೊಡಬಯಸುತ್ತೇನೆ. ಸ್ವಾಮಿ, ಸ್ವಲ್ಪ ದಿವಸಗಳ ಹಿಂದೆ ಈ ಬೆಂಗಳೂರಿನ ಜೈಲಿಗೆ ಸುಮ್ಮನೆ ನೋಡುವುದಕ್ಕೆ ಹೋಗಿದ್ದೆ. ಅಲ್ಲಿ ಕುರ್ಚಿ ಮೊದಲಾದ ಸಾಮಾನುಗಳನ್ನು ಮಾಡಿದ್ದನ್ನು ನೋಡಿದ್ದೆ. ಕೆಲವು ಉತ್ತಮವಾದ ಸಾಮಾನುಗಳನ್ನು ಜೈಲಿನ ಬಂಧಿಗಳೇ ಮಾಡಿದ್ದಾರೆ. ಅದು ಉತ್ತಮವಾದ ಅಧಿಕಾರಿಗಳಮೇಲೆಯೂ ಅವಲಂಬಿಸಿದೆ. ಎಲ್ಲಿ ಉತ್ತಮವಾದ ನಿಷ್ಪಕ್ಷಪಾತ ಅಧಿಕಾರಿಗಳು ಇದ್ದಾರೋ ಅಲ್ಲಿ ಉತ್ತಮವಾದ ಕೆಲಸಗಳನ್ನು ನಡೆಸುತ್ತಿದ್ದಾರೆ. ಜೈಲುವಾಸಗಳಿಗೆ ಸಲ್ಲಬೇಕಾದಂತ ಸೌಲಭ್ಯಗಳು ಏನಿವೆಯೋ ಅವುಗಳನ್ನು ಸರಿಯಾದ ರೀತಿಯಲ್ಲಿ ಸಲ್ಲಿಸುವ ವ್ಯವಸ್ಥೆ ಇದೆ. ಇನ್ನು ಕೆಲವು ಕಡೆ ದೋಷಾರೋಪಣೆಗಳಿವೆ. ಬಂಧಿಖಾನೆಗಳಿಗೆ ಕೊಡತಕ್ಕಂತಹ ಆಹಾರ ಸಾಮಗ್ರಿಗಳಲ್ಲಿ ಅನೇಕ ರೀತಿಯ ಲೋಪದೋಷಗಳನ್ನು ನಾವು ಇಂದು ಕಾಣುತ್ತಿದ್ದೇವೆ. ಅದನ್ನು ಸರ್ಕಾರ ಸರಿಪಡಿಸಬೇಕಾದುದು ಸರ್ಕಾರದ ಕರ್ತವ್ಯ ವೆಂದು ನಾನು ಹೇಳುತ್ತೇನೆ.

ಇನ್ನು ಪೋಲೀಸ್ ಇಲಾಖೆಯ ವಿಷಯದಲ್ಲಿ ನಾನಾದರೂ ಹೇಳುವುದಿಷ್ಟೇ, ಈ ಇಲಾಖೆಯಲ್ಲಿ ಎಲ್ಲರೂ ನಿಷ್ಠಾವಂತರಿಲ್ಲ. ಹಾಗೆಯೇ ಎಲ್ಲರೂ ಲಂಚಕೋರರಲ್ಲ. ಮತ್ತು ಅಧರ್ಮದಿಂದ ನಡೆಯುತ್ತಾ ಇಲ್ಲ. ಕೆಲವರು ನಿಷ್ಠಾವಂತರಾದ ಅಧಿಕಾರಿಗಳು ಕೂಡ ಈ ಪೋಲೀಸು ಇಲಾಖೆ ಯಲ್ಲಿದ್ದಾರೆ. ಅಂದರೆ ಅದರಲ್ಲೂ ಕೂಡ ಲೋಪದೋಷಗಳನ್ನು ನಡೆಸತಕ್ಕಂಥ ಅಧಿಕಾರಿಗಳು ಕೆಲವರು ಇದ್ದಾರೆ. ಒಟ್ಟಿನಲ್ಲಿ ಒಬ್ಬ ಕಾನಿಸ್ಟೇಬಲ್ ಏನಿದ್ದಾನೆ, ಅವನ ಸ್ಥಿತಿ ಉತ್ತಮವಾಗ ಬೇಕು. 1947ರಿಂದ ಆಚೆಗೆ ಕೈ ನೀಡುತ್ತಿದ್ದರು. ಒಬ್ಬ ಕಾನ್‌ಸ್ಟೇಬಲ್ ಇಂದು ಕೂಡ ಕೈಯೊಡ್ಡುತ್ತಾನೆ. ಆ ಒಂದು ಸ್ಥಿತಿ ತಪ್ಪಬೇಕು. ಸ್ವಾತಂತ್ರ್ಯ ಬಂದು 18 ವರ್ಷವಾದರೂ ಕೂಡ ಇಂದು ಅಷ್ಟನ್ನು ತಪ್ಪಿಸುವಂತೆ ಶಕ್ತಿ ಸಾಮರ್ಥ್ಯ ನಮ್ಮ ಸರಕಾರಕ್ಕೆ ಇಲ್ಲದಿದ್ದರೆ ಅದು ಬಹಳ ಸೋಚನೀಯ ಮತ್ತು ಇದನ್ನು ಬಹಳ ಘನವಾಗಿ ಯೋಚನೆ ಮಾಡತಕ್ಕಂತದ್ದು ಸರ್ಕಾರದ ಕರ್ತವ್ಯವೆಂದು ನಾನು ಭಾವಿಸಿದ್ದೇನೆ. ಈ ಇಲಾಖೆಯಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳುವಂತಹ ಸಂದರ್ಭದಲ್ಲಿ ಕನಿಷ್ಟ ಪಕ್ಷ ಎಸ್. ಎಸ್. ಎಲ್. ಸಿ. ಪಾಸು ಮಾಡಿರತಕ್ಕವರನ್ನು ಈ ಇಲಾಖೆಗೆ ಸೇರಿಸಿಕೊಳ್ಳಬೇಕು, ಅವರಿಗೆ ಉತ್ತಮವಾದಂತ ಸಮಾಜದಲ್ಲಿ ಯಾವ ರೀತಿಯಲ್ಲಿ ವರ್ತಿಸಬೇಕು. ಎಂಬುದನ್ನೆಲ್ಲಾ ಕಲಿಸಬೇಕು. ಕೇವಲ ಪೋಲೀಸ್ ಎಂದರೆ ದುಡ್ಡಿಗೂ, ಲಂಚಕ್ಕೂ ಕೈ ನೀಡುವ ಜನ ಎನ್ನುವ ಮನೋಭಾವನೆ ಜನರಲ್ಲಿ ಸಂಪೂರ್ಣವಾಗಿ ನಾಶವಾಗುವಂತಾಗಬೇಕು. ಅವನು ಸಮಾಜದಲ್ಲಿ ಒಬ್ಬ ಉತ್ತಮನಾದ ಮನುಷ್ಯ, ಸಮಾಜದ ಹಿತರಕ್ಷಣೆಗೆ ಜನಗಳ ಹಿತರಕ್ಷಣೆಗೆ ಇವನು ಕೆಲಸ ಮಾಡುತ್ತಾನೆ ಎನ್ನುವ ಒಂದು ಸ್ಥಿತಿ ಜನರಿಗೆ ತಿಳಿಯಬೇಕು. ಈ ದೇಶದಲ್ಲಿ ಅವರಿಗೆ ಸರ್ಕಾರ ಒಂದು ಉತ್ತಮವಾದಂತ, ತಿಳುವಳಿಕೆಯನ್ನು ಕೊಡುವಂತೆ ತರಬೇತಿಯನ್ನು ಕೊಟ್ಟರೆ, ಅವರು ನಿಜವಾಗಿಯೂ ಉತ್ತಮರಾಗುತ್ತಾರೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅವರ ಸಂಬಳ ಕೂಡ ಬಹಳ ಕನಿಷ್ಟ ಮಟ್ಟದಲ್ಲಿದೆ. ಅದನ್ನು ಕೂಡ ಉತ್ತಮ ಪಡಿಸಬೇಕು. ಅವರ ಸ್ಥಿತಿ ಉತ್ತಮಗೊಂಡರೆ ಇನ್ನೊಬ್ಬರಿಗೆ ಕೈಯೊಡ್ಡಲಾರರು ಎಂದು ಈ ಸಂದರ್ಭದಲ್ಲಿ

ಹೇಳುತ್ತೇನೆ. ಈ ಇಲಾಖೆಯಲ್ಲಿ ಮೊನ್ನೆ ಒಂದು ವಿಚಾರ ನನ್ನ ಗಮನಕ್ಕೆ ಬಂತು. ಒಬ್ಬ ಕೆಳದರ್ಜೆ ನೌಕರನು ಒಂದು ಕಡೆ ಒಬ್ಬ ಡ್ರೈವರನ್ನು ಏಕೋ ಪೋಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಹೊಡೆದು, ಕೇಸ್ ಕೂಡ ಹಾಕದೆ ಮೇಲ್ದರ್ಜೆಯ ಅಧಿಕಾರಿಗಳಿಗೆ ಕೂಡ ತಿಳಿಸದೆ ಪೋಲೀಸ್ ಕಾನ್ಸ್‌ಟೇಬಲ್ ಮೂಲಕ ನಡೆದ ಅವಮಾನಕರವಾದಂತ ಸನ್ನಿವೇಶವು ನನ್ನ ಗಮನಕ್ಕೆ ಬಂದಿದೆ. ಈ ರೀತಿ ಆಗಬಾರದು. ಸಮಾಜದಲ್ಲಿ ಎಲ್ಲರಿಗೂ ಕೂಡ ಸರಿಯಾದ ಹಕ್ಕು ಇರುತ್ತದೆ. ಯಾವ ಮನುಷ್ಯ ದುಷ್ಕೃತ್ಯವನ್ನು ಮಾಡಿರುತ್ತಾನೆ ಅಂಥವನಿಗೆ ಶಿಕ್ಷೆ ಆಗಬೇಕೇ ವಿನಾ ಏನೂ ಮಾಡದಂಥ, ಏನೂ ಅರಿಯದಂಥ ಮನುಷ್ಯರಿಗೆ ಪೋಲೀಸಿನವರಿಂದ ತೊಂದರೆ ಆಗಬಾರದು. ದೇಶದಲ್ಲಿ ಒಳ್ಳೆಯ ಹೆಸರನ್ನು ಗಳಿಸಬೇಕಾದರೆ, ಉತ್ತಮರಾದ ಅಧಿಕಾರಿಗಳಿರಬೇಕು, ನಿಷ್ಠೆಯಿಂದ ಇರತಕ್ಕ ಅಧಿಕಾರಿಗಳಿರಬೇಕು. ಇಂಥಹವರನ್ನು ಸರ್ಕಾರ ನೇಮಿಸಿಕೊಳ್ಳಬೇಕಾಗಿದೆಯೇ ವಿನಾ ಕೇವಲ ಎತ್ತರ, ಉದ್ದ, ಅಗಲ ಮಾತ್ರ ನೋಡಿ ಎಲ್ಲದರಲ್ಲಿಯೂ ಕೂಡ ಅರ್ಹತೆ ಇದೆ ಎನ್ನುವವರನ್ನು ನೇಮಿಸಿಕೊಳ್ಳಬಾರದು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ಮುನಿಸ್ವಾಮಯ್ಯ (ದೇವನಹಳ್ಳಿ).—ಸ್ವಾಮಿ, ಬಂದೀಖಾನೆ, ಪೋಲೀಸ್ ಮತ್ತು ತುರ್ತು ಪರಿಸ್ಥಿತಿಗೆ ಸಂಬಂಧಪಟ್ಟ ಬೇಡಿಕೆಗಳನ್ನು ಅನುಮೋದಿಸುತ್ತ ಕೆಲವು ವಿಷಯಗಳನ್ನು ಹೇಳುತ್ತೇನೆ, ಸ್ವಾಮಿ.

ನಮ್ಮ ಸ್ನೇಹಿತರು ಆಗಲೇ ಸಲಹೆ ಕೊಟ್ಟಿರುವ ಹಾಗೆ ಬಂದೀಖಾನೆಗಳಲ್ಲಿ ಆಹಾರವನ್ನು ಒದಗಿಸುತ್ತಿರತಕ್ಕದ್ದು ಸ್ವಲ್ಪಮಟ್ಟಿಗೆ ಹಿಂದಿನ ಕಾಲಕ್ಕಿಂತ ಉತ್ತಮವಾಗಿದೆ. ಅದನ್ನು ಇನ್ನೂ ಉತ್ತಮಪಡಿಸಬೇಕು ಎಂದು ನಾನು ತಿಳಿದುಕೊಂಡಿದ್ದೇನೆ. ನಾನು ಎರಡು ಮೂರು ಜೈಲುಗಳನ್ನು ನೋಡಿಕೊಂಡು ಬಂದಿದ್ದೇನೆ. ಅಲ್ಲಿ ಕೊಡತಕ್ಕ ಆಹಾರ ಬೇರೆ ಕಡೆ ಕೊಡತಕ್ಕ ಆಹಾರಕ್ಕಿಂತಲೂ ಗುಣದಲ್ಲಿಯೂ ಉತ್ತಮವಾಗಿದೆ, ಗಾತ್ರದಲ್ಲಿಯೂ ಹೆಚ್ಚಾಗಿದೆ. ಹೊರಗೆ ಇರತಕ್ಕ ಜನರಿಗೆ ರೇಷನ್ ಬಂದಿರುವ ಕಾಲದಲ್ಲಿ ಅಷ್ಟೊಂದು ಆಹಾರ ದೊರಕುತ್ತಿಲ್ಲ. ಜೈಲಿನಲ್ಲಿರುವವರಿಗೆ ಹೆಚ್ಚು ಆಹಾರವನ್ನು ಕೊಡುತ್ತಾರೆಂದು ನಾನು ಸಂತೋಷಪಡುತ್ತೇನೆ.

ಜೈಲಿನಲ್ಲಿರುವವರು ಅಲ್ಲಿಂದ ಹೊರಗೆ ಬಂದ ಮೇಲೆ ಹೆಚ್ಚು ಹೆಚ್ಚಾಗಿ ಸಾಮಾಜಿಕ ಕಾರ್ಯಗಳಲ್ಲಿ ಮತ್ತು ರಾಷ್ಟ್ರದ ಕೆಲಸಗಳಲ್ಲಿ ಭಾಗಿಗಳಾಗಿ ಸತ್ಪ್ರಜೆಗಳಾಗಬೇಕಾಗಿರುವುದರಿಂದ ಇನ್ನೂ ಹೆಚ್ಚಿನ ಎಚ್ಚರಿಕೆಯಿಂದ ಅವರನ್ನು ನೋಡಿಕೊಳ್ಳಬೇಕೋ ಏನೋ ಎಂದು ನಾನು ಊಹೆ ಮಾಡುತ್ತೇನೆ. ನಾವು ಬೆಂಗಳೂರು ಜೈಲಿನಲ್ಲಿ ಹೋಗಿ ನೋಡಿದರೆ ಅಲ್ಲಿ ತಯಾರಾಗಿರುವ ಮರದ ಸಾಮಾನುಗಳು, ಲೋಹದ ಸಾಮಾನುಗಳು, ಉಣ್ಣೆ ಮತ್ತು ಹತ್ತಿಯ ಬಟ್ಟೆಗಳು ಇವುಗಳನ್ನು ಬಹಳ ಎಚ್ಚರಿಕೆಯಿಂದ ಮಾಡಿರುವುದಲ್ಲದೆ ಜಾಣತನದ ಕೆಲಸಗಳನ್ನು ಕೂಡ ಮಾಡುತ್ತಾರೆ ಎಂದು ಗೊತ್ತಾಗುತ್ತದೆ. ಆದರೆ ಅವರಿಗೆ ಕೊಡತಕ್ಕ ಕೂಲಿ ಸಾಲದು ಎಂದು ನಾನು ಭಾವಿಸುತ್ತೇನೆ. ಅವರಿಗೆ ಇನ್ನೂ ಹೆಚ್ಚಿನ ಕೂಲಿಯನ್ನು ಕೊಡಬೇಕು ಮತ್ತು ಜೈಲಿನಿಂದ ಹೊರಗೆ ಬರುವ ಕಾಲದಲ್ಲಿ ಅವರಿಗೆ ಸಾಕಾದಷ್ಟು ಹಣ ಕೈಯಲ್ಲಿ ದೊರೆಯುವಂತೆ ಮಾಡಿ ಅವರಿಗೆ ಸಂತೋಷವನ್ನುಂಟು ಮಾಡಬೇಕೆಂದು ಸಲಹೆ ಮಾಡುತ್ತಿದ್ದೇನೆ.

ಅನೇಕರು ಜೀವಾವಧಿ ಶಿಕ್ಷೆಗೆ ಒಳಗಾಗಿದ್ದಾರೆ. ಅವರಲ್ಲಿ ಏನು ಪರಿವರ್ತನೆಯಾಗಿದೆಯೋ ಎಂದು ಅಲ್ಲಿನ ಅಧಿಕಾರಿಗಳನ್ನು ವಿಚಾರ ಮಾಡಿ, ವಿಸಿಟರುಗಳನ್ನು ಕೇಳಿ, ಅವರ ಜೀವಾವಧಿ ಶಿಕ್ಷೆಯನ್ನು ಸಾಕಷ್ಟು ಕಡಮೆ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ರಾಜ್ಯದ ಅನೇಕ ಕಡೆ ಜೈಲುಗಳು ಕಡಮೆ ಇವೆ. ಇದು ಸಂತೋಷದ ಸಂಗತಿ. ಹಿಂದೆ ಬೆಂಗಳೂರು ಜೈಲು ಮೈಸೂರು ರಾಜ್ಯಕ್ಕೆಲ್ಲ ಬಹಳ ದೊಡ್ಡದಾಗಿದ್ದು ಕ್ರಮೇಣ ಅದರ ವಿಸ್ತಾರ ಕಡಮೆಯಾಗಿ ಅಲ್ಲಿ ಕಾಲೇಜು ಕಟ್ಟಡಗಳು ಬರುತ್ತಿರುವುದನ್ನು ನೋಡಿದರೆ ದೇಶದಲ್ಲಿ ಅಪರಾಧಿಗಳು ಕಡಮೆಯಾಗುತ್ತಿದ್ದಾರೆಯೋ, ಅಪರಾಧಗಳನ್ನು ಮಾಡತಕ್ಕ ಜನಗಳು ಕಡಮೆಯಾಗುತ್ತಿದ್ದಾರೆಯೋ ಏನೋ ಎಂದು ಗೊತ್ತಾಗುತ್ತದೆ. ಆದುದರಿಂದ ಜನಗಳಿಗೆ ಸಾಮಾಜಿಕ ವಾತಾವರಣವನ್ನು ಕಲ್ಪಿಸಿ, ಅವರು ಸತ್ಯವಾಗಿ ಬಾಳುವುದನ್ನು ಅವರನ್ನು ಸುಶಿಕ್ಷಿತರಾಗಿ ಮಾಡುವುದಕ್ಕೆ ಪ್ರಚಾರ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಪೋಲೀಸ್ ವಿಷಯದಲ್ಲಿ ಸ್ವಲ್ಪ ಮಾತನಾಡಬೇಕಾಗಿದೆ. ಬೆಂಗಳೂರಿನ ಪೋಲೀಸ್ ಈಚೆಗೆ ಬಹಳ ಒಳ್ಳೆಯ ಕೆಲಸಗಳನ್ನು ಮಾಡುತ್ತಿದೆ. ಮೊದಲು ಐ.ಜಿ.ಪಿ. ಅವರ ಅಧೀನದಲ್ಲಿ ಇತ್ತು. ಆ ಮೇಲೆ ಬೆಂಗಳೂರಿಗೆ ಪ್ರತ್ಯೇಕವಾಗಿ ಕಮಿಷನರ್ ಎಂದು ಮಾಡಿ ಅವರ ಕೈಕೆಳಗೆ ಸೂಪರಿಂಟೆಂಡೆಂಟ್‌ಗೆ ಬದಲಾಗಿ ಅಸಿಸ್ಟೆಂಟ್ ಕಮಿಷನರ್ ಎಂದು ಹುದ್ದೆಗಳನ್ನು ಕರೆದರು ಮತ್ತು ಅಧಿಕಾರಿಗಳ ಸಂಖ್ಯೆಯನ್ನೂ ಹೆಚ್ಚಿಸಿದ್ದಾರೆ. ಪ್ರತಿವಾರವೂ ಪೋಲೀಸ್ ಶಾಖೆಯವರು ಕೊಡತಕ್ಕ ವರದಿಗಳನ್ನು

(ಶ್ರೀ ಆರ್. ಮುನಿಸ್ವಾಮಯ್ಯ)

ನೋಡಿದರೆ ಮೊದಲು ಎಷ್ಟು ಅಪರಾಧಗಳು ಆಗುತ್ತಿದ್ದುವೋ, ಎಷ್ಟು ಕಳವುಗಳು ಆಗುತ್ತಿದ್ದುವೋ, ಎಷ್ಟು ಜೇಬುಗಳ್ಳತನಗಳಾಗುತ್ತಿದ್ದುವೋ ಅವುಗಳೆಲ್ಲ ಸ್ವಲ್ಪಮಟ್ಟಿಗೆ ಕಡಮೆಯಾಗುತ್ತಿವೆ ಎಂದು ಕಾಣುತ್ತದೆ. ಪೋಲೀಸಿನವರು ಕೂಡ ಹೆಚ್ಚು ಹೆಚ್ಚಾಗಿ ಎಚ್ಚರವಾಗಿ ಇಂಥ ಅಪರಾಧಗಳನ್ನು ಮಾಡತಕ್ಕ ಜನರ ಮೇಲೆ ಕಣ್ಣಿಟ್ಟಿರುತ್ತಾರೆ, ಜನಗಳೂ ಕೂಡ ಎಚ್ಚರವಾಗಿರುತ್ತಾರೆ ಎಂದು ಕಾಣುತ್ತದೆ ನಾವು ಪೋಲೀಸಿನವರಿಂದ ಹೆಚ್ಚು ಕೆಲಸವನ್ನು ನಿರೀಕ್ಷೆ ಮಾಡುತ್ತೇವೆ, ಹೆಚ್ಚು ಕಾಲ ಕೆಲಸವನ್ನು ನಿರೀಕ್ಷಿಸುತ್ತೇವೆ. ಆದರೆ ಅವರಿಗೆ ಕೊಡತಕ್ಕ ಸಂಬಳ ಏನೇನೂ ಸಾಲದು. ಈಗ ಅವರಿಗೆ ಕೊಡತಕ್ಕ ಸಂಬಳದ ಎರಡರಷ್ಟು ಮಾಡಬಹುದು ಎಂದು ಕಾಣುತ್ತದೆ. ಅವನು ಮಾಡತಕ್ಕ ಕೆಲಸ ಶಾರೀರಕವಾಗಿ ಕಠಿಣವಾದದ್ದು. ಅದಕ್ಕೆ ಅವನು ತೆಗೆದುಕೊಳ್ಳತಕ್ಕ ಕಾಲವೂ ಹೆಚ್ಚು. ಆದುದರಿಂದ ನಾವು ಕೊಡತಕ್ಕ ಸಂಬಳದಲ್ಲಿ, ಅವನು ಪಡೆಯತಕ್ಕ ಆಹಾರದಲ್ಲಿ, ಅವನ ಸಂಸಾರವನ್ನು ಕಾಪಾಡಿಕೊಂಡು, ತಾನೂ ಸಹ ಪುಷ್ಟನಾಗಿರುತ್ತಾನೆಯೇ ಎನ್ನುವ ಅನುಮಾನ ಬರುವುದು ಸಹಜವಾಗಿದೆ. ಅದಕ್ಕೋಸ್ಕರವಾಗಿ ಡ್ಯೂಟಿ ಅಲೋವೆನ್ಸ್ ರೂಪದಲ್ಲಿ, ಅಥವಾ ಯಾವುದಾದರೂ ಹೆಸರಿನಲ್ಲಿ ಅವರ ಸಂಬಳವನ್ನು ಹೆಚ್ಚು ಮಾಡಬೇಕು ಎಂದು ನಾನು ಸಲಹೆ ಮಾಡುತ್ತೇನೆ.

ಪಾನನಿರೋಧದ ವಿಷಯವನ್ನು ಜ್ಞಾಪಕ ಮಾಡಿಕೊಳ್ಳದೆ ಇರುವುದಕ್ಕೆ ಸಾಧ್ಯವಿಲ್ಲ. ಹಾಸನ ಜಿಲ್ಲೆಯ ಒಬ್ಬ ಸ್ನೇಹಿತರು ಹೇಳಿದರು, ಪೋಲೀಸ್ ಇಲಾಖೆಯವರು ಪೋಲೀಸ್ ಸ್ಟೇಷನ್ ಪಕ್ಕದಲ್ಲಿಯೇ ಕಳ್ಳಭಟ್ಟಿ ಮಾರುತ್ತಿದ್ದಾರೆ, ಬೇಕಾದರೆ ನಾನು ಹಿಡಿದುಕೊಡುತ್ತೇನೆ ಎಂದು. ಇಂಥದ್ದು ಇದ್ದ ಪಕ್ಷದಲ್ಲಿ ಪೋಲೀಸ್ ಇಲಾಖೆಯ ಅಧಿಕಾರಿಗಳನ್ನು ಮತ್ತು ಅದಕ್ಕೆ ಸಂಬಂಧಪಟ್ಟ ಎಲ್ಲರನ್ನೂ ಬಹಳ ಎಚ್ಚರಿಕೆಯಿಂದ ಪರೀಕ್ಷಿಸಿ ಈ ತರಹ ಆಗದಂತೆ ಮಾಡಬೇಕು. ಇದರಿಂದ ಇಲಾಖೆಗೂ ಕೆಟ್ಟ ಹೆಸರು ತಪ್ಪುವುದಿಲ್ಲ. ಆದಕಾರಣ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಪೋಲೀಸಿನವರು ಎಂದರೆ ಹಿಂದಿನ ಕಾಲದಿಂದಲೂ ಒಂದು ತರಹ ಭಯವಿತ್ತು. ಈಗ ಆ ಭಯ ಕಡಮೆಯಾಗಿದೆ.—ಅವರು ನಮ್ಮ ರಕ್ಷಕರು ಎನ್ನುವ ಭಾವನೆ ಬಂದಿದೆ. ಆದರೆ ಜನಗಳಲ್ಲಿ ಶಿಸ್ತು ಕಡಮೆಯಾಗಿದೆ, ಸತ್ಯದಿಂದ ನಡೆಯಬೇಕು ಎನ್ನುವುದು ಜನಗಳಲ್ಲಿ ಕಡಮೆಯಾಗಿವೆ. ಶಿಸ್ತನ್ನು ಕಾಪಾಡುವುದಕ್ಕೆ ಪೋಲೀಸಿನವರು ಬರಬೇಕಾಗುತ್ತದೆ. ಅಂಥ ಸಂದರ್ಭಗಳಲ್ಲಿ ಅವರಿಗೆ ಹೊಡೆತಗಳು, ಏಟುಗಳು ಬೀಳುತ್ತವೆ. ಅವರಿಗೆ ರಕ್ಷಣೆ ಕೊಡುವುದಕ್ಕೆ ಏರ್ಪಾಡು ಮಾಡಬೇಕು. ಈ ಇಲಾಖೆಯಲ್ಲಿ ಕೆಲಸ ಮಾಡುವವರಿಗೆ ಪ್ರಮೋಷನ್ ಮೊದಲಾದವುಗಳನ್ನು ಸಾಧ್ಯವಾದಷ್ಟು ಮಟ್ಟಿಗೂ ಕೊಡುತ್ತಿದ್ದಾರೆ. ಅವರಿಗೆ ಇನ್ನೂ ಹೆಚ್ಚು ಪ್ರೋತ್ಸಾಹವನ್ನು ಕೊಡಬೇಕೆಂದು ಸಲಹೆ ಮಾಡುತ್ತೇನೆ.

ಎಲ್ಲ ಇಲಾಖೆಗಳಲ್ಲಿಯೂ ಸೇಕಡ 18ರಷ್ಟು ಜಾಗಗಳನ್ನು ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಹೊಸದಾಗಿ ಕೆಲಸಕ್ಕೆ ನೇಮಿಸಿಕೊಳ್ಳುವ ಕಾಲದಲ್ಲಿ ಮತ್ತು ಪ್ರಮೋಷನ್ ಕೊಡುವ ಕಾಲದಲ್ಲಿ ಮೀಸಲಾಗಿಟ್ಟು ಕ್ರಮಪಡಿಸಬೇಕು. ಈ ಹುದ್ದೆಗಳಿಗೆ ಜನರನ್ನು ನೇಮಿಸಿಕೊಳ್ಳುವಾಗ ಜಾಣರಾಗಿರುವಂಥ ಅರ್ಹರಾಗಿರುವ ವ್ಯಕ್ತಿಗಳನ್ನು ನೇಮಿಕೊಳ್ಳಬೇಕು ಮತ್ತು ಅಂಥವರಿಗೆ ಎಸ್.ಎಲ್.ಎಲ್.ಸಿ. ಆದರೂ ಆಗಿರಬೇಕು ಮತ್ತು ಪ್ರಮೋಷನ್ ಕೊಡುವಾಗ ದಕ್ಷತೆ ಇರತಕ್ಕ ಅಧಿಕಾರಿಗಳನ್ನು ಆರಿಸಿ ಅವರಿಗೆ ಪ್ರಮೋಷನ್ ಕೊಡಬೇಕು. ಇದರಲ್ಲಿ ಷೆಡ್ಯೂಲ್ ಕ್ಯಾಸ್ಟ್‌ನವರಿಗೆ ಮೀಸಲಾಗಿಡಬೇಕಾದ ಪ್ರಮಾಣವನ್ನು ಗಮನದಲ್ಲಿಟ್ಟುಕೊಂಡು ನೇಮಕಗಳನ್ನು ಮಾಡಬೇಕು. ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

5-00 P.M.

†ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಅಧ್ಯಕ್ಷರೇ, ಮಾನ್ಯ ಗೃಹಸಚಿವರು ಈ ಸಭೆಯ ಮುಂದೆ ಮಂಡಿಸಿರುವ 12, 13, 41-ಎ ಬೇಡಿಕೆಗಳನ್ನು ನಾನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳಲಿಕ್ಕೆ ಪ್ರಯತ್ನಿಸುತ್ತೇನೆ. ನಾನು ಈ ಬಗ್ಗೆ ಕೆಲವು ಖೋತಾ ನಿರ್ಣಯಗಳನ್ನು ಕೊಟ್ಟಿದ್ದೇನೆ. ಅವುಗಳ ಬಗ್ಗೆ ಸರ್ಕಾರದವರು ಪರಿಶೀಲನೆ ಮಾಡಿ ಏನಾದರೂ ಕ್ರಮ ತೆಗೆದುಕೊಳ್ಳುವುದು ಇದ್ದರೆ ಆ ಕ್ರಮ ತೆಗೆದುಕೊಳ್ಳಬಹುದು ಎಂಬುದಾಗಿ ನಾನು ಈ ಸಂದರ್ಭದಲ್ಲಿ ಸೂಚನೆ ಮಾಡುತ್ತೇನೆ.

ತುರ್ತು ಪರಿಸ್ಥಿತಿ ಮುಗಿದ ತಕ್ಷಣ ಪಂಚಾಯತಿ ರಾಜ್ಯ ವ್ಯವಸ್ಥೆಗೆ ಅನುಕೂಲ ಮಾಡುತ್ತೇವೆಂಬುದಾಗಿ ನಿನ್ನೆ ಒಬ್ಬ ಮಾನ್ಯ ಸಚಿವರು ಈ ಸಭೆಗೆ ಆಶ್ವಾಸನೆಯನ್ನು ಕೊಟ್ಟರು. 1962ರಲ್ಲಿ ಚೀಣಾದವರು ನಮ್ಮ ಮೇಲೆ ಆಕ್ರಮಣ ಮಾಡಿದ್ದರಿಂದ ಲಾಗಾಯಿತು ಈ ದೇಶದಲ್ಲಿ ತುರ್ತುಪರಿಸ್ಥಿತಿ

ಇದೆ. Emergency Clauses ಎಂದು ಏನು ರಾಜ್ಯಾಂಗದಲ್ಲಿವೆ ಇವು ಅತ್ಯಂತ ಗಂಭೀರ ಸ್ಥಿತಿಯಲ್ಲಿ ಈ ದೇಶದ ಮೇಲೆ ಆಕ್ರಮಣವಾದಾಗ ಅದರಲ್ಲೂ ದೇಶದೊಳಗಡೆಯ ಸ್ಥಿತಿಗಳು ಅಲ್ಲೋಲಕಲ್ಲೋಲವಾದಾಗ ರಾಷ್ಟ್ರಾಧ್ಯಕ್ಷರು ಈ ಕಲಂನ್ನು ಜಾರಿಗೆ ತರಬೇಕು, ಅದನ್ನು ಬಹಳ ವಿಚಕ್ಷಣೆಯಿಂದ ಉಪಯೋಗಿಸಬೇಕು ಎಂಬುದಾಗಿ ರಾಜ್ಯಾಂಗದಲ್ಲಿ ನಮೂದಿಸಲ್ಪಟ್ಟಿದೆ. ಆದರೆ ನಮ್ಮ ಕೇಂದ್ರ ಸರ್ಕಾರದವರೂ ಮತ್ತು ರಾಜ್ಯಸರ್ಕಾರದವರೂ ಶ್ರೀಮಾನ್ ದೇವೇಂದ್ರಪ್ಪನವರು ತಿಳಿದುಕೊಂಡಿರುವ ಹಾಗೆ ತಿಳಿದುಕೊಂಡಿದ್ದಾರೋ ಇಲ್ಲವೋ ಎಂದು ನನಗನ್ನಿಸುತ್ತದೆ. ಈ ತರಹ ತುರ್ತುಪರಿಸ್ಥಿತಿ ಎನ್ನುವಂತಹ ಒಂದು ಕ್ಲಾಜು ಅಥವಾ ಒಂದು ರಾಜ್ಯಾಂಗ ವಿಧಿ ಈ ರೀತಿಯಲ್ಲಿ ಜಾರಿಯಲ್ಲಿರುವುದಾದರೆ ಅದರ ಬಗ್ಗೆ ನಮ್ಮ ಆಕ್ಷೇಪಣೆಯೇನೂ ಇಲ್ಲ. ಅದನ್ನು ಸಾಮಾನ್ಯ ಪೋಲೀಸ್ ಆಕ್ಟಾಗಿ ಪ್ರಧಾನಿಯವರೂ, ಕಾನೂನು ಚಲಾಯಿಸುವವರೂ, ರಾಜ್ಯಾಂಗವನ್ನು ರಚಿಸಿರುವವರೂ, ಅದನ್ನು ಜಾರಿಯಲ್ಲಿ ಕೊಡುವ ಹೊಣೆಯನ್ನು ಹೊತ್ತಿರುವವರೂ ಭಾವಿಸಿದ್ದಿದ್ದರೇ ಆದರೆ ಆದರ ಬಗ್ಗೆ ನಮ್ಮ ಅಭ್ಯಂತರವಿಲ್ಲ. ಅದರ ಪರಿಣಾಮ ದೇಶದ ಮೇಲೂ ಮತ್ತು ಆಡಳಿತ ಪಕ್ಷದವರ ಮೇಲೂ ಆಗುತ್ತದೆ. ಆ ವಿಷಯದಲ್ಲಿ ನಾನು ಹೆಚ್ಚಿಗೆ ಹೇಳುವುದಿಲ್ಲ. ಒಂದೇ ಮಾತಿನಲ್ಲಿ ಹೇಳುತ್ತೇನೆ. ಸಾಕಷ್ಟು ಕಾಲ ತುರ್ತುಪರಿಸ್ಥಿತಿಯನ್ನು ನಾವು ಇಟ್ಟುಕೊಂಡಿದ್ದೇವೆ. ಈಗ ಅನ್ನು ಇನ್ನೂ ಜಾರಿಯಲ್ಲಿಡುವುದಕ್ಕೆ ಯಾವ ಸಮರ್ಥನೀಯವಾದ ಕಾರಣಗಳೂ ಇಲ್ಲ. ಆದ ಕಾರಣ ಈ ತುರ್ತುಪರಿಸ್ಥಿತಿಯನ್ನು ಈ ದೇಶದಲ್ಲಿ ತಕ್ಷಣ ಕೊನೆಗಾಣಿಸಬೇಕು. ಡಿ.ಐ.ಆರ್.ನ ದುರುಪಯೋಗ ಬಹಳ ಕಡೆ ನಡೆದಿದೆ. ಅದು ಇನ್ನು ಮುಂದೆ ನಡೆಯದಂತೆ ಸರ್ಕಾರ ಎಚ್ಚರಿಕೆ ವಹಿಸಬೇಕು. ನಮ್ಮ ರಾಜ್ಯದಲ್ಲಿ ಎರಡು ಸ್ಪಷ್ಟವಾದ ಸಂದರ್ಭಗಳಲ್ಲಿ ರಾಜ್ಯಸರ್ಕಾರ ಡಿ.ಐ.ಆರ್. ಕಾನೂನನ್ನು ದುರುಪಯೋಗಪಡಿಸಿತು. ಒಂದು ಪಾವಗಡದ ಶ್ರೀ ನಂಜುಂಡರಾಯರು, ಇನ್ನೊಂದು ಉತ್ತರ ಕರ್ಣಾಟಕದ ಶ್ರೀ ಟಿ. ಕೆ. ಮಹಮ್ಮದ್......

ಶ್ರೀ ಎಂ. ವಿ. ರಾಮರಾವ್.—ಒಂದು ಕೇಸು ಹೈಕೋರ್ಟ್ ಮುಂದೆ ಪೆಂಡಿಂಗ್ ಆಗಿದೆ.

Mr. SPEAKER.—I am aware of it. He simply mentioned the names. Beyond that there was no comment.

ಶ್ರೀ ಎಸ್. ಗೋಪಾಲಗೌಡ.—ಇನ್ನು ಪೋಲೀಸ್ ಖಾತೆಯನ್ನು ಸರ್ಕಾರ ಇದ್ದಕ್ಕಿದ್ದ ಹಾಗೆ ಬದಲಾಯಿಸಿದರು. ಅದನ್ನು ರಾಜ್ಯಾಂಗದ ಪ್ರಕಾರ ಬದಲಾಯಿಸಿದ್ದರೆ ? ಈ ಸಭೆಯಲ್ಲಿ ಇಂತಹ ಮುಖ್ಯ ವಿಷಯದ ಮೇಲೆ ಚರ್ಚೆ ಆಗುತ್ತಿರುವಾಗ ಒಬ್ಬರೇ ಮಂತ್ರಿ ಕುಳಿತರೇ ಸಾಕು, ಎಲ್ಲರೂ ಏತಕ್ಕೆ ಇಲ್ಲಿ ಕುಳಿತಿರಬೇಕು, ಇಲ್ಲಿ ಯಾವ ಮಸೂದೆಯನ್ನು ಇಟ್ಟರೇನು, ಯಾವ ಚರ್ಚೆಯಾದರೇನು, ಉತ್ತರ ಕೊಟ್ಟರೆ ಆಯಿತು ಎಂಬುದಾಗಿ ಅನಾದರಣೆಯನ್ನು ತೋರಿಸುವುದನ್ನು ನೋಡಿದರೆ ಇದು ಇವರ ಒಳ್ಳೆಯದಕ್ಕೋ ಅಥವಾ ಕೆಟ್ಟದ್ದಕ್ಕೋ ನಾನು ಏನೂ ಹೇಳುವುದಕ್ಕಾಗುವುದಿಲ್ಲ.

ಇನ್ನು ಬಡ್ಜೆಟ್ ಎಸ್ಟಿಮೇಟ್ಸ್ 76ನೇ ಪುಟದಲ್ಲಿ ಬಾಗಲಕೋಟೆ ಸಿಮೆಂಟ್ ಕಂಪೆನಿ ಕೇಸಿಗೆ ಸಂಬಂಧವಾಗಿ ಪೋಲೀಸ್ ಇನ್‌ಸ್ಪೆಕ್ಟರ್ ಒಬ್ಬರು, ಸಬ್ ಇನ್‌ಸ್ಪೆಕ್ಟರ್ ಇಬ್ಬರು ಹೆಡ್‌ಕಾನ್‌ಸ್ಟೇಬಲ್ ಮೂವರು ಈ ಸಿಬ್ಬಂದಿ ಖರ್ಚಿಗೆ ಹಣವನ್ನೊದಗಿಸಿದ್ದಾರೆ. ಈ ಕೇಸಿಗೆ ಸಂಬಂಧವಾಗಿ ನಾವು 14,560 ರೂಪಾಯಿಗಳನ್ನು ಈಗ ಮಂಜೂರು ಮಾಡಬೇಕಾಗಿದೆ. ಈ ಸಿಮೆಂಟ್ ಕಂಪೆನಿಯಲ್ಲಿ ಹಣ ದುರುಪಯೋಗವಾಗಿದೆ ಎಂಬುದಾಗಿ ದೂರು ಬಂದ ಮೇಲೆ ರಾಜ್ಯಪೋಲೀಸ್ ಇಲಾಖೆ ತನಿಖೆ ನಡೆಸಿತು. ಕೇಸ್ ಹಾಕಿತು. ನಂತರ ಅದನ್ನು ವಾಪಸು ತೆಗೆದುಕೊಳ್ಳಬೇಕೆಂದು ರಾಜ್ಯಸರ್ಕಾರದ ಮೇಲೆ ಒತ್ತಾಯ ಬಂತು. ಒತ್ತಾಯ ಪ್ರಯತ್ನಗಳೂ ಸಹ ನಡೆಯಿತು. ಆದಾದ ಮೇಲೆ ಯಾರೋ ಒಬ್ಬ ಷೇರುದಾರ ಈ ಆಪಾದನೆ ನ್ಯಾಯವಾಗಿದೆಯೆಂದು ಹೇಳಿದ ಮೇಲೆ ಇವರು ವಾಪಸು ತೆಗೆದುಕೊಂಡಿದ್ದಾರೆಂದು ನಾನು ಕೇಳಿದೆ.

ಶ್ರೀ ಎಂ. ವಿ. ರಾಮರಾವ್.—ಈಗ ಮಾನ್ಯ ಸದಸ್ಯರು ಹೇಳಿದಂತೆ ಆಗಿಲ್ಲ. ಅದಿನೂ ಕೋರ್ಟ್ ಮುಂದೆ ಇದೆಯೆಂದು ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

ಶ್ರೀ ಎಸ್. ಗೋಪಾಲ ಗೌಡ.—ಅದಿನ್ನೂ ಕೋರ್ಟಿನ ಮುಂದಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದ ಮೇಲೆ ಅದನ್ನು ಅಲ್ಲಿಗೇ ಬಿಡುತ್ತೇನೆ. ಇನ್ನೊಂದು ಹೊನ್ನಾವರ ಕೇಸನ್ನು ನಾನು ಈಗ ಹೇಳುವುದಕ್ಕೆ ಇಷ್ಟಪಡುವುದಿಲ್ಲ.

ಇನ್ನೊಂದು ವಿಷಯ, ಇನ್‌ವೆಸ್ಟಿಗೇಷನ್ ಡಿಪಾರ್ಟಮೆಂಟಿನವರು ಫಾರೆನ್ಸಿಕ್ ಲ್ಯಾಬರೇಟರಿಯನ್ನು ತೆರೆಯಬೇಕೆಂದು ತೀರ್ಮಾನವಾಗಿ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ಅದಕ್ಕೆ ಒಬ್ಬ ಡೈರೆಕ್ಟರ್ ಅವರನ್ನು ಆಯ್ಕೆ ಮಾಡಿದ್ದಾರೆ. ಅದರೆ ರಾಜ್ಯಸರ್ಕಾರದವರು ಈ ಆಯ್ಕೆಯನ್ನು ಒಪ್ಪಿಲ್ಲ, ಅದೇನು ಕಾರಣವೋ ಗೊತ್ತಿಲ್ಲ. ಆ ಕೆಲಸ ಅಲ್ಲಿಯೇ ನಿಂತು ಹೋಗಿದೆ.

(ಶ್ರೀ ಎಸ್. ಗೋಪಾಲಗೌಡ)

ಮಾನ್ಯ ಸದಸ್ಯರು ಅನೇಕರು ಈಗಾಗಲೇ ಮಾತನಾಡಿದ್ದಾರೆ. ಕಾಂಗ್ರೆಸ್ ಸದಸ್ಯರು ಸ್ವಾಭಾವಿಕವಾಗಿ ಎಲ್ಲಾ ಚೆನ್ನಾಗಿದೆಯೆಂದು ಹೇಳಿದ್ದಾರೆ. ವಿರೋಧ ಪಕ್ಷದವರು ಎಲ್ಲಾ ಚೆನ್ನಾಗಿಲ್ಲ, ಇನ್ನೂ ಸುಧಾರಣೆಗಳು ಆಗಬೇಕಾದುದು ಬಹಳ ಇವೆಯೆಂದು ಹೇಳಿದ್ದಾರೆ. ಎಲ್ಲಾ ಚೆನ್ನಾಗಿಲ್ಲವೆಂದು ಹೇಳುವವರ ಪೈಕಿ ನಾನೂ ಒಬ್ಬ. ಕೆಲವು ಕಡೆ ತೀರಾ ಕೆಟ್ಟು ಹೋಗಿದೆಯೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಇನ್ನು ಬಂದೀಖಾನೆಗಳ ವಿಷಯ. ಶ್ರೀ ರಾಮರಾವ್ ಮತ್ತು ಶ್ರೀ ನಿಜಲಿಂಗಪ್ಪನವರು ಬಂದೀಖಾನೆಯಿಂದ 1947 ರಿಂದ ಈಚೆಗೆ ಬಂದವರು. ರಾಜಕೀಯ ಖೈದಿಗಳಾಗಿ ಅಲ್ಲಿಗೆ ಹೋದವರು. ಆದರೆ ಶ್ರೀಮಾನ್ ಕೃಷ್ಣಶೆಟ್ಟಿಯವರು, ಶ್ರೀಮತಿ ರತ್ನಮ್ಮ, ಮಾಧವರಾವ್ ಅವರೂ ಸಹ ಆ ರೀತಿ ಜೈಲಿಗೆ ಹೋಗಿದ್ದಾರೆಂದು ಹೇಳಿದರೆ ನಾನು ಒಪ್ಪುವುದಕ್ಕಾಗುವುದಿಲ್ಲ. 1947ರ ನಂತರ ನಾವೆಲ್ಲಾ ಹೋಗಿದ್ದೇವೆ. ಆದರೆ ಬಳ್ಳಾರಿ ಕ್ಷೇತ್ರದ ನನ್ನ ಸ್ನೇಹಿತರು 'as a member', ಹೋಗಿದ್ದೆ, ಹೊಟ್ಟೆ ತುಂಬಿತು ಎಂಬುದಾಗಿ ಹೇಳಿದರು. ಅವರು ಆ ರೀತಿ ಹೇಳಿದ್ದನ್ನು ನೋಡಿದರೆ ಜೈಲಿನಲ್ಲಿ ಏನಾದರೂ ಆ ಸದಸ್ಯರಿಗೆ dinner ಏರ್ಪಾಡು ಮಾಡಿದ್ದರೋ ಏನೋ ನನಗೆ ಗೊತ್ತಿಲ್ಲ. ಜೈಲಿನಲ್ಲಿ ಊಟ ಬಹಳ ಚೆನ್ನಾಗಿದೆಯೆಂದು ಅವರ ಮನೋಧರ್ಮಕ್ಕೆ ತಕ್ಕ ಹಾಗೆ ಮಾತನಾಡಿದ್ದಾರೆ. ಅವರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಿಲ್ಲ. ಆದರೆ ವಾಸ್ತವವಾಗಿ ಮೈಸೂರು ಜೈಲು ಮ್ಯಾನ್ಯುಯಲ್ಲನ್ನು 1870ನೇ ಪ್ರಿಸನ್ಸ್ ಆಕ್ಟನ್ನು ನೋಡಿ ಬರೆದಿರುತ್ತಾರೆ. ಆದರಲ್ಲಿ 1947ರ ತನಕ ತಿದ್ದುಪಡಿಯಾಗಿದೆ. ಇತ್ತೀಚೆಗೇನೋ ಕೆಲವು ಸರ್ಕ್ಯುಲರುಗಳನ್ನು ತಂದಿರಬಹುದು. ಆದರೆ ಈಗ ಕಾಲ ಬಹಳ ಬದಲಾಯಿಸಿದೆ ಕೆಂಪುಬಣ್ಣದ ಯೂರೋಪಿಯನ್ನರ ಬ್ಯಾರೆಕ್ಸ್ ಈಗ demolish ಆಗಿದೆ ಆಗಿನ ಕಾನೂನಿನಲ್ಲಿರುವುದನ್ನು ನಾನು ಹೇಳುತ್ತಿದ್ದೇನೆ. ಸೆಕ್ಷನ್ 328ರಲ್ಲಿ ಈ ರೀತಿ ಹೇಳಿದೆ." 328-Cooks. All cooks shall be caste men. For Brahmin convicts a Brahmin convict cook shall be allotted, If there is only one Brahmin convict he shall be allotted to cook for himself. For European convicts an Indian cook may be allotted." ಇಂತಹದು ಅಲ್ಲಿರುವುದು. ಅದರ ಬಗ್ಗೆ ಜೈಲಿನಲ್ಲಿ ಸ್ವಲ್ಪ ಉತ್ತಮಪಡಿಸುವುದು ಇದೆ. ಶ್ರೀಮಾನ್ ರಾಮರಾವ್ ಅವರು ಬಹಳವಾಗಿ ಹಿಂದೆ ಹೋರಾಟ ಮಾಡಿರುವವರು. ಅವರಿಗೆ ಜೈಲಿನ ವಿಷಯ ಬಹಳ ಚೆನ್ನಾಗಿ ಗೊತ್ತಿದೆ. ಆಗ ಬ್ರಿಟೀಷರ ಆಳ್ವಿಕೆ ಇತ್ತು. ಮಹಾತ್ಮ ಗಾಂಧೀಜಿಯವರು, ಕಸ್ತೂರಿಬಾಯಿ ಅವರು, ನೆಹರೂ ಅವರು ಜೈಲಿಗೆ ಹೋದರು ಎಂದಾಗ ಕೆಲವರಿಗೆ ಬಹಳ ಗಾಬರಿಯಾಯಿತು. ಏಕೆಂದರೆ, ಜೈಲಿನಲ್ಲಿ ಏನು ನಡೆಯುತ್ತದೋ ಎಂದು ಆಶ್ಚರ್ಯ ಪಡುತ್ತಿದ್ದರು. ಹಿಂದೆ ಒಬ್ಬ ಅಪಾದಿತ ಕೊಲೆ ಮಾಡಿದ್ದರೆ ಅವನಿಗೆ ಆಗಿನ ಕಾಲದಲ್ಲಿ ಚರ್ಮವನ್ನು ಸುಲಿಯುತ್ತಿದ್ದರು, ಕಣ್ಣು ಕಿತ್ತು ಹಾಕುತ್ತಿದ್ದರು. ಅಂತಹ ಒಂದು ಅಂಧಕಾರದ ರಾಜ್ಯವಿತ್ತು. ಆದರೆ ಮಹಾತ್ಮ ಗಾಂಧಿಯವರು ಜೈಲಿಗೆ ಹೋದ ಮೇಲೆ ಜೈಲುಗಳೊಳಗೆ ಬೆಳಕು ಬಂದಿತು.

ಅವರನ್ನು ಪ್ರತ್ಯೇಕವಾಗಿ ಇಡಬೇಕು ಎಂದು ಬಂತು. ಅದರ ಮೇಲೆ ಸುಧಾರಣೆ ಆಯಿತು. ಶ್ರೀಮಾನ್ ದೇವೇಂದ್ರಪ್ಪನವರು ಹೇಳಿದ ಹಾಗೆ ಅದು ಚೆನ್ನಾಗಿದೆ. ಉಗ್ರವಾದ ಶಿಕ್ಷೆಯನ್ನು ವಿಧಿಸುವಾಗ ಮಾನವೀಯತೆಯ ದೃಷ್ಟಿಯಿಂದ ಸುಧಾರಣೆ ಆಗಬೇಕು. ಅವನು ಕುಳಿತಲ್ಲಿಯೇ ಕುಳಿತು ಕಾಲಹರಣ ಮಾಡಬಾರದು. ಜೈಲಿನಲ್ಲಿರತಕ್ಕ ಮನುಷ್ಯನ ನಡೆನುಡಿಗಳು ಉತ್ತಮವಾದಾಗ ಅವನು ಜೈಲಿನಿಂದ ಹೊರಗೆ ಹೋಗುತ್ತೇನೆ ಎಂದು ಹೇಳುವುದು ಸ್ವಾಭಾವಿಕ. ಅಪಚಾರ ಮಾಡತಕ್ಕ ಮನುಷ್ಯ ಅಥವಾ ಅಪಚಾರವನ್ನು ಮಾಡಿರುವ ಮನುಷ್ಯ ಸ್ವತಂತ್ರನಾಗಿರುತ್ತಾನೆ. ಅವನು ಜೈಲಿಗೆ ಹೋದಮೇಲೆ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಾನೆ. ಇವೊತ್ತಿನ ಪರಿಸ್ಥಿತಿಯಲ್ಲಿ ಕೇರಳದಲ್ಲಿ ಕೊಡತಕ್ಕ 120 ಗ್ರಾಮುಗಳ ಅಕ್ಕಿಯನ್ನು ಜೈಲಿನಲ್ಲಿ ಕೊಡುವ ಡಯಟ್ಟಿಗೆ ಹೋಲಿಸಿದರೆ, ಹೊರಗಡೆ ಇರತಕ್ಕ ಸಾಮಾನ್ಯ ಜನಗಳಿಗೆ ಸರ್ಕಾರದವರು ಎಷ್ಟು ಔನ್ಸ್ ಆಹಾರವನ್ನು ಒದಗಿಸುತ್ತಾರೆಯೋ ಅದು ಬಂದೀಖಾನೆಗಳಲ್ಲಿ ಕೊಡುವುದಕ್ಕಿಂತ ಕಡಿಮೆಯಾಗಿದ್ದರೆ ಬಂದೀಖಾನೆಯಲ್ಲಿ ಎಷ್ಟು ಔನ್ಸ್ ಆಹಾರವನ್ನು ಕೊಡುತ್ತೀರೋ ಅಷ್ಟು ಆಹಾರವನ್ನು ನಮಗೆ ಕೊಡಿ ಎಂದು ಜನಗಳು ಕೇಳಬಹುದಲ್ಲಾ? ಜೈಲಿನಲ್ಲಿ ಹೋದವನಿಗೆ ಹಣ್ಣು ಕೊಡಿ, ತರಕಾರಿ ಕೊಡಿ ಎಂದು ಹೇಳುವುದು ಸಮಂಜಸವಲ್ಲ. ಆ ದೃಷ್ಟಿಯಿಂದ ನಾನು ಹೇಳುತ್ತಿಲ್ಲ. ಬಡತನಕ್ಕಾಗಿ ಕಳ್ಳತನ ಮಾಡುವುದು ಒಂದು ಇದೆ. ಕಳ್ಳತನದಿಂದ ಸುಲಭವಾಗಿ ಜೀವನೋಪಾಯವಾಗುತ್ತದೆ ಎಂದು ಅದನ್ನೇ ಮುಂದುವರಿಸಿಕೊಂಡು ಬರುವುದು ಒಂದು, ಮತ್ತೊಂದು ಅದೇರೀತಿ ಕಡಿಮೆ ಸಂಬಳ

ಕೊಡುತ್ತಾರೆ ಅದರಿಂದ ಹೆಂಡತಿ ಮಕ್ಕಳನ್ನು ಸಾಕುವುದಕ್ಕಾಗುವುದಿಲ್ಲ ಎಂದು ಅವರ ಹತ್ತಿರ ಇವರ ಹತ್ತಿರ 4 ಆಣೆ 8 ಆಣೆಯನ್ನು ಪಡೆಯುವುದು ಒಂದು ಕ್ರಮ. ಎಷ್ಟೇ ಸಂಬಳ ಕೊಟ್ಟರೂ ಕೂಡ ಅದನ್ನೂ ಉಪಯೋಗಿಸಿಕೊಂಡು ಏತಕ್ಕೆ ಇನ್ನೊಂದು ನಾಲ್ಕು ಲಕ್ಷವೋ 4 ಕೋಟಿಯೋ ಸಂಪಾದನೆ ಮಾಡಿಕೊಳ್ಳಬಾರದು ಎನ್ನುವ ಇನ್ನೊಂದು ಕ್ರಮ. ಈ ಮಾನಸಿಕ ದೃಷ್ಟಿಕೋಣ ಬದಲಾವಣೆ ಆಗಬೇಕು. ಅಧಿಕಾರ ವರ್ಗದವರು ಭ್ರಷ್ಟಾಚಾರದಿಂದ ದೂರ ಇರಬೇಕು. ದೊಡ್ಡ ಆಫೀಸರು ಭ್ರಷ್ಟಾಚಾರದಿಂದ ದೂರ ಇರಬೇಕು. ಆಗ ಉನ್ನತ ಮಟ್ಟದಲ್ಲಿ ಭ್ರಷ್ಟಾಚಾರ ನಿವಾರಣೆ ಆದರೆ ಕ್ರಮೇಣ ಕೆಳಮಟ್ಟವೂ ಸರಿಹೋಗಬಹುದು. ಆಗ ನಮ್ಮ ಮೂಲಭೂತವಾದ ಉದ್ದೇಶ ಏನಿದೆ ಅದು ಈಡೇರುತ್ತದೆ. ಈಗ ಮೊನ್ನೆ ಒಬ್ಬ ಸಬ್‌ಇನ್ಸ್‌ಪೆಕ್ಟರಿಗೆ ಶಿಕ್ಷೆಯನ್ನು ವಿಧಿಸಿದರು. ಅದು ಸರಿ. ಯಾರಿಗೆ ಶಿಕ್ಷೆ ಆಗಬೇಕೋ ಅವರಿಗೆ ಉಗ್ರ ಶಿಕ್ಷೆ ಆಗಬೇಕು. ಅಂಥವರಿಗೆ ಕಡಿಮೆ ಮಾಡಬಾರದು. ಪ್ರಮೇಯ ಬಂದರೆ ಶಿಕ್ಷೆಯನ್ನು ಕಡಿಮೆ ಮಾಡುವುದಿಲ್ಲ ಎಂದು ಹೇಳಬಾರದು.

ಕಾನೂನನ್ನು ಪರಿಪಾಲನೆ ಮಾಡುವಾಗ ಪ್ರಾಮಾಣಿಕತೆಯಿಂದ ಮಾಡಬೇಕು. ನಾವು ಎಷ್ಟೋ ಕಾನೂನುಗಳನ್ನು ಮಾಡುತ್ತೇವೆ. ಆದರೆ ಅವುಗಳನ್ನು ಪರಿಪಾಲನೆ ಮಾಡುವಾಗ ಮುಖ್ಯವಾದ ನಮ್ಮ ಉದ್ದೇಶಗಳು ಸಾರ್ಥಕವಾಗಿವೆ ಎಂದು ಹೇಳುವುದಕ್ಕಾಗುವುದಿಲ್ಲ. ಅವು ಇನ್ನೂ ಸುಧಾರಣೆ ಆಗಬೇಕು. ಈ ದೃಷ್ಟಿಯಿಂದ ಜೈಲಿನಲ್ಲಿ ಆಹಾರದ ವ್ಯವಸ್ಥೆ ಸುಧಾರಣೆ ಆಗ ಬೇಕು. ಕೆಲಸ ಮಾಡುವ ಖೈದಿಗೆ ಹೆಚ್ಚಿನ ಕೂಲಿ ಕೊಡಬೇಕು. ಹೆಚ್ಚಿನ ಸೌಲಭ್ಯಗಳನ್ನು ಕೊಡಬೇಕು. ಮತ್ತು ಜೀವಾವಧಿ ಶಿಕ್ಷೆಗೆ ಒಳಗಾದವರಿಗೆ ಕ್ರಮವಾದ ರೆಕಾರ್ಡುಗಳನ್ನು ಇಟ್ಟು ಅವನ ನಡತೆ, ನೀತಿ ಸಾಕಷ್ಟು ಸುಧಾರಣೆಯಾಗಿದೆಯೋ ಎಂಬುದನ್ನು ಮನದಟ್ಟು ಮಾಡಿಕೊಂಡು ಅದರ ಸ್ಥಿತಿಯನ್ನು ಅಧಿಕಾರಿಗಳು ಆಗಿಂದಾಗ್ಯೆ ರಿವ್ಯೂ ಮಾಡಿ ಅವರುಗಳನ್ನು ಬಿಡುಗಡೆ ಮಾಡು ವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಹೆಚ್ಚು ಕಾಲಾವಕಾಶ ಇಲ್ಲದೆ ಇರುವುದರಿಂದ ನಾನು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಸ್ವಾಮಿ, ಪೋಲೀಸಿನವರಿಗೆ ಸಂಬಳವನ್ನು ಜಾಸ್ತಿ ಮಾಡ ಬೇಕು. ಅವರಿಗೆ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಈಗ ಪೋಲೀಸಿನವರಿಗೆ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ 4 ಲಕ್ಷ 5 ಲಕ್ಷ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡುತ್ತಾರೆ. ಒಟ್ಟಿಗೆ ಎಲ್ಲಾ ಕಟ್ಟಡಗಳಿಗೂ ಒಂದೇ ಟೆಂಡರ್ ಕರೆಯುತ್ತಾರೆ. ಇದರಿಂದ ಪೋಲೀಸು ಇಲಾಖೆಗೆ 20–30 ಪರ್ಸೆಂಟ್ ಅನ್ಯಾಯದಾಗಿ ಖರ್ಚಾಗುತ್ತದೆ. ಇಂಡಿವಿಜಿಯಲ್ ಆಗಿ ಒಂದೊಂದು ಬಿಲ್ಡಿಂಗಿಗೇ ಟೆಂಡರನ್ನು ಕರೆಯುವುದರಿಂದ 20-30 ಪರ್ಸೆಂಟ್ ಹಣ ಉಳಿತಾಯವಾಗುತ್ತದೆ. ಆ ಹಣವನ್ನು ಉಪಯೋಗಿಸಿಕೊಂಡು ಪೋಲೀಸಿನವರಿಗೆ ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸಿ ಕೊಡುವುದಕ್ಕೆ ಅನುಕೂಲವಾಗುತ್ತದೆ. ಪೋಲೀಸಿನವರ ಸಂಬಳವನ್ನು ಜಾಸ್ತಿ ಮಾಡಿದರೆ ಅವರ ನೈತಿಕ ಮಟ್ಟ ಉತ್ತಮವಾಗುತ್ತದೆ. ಈ ವಿಷಯಗಳನ್ನು ನಾನು ಹಿಂದೆ ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಆದರೆ ಅವುಗಳು ಇನ್ನೂ ಕಾರ್ಯಗತವಾಗಿಲ್ಲ. ಪೋಲೀಸಿನವರ ಸಂಖ್ಯೆ ಕಡಿಮೆ ಇದೆ. ಈಗ ದೇಶದಲ್ಲಿ ಅನೇಕ ಕೊಲೆಗಳು, ದರೋಡೆಗಳು ಹೆಚ್ಚಾಗಿ ನಡೆಯುತ್ತವೆ ಎಂದು ಮಂತ್ರಿಗಳು ಮತ್ತು ರಾಜ್ಯಪಾಲರು ಸಂಚಾರ ಮಾಡುವಾಗ ಅವರ ಜೊತೆಯಲ್ಲಿ ಜಾಸ್ತಿ ಜನ ಪೋಲೀಸಿನವರು ಅವರ ಸುತ್ತಲೂ ಇರುತ್ತಾರೆ. ಇವರು ಜನಾನುರಾಗಿ ಗಳು, ಜನಗಳ ಸಂಪರ್ಕ ಇವರಿಗೆ ಹೆಚ್ಚಿಗೆ ಇದ್ದರೆ, ಇವರು ಪೋಲೀಸಿನವರ ಮಧ್ಯೆ ತಿರುಗಾಡುವುದಕ್ಕೆ ಏನು ಅಪರಾಧ ಮಾಡಿದ್ದಾರೆ ಎಂಬುದನ್ನು ಬಹಿರಂಗ ಪಡಿಸಬೇಕು ಎಂದು ನಾನು ಕೇಳುತ್ತೇನೆ. ಮಂತ್ರಿಗಳು ಮತ್ತು ರಾಜ್ಯಪಾಲರುಗಳ ಪಕ್ಕದಲ್ಲಿ ಪೋಲೀ ಸಿನವರು ಎರಡೆರಡು ಗನ್ನುಗಳನ್ನು ಇಟ್ಟುಕೊಂಡು, ಹೆಚ್ಚಿಗೆ ಸುತ್ತಲೂ ಪೋಲೀಸಿನವರನ್ನು ಇಟ್ಟು ಕೊಂಡು ಸಂಚಾರ ಬರುತ್ತಾರೆ. ಇದನ್ನು ನೋಡಿದರೆ ಇವರು ಸಾಮಾನ್ಯ ಜನಗಳ ಕಷ್ಟ ಸುಖ ಗಳನ್ನು ತಿಳಿದುಕೊಳ್ಳುವುದಕ್ಕೆ ಪೋಲೀಸಿನವರ ನೆರವನ್ನು ಪಡೆಯುತ್ತಾರೆ ಎಂದು ಕಾಣುತ್ತದೆ. ಅರಸೀಕೆರೆ ತಾಲ್ಲೂಕಿನಲ್ಲಿ ಈ ವರ್ಷ ಸುಮಾರು 22 ಖೂನಿ ಕೇಸುಗಳು ಆಗಿವೆ. ಅವುಗಳ ಪೈಕಿ 8-10 ಕೇಸುಗಳು ಪತ್ತೆ ಆಗಿಲ್ಲ. ತಿಪಟೂರಿನಲ್ಲಿ 5–6 ದರೋಡೆ ಕೇಸುಗಳು ಪತ್ತೆ ಆಗಿಲ್ಲ. ನಮ್ಮ ಊರಿನ ಪಕ್ಕದಲ್ಲಿರುವ ಅಗ್ಗುಂದ ಎನ್ನುವ ಊರಿನಲ್ಲಿ ಕೊಲೆ ನಡೆದಿದೆ. ಈ ರೀತಿ ದೇಶದಲ್ಲಿ ಕೊಲೆಗಳು ಆಗಬೇಕಾಗಿದ್ದರೆ ನಿಜವಾಗಿ ಪೋಲೀಸಿನವರು ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವ ಹಣೆ ಮಾಡುತ್ತಿದ್ದಾರೆಯೇ ಎಂದು ಕೇಳಬೇಕಾಗಿದೆ. ಅನೇಕ ಕೇಸುಗಳಲ್ಲಿ ಯಾರು ಮರ್ಡರ್ ಮಾಡಿದ್ದಾರೆಯೋ ಆ ಅಸಾಮಿಗಳನ್ನು ಬಿಟ್ಟು ಬೇರೆಯವರ ಮೇಲೆ ಕೇಸು ಹಾಕಿದ್ದಾರೆ. ಈ ಸಭೆ ಯಲ್ಲಿ ನಾವು ಅನೇಕ ಕಾನೂನುಗಳನ್ನು ಮಾಡುತ್ತೇವೆ. ನಮ್ಮ ದೇಶದ ಕಾನೂನುಗಳನ್ನು ಸರಿ

(ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ)

ಯಾಗಿ ಪರಿಪಾಲನೆ ಮಾಡಬೇಕಾದರೆ ಸಾಧ್ಯವಾದ ಮಟ್ಟಿಗೆ ಪೋಲೀಸು ಇಲಾಖೆ ಉತ್ತಮವಾಗ ಬೇಕು. ಬೆರಿಕೆ ಪದಾರ್ಥಗಳನ್ನು ಮಾರಾಟ ಮಾಡಕೂಡದು ಎಂದು ಕಾನೂನು ಬದ್ಧವಾಗಿ ಸರ್ಕಾರ ಮಾಡಬೇಕು. ಯಾವ ಔಷಧಿಯನ್ನೇ ತೆಗೆದುಕೊಳ್ಳಿ ಅಥವಾ ಇನ್ನು ಯಾವುದಾದರೂ ಒಂದು ಪದಾರ್ಥ ತೆಗೆದುಕೊಳ್ಳಿ ಬೆರಕೆ ಆಗಿರುತ್ತದೆ. ಫೇರ್‌ಪ್ರೈಸ್ ಡಿಪೋ ತೆಗೆದುಕೊಳ್ಳಿ, ಅಲ್ಲಿ ಸರ್ಕಾರದಿಂದ ಸಪ್ಲೈ ಆಗತಕ್ಕ ಗೋಧಿಯನ್ನ ನೋಡಿ ಅದರಲ್ಲಿ ಕಲ್ಲು ಮ್ಯಾಂಗನೀಸ್ ಅನ್ನು ಬೆರೆಸಿ ರುತ್ತಾರೆ. ಸರ್ಕಾರದವರು ಸಪ್ಲೈ ಮಾಡಿರತಕ್ಕ ಗೋಧಿಯಲ್ಲಿ ಎಷ್ಟು ಕಲ್ಲು ಮ್ಯಾಂಗನೀಸನ್ನು ಬೆರೆಸಿದ್ದಾರೆ ಎನ್ನುವುದಕ್ಕೆ ಸ್ವಲ್ಪ ಸ್ಯಾಂಪಲ್ ತಂದಿದ್ದೇನೆ. (ಸದಸ್ಯರು ಬೆರಕೆಗೆ ನಿದರ್ಶನವಾಗಿ ಒಂದು ಪ್ಲಾಸ್ಟಿಕ್ ಚೀಲದಲ್ಲ ಹಾಕಿದ್ದ ಗೋಧಿಯನ್ನು ಎತ್ತಿ ತೋರಿಸಿದರು) ಇದನ್ನು ಮಾನ್ಯ ಅಧ್ಯಕ್ಷರಿಗೆ ಕಳುಹಿಸಿಕೊಡುತ್ತೇನೆ. ಇದರಲ್ಲಿ ಎಷ್ಟು ಕಲ್ಲು ಮತ್ತು ಮ್ಯಾಂಗನೀಸ್ ಅದುರು ಇದೆ ಎಂಬುದನ್ನು ತಾವು ಪರೀಲನೆ ಮಾಡಿ. ಲೈಸೆನ್ಸ್ ಡಿಪೋದಲ್ಲಿ ಈ ರೀತಿಯಾಗಿ ಕಲ್ಲು ಮತ್ತು ಮ್ಯಾಂಗ ನೀಸನ್ನು ಬೆರೆಸಿದ ಗೋಧಿಯನ್ನು ಮಾರಾಟ ಮಾಡಬೇಕಾದರೆ ಪೋಲೀಸು ಇಲಾಖೆ ಇದೆಯೇ ಎಂದು ಕೇಳಬೇಕಾಗುತ್ತದೆ. ನಮ್ಮ ದೇಶದಲ್ಲಿ ಇಷ್ಟೊಂದು ಕೊಲೆಗಳು ಮತ್ತು ದರೋಡೆಗಳು ನಡೆಯು ಬೇಕಾದರೆ ಜನಗಳನ್ನು ರಕ್ಷಣೆ ಮಾಡುವವರು ಯಾರು ? ಪೋಲೀಸಿನವರು ಏನಿದ್ದರೂ ಲಾರಿ ಬಸ್‌ಗಳನ್ನು ಹಿಡಿಯುತ್ತಾರೆ. ಕಳ್ಳಭಟ್ಟಿ ಸಾರಾಯಿ ತಯಾರಿಸುವುದನ್ನು ನೋಡುತ್ತಾರೆ. ಆದರೆ ಆಹಾರ ಧಾನ್ಯಗಳಿಗೆ ಬೆರಕೆ ಹಾಕುವವರ ಕಡೆ ಅವರು ಗಮನ ಕೊಡುವುದಿಲ್ಲ. ಸೊಸೈಟಿಗಳ ಹಂಚುವ ಧಾನ್ಯದಲ್ಲಿ ಕೂಡ ಬೆರಕೆ ಇರುತ್ತದೆ. ಬೇಕಾದರೆ ತಮಗೆ ಸೊಸೈಟಿಯ ಹೆಸರನ್ನೂ ಕೊಡುತ್ತೇನೆ. ಯಾವ ಲೈಸನ್ಸು ಅಂಗಡಿಯಿಂದ ಈ ಗೋಧಿ ತಂದದ್ದು ಎನ್ನುವುದನ್ನು ಹೇಳುತ್ತೇನೆ. ಸರಕಾರದಿಂದ ಲೈಸನ್ಸ್ ಪಡೆದ ಸೊಸೈಟಿಯಲ್ಲಿ ಜನಕ್ಕೆ ಕೊಡುತ್ತಿರುವ ಈ ಗೋಧಿಯಲ್ಲಿ (ಮಾನ್ಯ ಸದಸ್ಯರು ತೋರಿಸುತ್ತಾ) ಎಷ್ಟು ಮಿನರಲ್‌ಗಳು ಎಂದರೆ ಐರನ್ ಓರ್ ಎಷ್ಟಿದೆ ಮತ್ತು ಎಷ್ಟು ಕಲ್ಲು ಮಣ್ಣುಗಳಿವೆ ಎನ್ನುವುದನ್ನು ಯಾರಾದರೂ ಈ ಇಲಾಖೆಯಲ್ಲಿನ ಅಧಿಕಾರಿಗಳು ಹೋಗಿ ತನಿಖೆ ಮಾಡಿಕೊಂಡು ಬಂದಿದ್ದಾರೆಯೇ ಎಂದರೆ, ಯಾರೂ ಹೋಗಿಲ್ಲ. ಹೋಗಿದ್ದರೆ ಒಂದು ಕೆ.ಜಿ. ಗೋಧಿ ಯಲ್ಲಿ ಎಷ್ಟು ಪ್ರಮಾಣದಲ್ಲಿ ಮಣ್ಣು ಕಲ್ಲು ಹಾಗೂ ಕಬ್ಬಿಣದ ಅದಿರಿನ ಚೂರುಗಳು ಸಿಗುತ್ತದೆ ಎನ್ನು ವುದನ್ನು ನೋಡಲು ಪೋಲೀಸು ಖಾತೆಯವರೇನಾದರೂ ಸುವ್ಯವಸ್ಥೆಯಿಂದ ಕೆಲಸ ಮಾಡುತ್ತಿ ದ್ದಾರೆಯೇ ಎನ್ನುವುದನ್ನು ಮಾನ್ಯ ಸರಕಾರದವರು ಇಲ್ಲಿ ತಿಳಿಸಬೇಕು, ಮತ್ತು ಪೋಲೀಸು ಇಲಾಖೆ ಯಲ್ಲಿ ಸುವ್ಯವಸ್ಥೆಯಿಂದ ಕೆಲಸ ಮಾಡಲು ವ್ಯವಸ್ಥೆ ಮಾಡದೇ ಇದ್ದರೆ ಅದನ್ನು ಮುಂದಕ್ಕೆ ತರಲು ಸಾಧ್ಯವೇ ಇಲ್ಲ.

ಇಷ್ಟು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

[MR. DEPUTY SPEAKER in the Chair]

†Sri M. V. RAMA RAO —Sir, I must appreciate the tone as well as the temper of the debate that has taken place on the Demands which I have put before the House earlier to-day. Hon'ble Members who have taken part in this debate have made very useful criticism of the administration of the departments to which these Demands pertain. They have been so good as to make certain suggestions for the improvement of the administration and they have not been sparing in their criticism of what they considered to be the short-comings and the defects in the administration. For all this, I must express not merely my appreciation but also my gratitude to the Hon'ble Members.

In making my reply to all that has been said during this debate, I shall take firstly the Demand pertaining to Jails. It has been said in respect of Jail administration that there has been no real improvement or progress in the administration of the jails. This, I should say, is an unkind criticism. Hon'ble Members, who, along with me and many

other of my collegues, have been inmates of the jails in the erstwhile State of Mysore can never forget what the conditions were like, when we happened to be prisoners in those days.

ಶ್ರೀ ಎಸ್. ಗೋಪಾಲ ಗೌಡ.—1942 ನೇ ಇಸವಿಯಲ್ಲಿ ಬಕೆಟ್ಟುಗಳಲ್ಲಿ ಜೈಲಿನಲ್ಲಿ ತುಪ್ಪ ತುಂಬುತ್ತಿದ್ದುದನ್ನೂ ಸ್ವಲ್ಪ ಇಲ್ಲಿ ಹೇಳಿ.

Sri M. V. RAMA RAO.—Sri Gopala Gowda knows what the conditions were like not merely in one jail but in several jails. I had not had the privilege of being with him on all the occasions, but during one fairly long sojourn in the jail in the forties, we have had occasion to see what spirit guided those who were in charge of jail administration in those days. I am happy to be able to assure the hon'ble Members that that spirit has departed from the administration of the jails I do not claim that jail administration is incapable of further improvement. No. responsible person holding office would be able to make a claim such as that. There must be scope, I should say, considerable scope—for further improvement in the administration and management of jails. To the extent towhich these improvements could be effected within the time and the resources available to us as those in charge of the Government to-day, this scope will be examined and such steps as can be taken to effect tangible improvements in the conditions of those who have the misfortune to go into jails, those improvements will be effected.

A reference was made to the quality and quantity of the food supplied to those who are lodged in the different jails. Hon'ble Member Sri Krishna Shetty made particular reference to the fact that while non-vegetarian articles of food are provided in many of the jails, it is not provided in the sub-jail at Mangalore. This appears to be a fact and the only reason for it that I can put forth is, that that jail still follows the rules contained in the Madras Jail Manual and in that Jail Manual this allowance of non-vegetarian food is not provided, perhaps. This really now raises the question of why we do not have a common Jail Mannual which will be applicable to the administration of all the jails in the State. Hon'ble Members will remember that uniform legislatiore in respect of prisons has been already effected by the State segislatuen some time ago and the preparation of a uniform Jail Manual has been undertaken and is well under progress and I expect that that work should be completed in a reasonably early time. As soon as that Manual is ready, these disparities that seem to cause a certain amount of inconvenience, will be removed.

There was one other unhappy reference that the Hon'ble Member Sri Krishna Shetty chose to make and that was that collections made from the inmates of the prisons towards the National Defence Fund, were not collections of voluntary offers of money made and that these collections were made under, what he seems to suggest, duress sometimes The Hon'ble Member is not present in the seat at present, but I would like to assure him, though he had some hesitation in mentioning particulars on the floor of the House and whatever may be the reasons

(SRI M. V. RAMA RAO)

for the hesitation, that if he is able to furnish to me any instance within his knowledge where an unwilling prisoner was required to make a contribution towards the National Defence Fund or towards any other fund, I shall deal with it as it should be dealt with. Sir, I should like to inform Hon'ble Members that the contribution which has been made by the prisoners of different jails towards the National Defence Fund has been, in so far as I have understood it by personal visit to the jail for receiving this collection in person, made from willing prisoners and to the best of my knowledge and belief, I have found that these offers were purely voluntary and have been motivated by the same spirit which has actuated Hon'ble Members of this and the other House to make voluntary and periodical recurring contributions to the National Defence Fund.

5-30 P.M.

In the month of November I had the opportunity of paying a visit to the Gulbarga Prison and a considerable sum of money, if I remember aright well over Rs. 9,000, had been collected from the inmates of the Jail which was made over and paid over as a contribution of the prisoners to the National Defence Fund. Subsequent to that on the 26th January this year I had the opportunity of going to the Central Jail in Bangalore to receive a much larger sum of money than that. I do not now recollect the exact sum, but it must have been well over Rs. 15,000. That sum had been collected from the different prisoners from out of the wages which were payable to them, a part of which they had willingly forgone, as well as from contributions made out of the other monies to which they were entitled and which were in deposit with the Jail authorities. One prisoner was chosen to present this purse. I understood that that prisoner had made payment of the entire sum of money which he had earned by way of wages during the whole of the year amounting to over Rs. 111. I could not withhold my appreciation of his conduct, so exemplary and so full of the same spirit of patriotism and national unity which we also ardently desire. I found that this contribution had been made in many other ways which deserve our appreciation. For instance, these prisoners had voluntary given up one meal every week. I do not remember the particular day of the week on which this one meal had been given up by them. It must have been different days of the week during different periods. Whatever that may be, one meal per week amounting in the aggregate to 2 days in a month they had forgone their rations voluntarily and willingly and without any duress or pressure from the jail authorities and had asked that the money equivalent of the rations which they had forgone should be contributed as their donation to the National Defence Fund. I am sure hon'ble members will not withhold their appreciation of this gesture of the inmates of the Central Jail in Bangalore for their contribution in this manner.

One other matter which was made in regard to jail administration was in respect of amenities provided to political prisoners as they have been called. It is rather difficult to give a connotation of what exactly is meant by the expression political prisoner. When I and other friends including Sri S. Gopal Gowda were taken into detention under the Defence of India, Rules in 1942 and in 1947 we claimed to be political prisoners and the then administration claimed that they were treating us as such. Nevertheless we found that the treatment given to us in those days was not very much better than the treatment or facilities afforded to convict prisoners. It is true that by asserting what we felt were to be our right as prisners, inside the jail we were able to secure some amount of humane treatment from the hands of those in authority at the time. But to assert today that those same conditions persist in any of our jails in the matter of the treatment of prisoners who have not committed any offence under the Indian Penal Code or other penal statutes is to make a claim that is not only not reasonable but is wholly without foundation. I can assure the hon'ble members of this House that the conditions under which those who have been taken into detention under the Defence of India Rules in our State, compare most favourably with the conditions of detention have been made by any other State in the Indian Union including Kerala to which reference was pointedly invited by the hon'ble member Sri Krishna Shetty. The fact of the matter is that, if I remember aright, Sri Krishna Shetty who had been in detention some time before was released on the 30th June 1965, and the conditions of detention order which had been issued by the Government of Mysore in the year 1963 and which governed conditions of detention of those who were taken and put in prison under the Defence of India Rules were modified in very many particulars after considerable examination of the import of those conditions. I had the advantage as well as the assistance of several hon'ble members who were interested in thesese matters including the hon'ble member of the upper House Sri M. C. Narasimhan and some of his other colleagues. He was so good as to come with those other friends of his and to suggest to me what actually required to be modified in those conditions of detention in order to make those conditions as much as possible agreeable and so far as possible free from avoidable hardship to those kept in detention. I am happy to be able to assure the hon'ble members of this House that every possible revision and modification has been made in the conditions of detention order and it has been re-issued as Conditions of Detention Order, 1965. Even after it was issued in August 1965 we have had occasion to make further modifications in them once or twice and the essence of these modifications today is that a person who is taken to detention and put in prison under the Defence of India Rules is classified according to the social status which belongs to him in his own right when he was a free person either into Class I or Class II and suitable arrangements have been made for providing adequate diet, provisions, clothing, medical attention and other facilities which any civilized government should certainly not refuse to prisoners who are put in jails.

(SRI M. V. RAMA RAO)

The provision of sanctioning and giving family allowance to the dependents of those who have been taken into detention has also been made and I can tell this House that there is not a single case of application for the grant of family allowance which I have had occasion to refuse. Every person who applied for the grant of family allowance to his dependents has had his application granted and in addition this provision has also been made for a small monetary allowance te provide for the purchase of articles of personal necessity like toilet articles to every detenu. While it would be improper for me to assert that these conditions will make any detenu happy, I should hesitate to make that assertion because freedom is a priceless possession and any person who has had the misfortune to be deprived of his personal liberty and to suffer the misfortune of being put in prison can never feel happly except when he is released from prison. I know it from personal experience and it is difficult for me to reconcile myself to the position of having to exercise authority which requires me to keep people in detention without proper cause.

I should on this occasion explain to the House that they shoutd take my assurance that not a single person has been taken into detention without lawful cause and even in those cleven cases in which the High Court have quashed the order of detention the grounds on which the orders of detention have been quashed should be appreciated by the Hon'ble Members. In several cases, the order of detention had been made by the officer designating himself as the Additional District Magistrate and the High Court have held that the power to take and keep a person in detention has been delegated by the Government to the Deputy Commissioner and not to the Additional District Magistrate and although the same officer may hold and possess the office and the designation of Deputy Commissioner as weel as Additional District Magistrate, the fact that this authority has been delngated to the Deputy Commissioner but that it has been purpurted to have been exercised by the Additional Magistrate was considered by the High Court as a ground for quashing the order of detention in these cases. We have taken no exception to it. We have considered those cases and where Government thought that further detention of a person whose detention order was so quashed by the High Court was considered necessary by the Government, fresh orders of detention by the proper authority suitably designated have been made and where further detention was not considered necessary, no further action has been taken in those cases. The High Court took the view in one case that the manner in which the order of detention had been worded by the authority who made the order indicated to the High Court that the detaining authority could not have satisfy himself that it was necessary with a view to prevent the person from acting in a manner prejudicial to the dfence of India and so on and so forth. The High Court felt that the manner in which the order had been worded indicated to them that

the authority could not satisfied himself that the detention was necessary and so quashed that order. I should like to express on this occasion on the floor of the House that the High Court was right. I have satisfied myself that that order of detention should not have been made. It was perfectly right and I hope the High Court in our State will never hesitate to strike down an order of detention whenever they think that it has been improperly made. In no other manner the liberty of the citizen can be safeguarded. In a number of cases, probaly 6 or 7, the High Court quashed the order of detention on the ground that the original order had not been reviewed as required by the rules within the period of six months from the date of the order of detention. These, in fact, are the grounds on which in 11 cases the High Court quashed the order of detention. The Hon'ble Members will appreciate that consequent upon the proclamation of emergency which is still in force and the consequent curtailement to a certain extent of the fundamental rights which the Constitution guarantees to the citizens of this country, no judicial review of the grounds of detention is permissible. Nevertheless, cases do go before the High by way of writ petititons or Habeas Corpus petitions challenging the propriety or the legality of the detention orders made in particular cases. Since the scope for judicial review is so restricted, it has latterly become common for certain persons to get affidavits filed before the High Court in suppart of such petitions alleging malafides in respect of the detaining authority whether it is the District Magistrate or any other authority.

SRI K. LAKKAPPA (Hebbur).—Is it the opinion of the Hon'ble Minister that the judiciary has exceeded their authority in reviewing the cases under the D. I. R. ?

SRI M. V. RAMA RAO.—I expressed no opinion of that kind and I am sure the Hon'ble Member his no reason to misunderstand me in that respect because I have been using my words with care and without giving any offence to any Hon'ble Member, whatever may be his opinions. Having regard to the fact that the seope for judicial review is so restricted in these cases of detention, the greater is the moral as well as the administrative responsibility on the Government for satisfying itself that no person is detained without trial and without justification. Let me assure the Hon'ble Members of this House that I should feel thoroughly ashamed of myself if as the Minister in charge of the Home Affairs I should be responsible for detaining any person without trial because he does not like me or I do not like him. Let me assure Hon'ble Members that no such cases have occurred or would occur. I would not like to remain in position if any citizen is detained because he is my political opponent. Hon'ble Members opposite are my political opponents and it is a fact that all of them are here. Even Mr. Krishna Shetty who was in detention was released when the Home Portfolion was assigned to me by the Chief Minister. I would not be right, I should say on this oceasion, to claim the status of political opponent for a person who has been detained without reference to the facts of that

(SRI M. V. RAMA RAO)

case and the facts of that case are within our knowledge; they are not within the knowledge of Hon'ble Members and public interest forbids the disclosure of the information which justifies the detention in a particular case. Whoever may hold the portfolio of Home Minister including those have been most critical of the administration of the Defence of India Rules, I may assure them they will do nothing different.

Having said so much about this, I would like to say a few words about the matters pertaining to Prisons and Detention. I would like to inform the House that the nnmber of persons taken into detention during the period of emergency in our State compares most favourably with the numbers in any other State in the Indian Union. I may, however, tell the Hon'ble Members that the total number of persons in detention since 1962 has not reached even 100 and to-day the members, I hope, will be gratified to note that the total number of persons in detention is less than 30. It is perhaps 27 or 28 and of these I believe 10 persons are on parole and they are outside the Prison. The net total number of persons that are actually in Prison is perhaps 17 or 18 and each one of those 17 is under constant review. The Government is not anxious to keep any person in Prison unless public interest, national security or any other similar considerations justify such detention.

Having said this, I would like to refer to what has been said in regard to the administration of the Police Department. The Hon'ble Members have been forthright in expressing opinion that the Constabulary in Police Force is not properly paid. There have been periodical increases in the scale of pay given to the Constables in our State. Having regard to the prevailing prices and the fact that the Police Constable like any other human beings has family to support, we should, I think, sympathise with him in his plight as one charged with the very onerous task of maintaining law and order and helping the Government in the enforcement of all statutes including the Prohibition Act. He has many tasks to perform. Not merely the Constable is doing this but every individual in the Police Force from the Inspector General of Police downwards is doing this. So far as character and integrity of the Police Officials are concerned, I may be permitted to tell one or two words. Some Police Officials have succumbed to even environmental influences and are tempted to accept gratification for doing some improper things. I don't want to sympathise with them and assure the Hon'ble members that no consideration will prevent me in dealing with those against whom such charges are made. If you think that you may take me into confidence, I shall spare no efforts to take suitable action against erring or corrupt officials. The quality of recruitment to the Police Force is a matter to which Hon'ble members referred. While I am in complete agreement with them that we should endeavour to recruit persons with sufficient educational qualifications and from

respectable strata of Society to hold the posts in the Police Force, I would like to tell the Hon'ble members that it is extremely difficult to get suitably educated and otherwise suitable candidates for recruitment to the Police Force. We are endeavouring our best to recruit the best personnel to the posts of Constables and Sub-Inspectors. We are endeavouring our utmost to recruit suitable material in spite of the difficulty of the training which is imparted to them in the Institutions for this purpose so that they will help us to carry on the Police Administration and about whom we may legitimately feel proud.

Some reference was made to the Home Guards Organisation and as I understand, one Hon'ble Member seemed to consider that the demand in respect of national emergency including Civil Defence related to the expenditure on Home Guards. I must point out that the Home Guards Organisation is a voluntary Organisation. No body, except Officers who impart training and who are in charge of the entire Orgnnisation, are paid any salary. The Hon'ble members are aware that persons who are otherwise occupied either in the professions or in the Service are able to enlist themselves as Home Guards and receive diversified course of training which are provided for the training of the Home Guards. The Home Guards Organisation is one of the several elements which have to be built up for efficient system of civil defence, the necessity for which is unpredictable. Every State in the Indian Union, unless I am grossly mistaken, found itself taken unawares when we found ourselves in conflict with Pakistan in August-September, 1965 and in every State there must have been more or less the same degree of unpreparedness for meeting the necessities which were created by that conflict. Nevertheless, every State has endeavoured its utmost to gear up and build up the Civil Defence Establishment to quell the dangers posed by the conflict. I would like to inform the Hon'ble Members that those of us who have the privilege and distinction of belonging to the State of Mysore, have suffered one deprivation for centuries, that is, we have had no experience of what war meant and how it causes human miseries and sufferings to the millions of people, although our conflict with Pakistan lasted not more than two weeks. The suffering that has been inflicted on other citizens of the Indian Union, who do not have the privilege of belonging to the Mysore State, has been very considerable. The Hon'ble Members will be pained to learn that more than five lakhs of innocent, law-abiding and loyal citizens have suffered physical, mental and moral displacement as a consequence of this conflict.

6-00 P.M.

And to-day people who have their own homes, their own professions, their own property, and who are living respectable and honest lives, found themselves compelled, for no fault of their own, because of war forced by a neighbouring country, to stretch their hands for such doles as the Government can give them to enable them to subsist. But as a mark of our sympathy towards those suffering citizens, we have been,

(SRI M. V. RAMA RAO)

in our State, able to collect some blankets, warm-clothing and other material to the tune of about three lakhs of Rupees and we have been able to despatch these goods for the relief of those who have suffered this deprivation. I hope the Hon'ble Members will share my gratification that we have been able to do so through the voluntary services of our Police Foree; and I hope you will be kind to them. I commend my Demands for the acceptance of the House.

MR. SPEAKER.—Now, I will put the Demands to the vote of the House. The question is:

"That the Government be granted a sum not exceeding Rs. 57,73,500 under Demand No. 12-Jail, a sum not exceeding Rs. 6,50,10,000 under Demand No. 13-Police and a sum not exceeding Rs. 13,77,000 under Denand No. 41-Expenditure connected with the "National Emergency" to defray the charges which will come in the course of payment during the financial year ending with 31st day of March 1967."

The motion was adopted.

Half-an-Hour Discussion arising out of replies to Starred Question No. 242. *re:* Registration of Public Documents.

MR. SPEAKER.—There is Half-an-Hour Discussion. After that, we have to remember that tomorrow is Saturday and the Demand for tomorrow is a bit heavy. Therefore, the Members, the Whips and everybody will co-operate and see that we are able to go through it in time.

Now, Half-an-Hour Discussion raised by Sri V. S. Patil on the points arising out of the answers to Starred Question No. 242 for the 10th List *re:* Registration of Public Documents.

SRI V. S. PATIL (Belgaum-I).—Sir, the question that was asked by me was published in the Tenth List as Question No. 242. The main substance of the question was that in our Taluk, that is Belgaum Taluk, when we were in the Bombay State, the registration was effected by photo system; and by that system, whatever is written in the document, a photo gives the correct picture including the thumb impressions of the executants or that the witnesses. If there are any scratches by interpolations all these things are correctly represented by the photostat system that was followed for the last so many years in Belgaum; and the requirement of photo was done by the Bombay Government before that area was merged in this State. The question of this system was raked up in the first session of the Assembly here after the Reorganisation of the States. At that time, somewhere in 1958 or so, the